# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

KENDHOOLI *Kannada Weekly*

kendhooli.com/e-paper/

ಸಂಪುಟ - 02 । ಸಂಚಿಕೆ - 59 । ಪುಟ - 16 । ರೂ. 16/- । ಡಿಸೆಂಬರ್ 30 ರಿಂದ ಜನವರಿ 06, 2022

MAG(2)Npp/49/2020-21


**ಮನೆಗೆ ಬೆಂಕಿ ಬಿದ್ದಿದೆ ಸರ್, ಮಲಗಿದ್ದೀರಾ?**



ಡಿ.ಉಮಾಪತಿ
ಅವರ ಅಂಕಣದಲ್ಲಿ...

## ಬಿಟ್‌ಕಾಯಿನ್ ತನಿಖೆಯಲ್ಲಿ




# ಸಿಸಿಬಿ ಕಳ್ಳಾಟ..?!

**ಜಾರಕಿಹೊಳಿ ಜಾರುಬಂಡೆ ಆಟ!**

ಭಾಸ್ಕರ ರಾವ್ ಅವರ ಅಂಕಣದಲ್ಲಿ...

**ಸಂಕ್ರಾಂತಿ ನಂತರ ಬದಲಾವಣೆ ಪರ್ವ**

ಸೈನಿಕರ ಆತ್ಮಹತ್ಯೆ ಸೂತಕ

**ಭಾರತೀಯ ಸೇನೆಯಲ್ಲಿ ಆತಂಕ..!!**

# ಸರ್ಕಾರಿ ಶಾಲೆಗಳಲ್ಲಿ ರಚನಾತ್ಮಕ ಚಿಂತನೆಗಳಿಗೆ ಬರ ಬಂದಿದೆಯೇ?






ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ

ಸರ್ಕಾರಗಳಿಗೆ ಸಾಧ್ಯವಾದರೆ ಸ್ವಾತಂತ್ರ್ಯ ಚಳವಳಿಯ ಅರಿವುಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಮತ್ತು ಪಠ್ಯ ಪುಸ್ತಕಗಳಲ್ಲಿ ಆ ಕುರಿತ ಪಾಠಗಳನ್ನು ಅಳವಡಿಸಲಿ ಆದರೆ ಅದ್ಯಾವುದಕ್ಕೂ ಸಂಬಂಧವಿಲ್ಲದ 75 ನೇ ಸ್ವಾತಂತ್ರ್ಯೋತ್ಸವದ ಸುವರ್ಣೋತ್ಸವದ ನೆಪದಲ್ಲಿ ಪದವಿಪೂರ್ವಕಾಲೇಜುಗಳಿಗೆ ಸೂರ್ಯನಮಸ್ಕಾರ ಕಾರ್ಯಕ್ರಮ ಆಯೋಜಿಸಿದೆ! ನಿಜಕ್ಕೂ ಇದು ಒಂದು ರೀತಿ ಕೇಂದ್ರ ಸರ್ಕಾರದ ಉದ್ಧಟತನದ ವರ್ತನೆ ಎನಿಸುತ್ತದೆ. ಸೂರ್ಯನಮಸ್ಕಾರದಿಂದ ಆರೋಗ್ಯಕ್ಕೆ ಪೂರಕ ಎನ್ನುವುದರಲ್ಲಿ ಎರಡು ಮಾತಿಲ್ಲ ಆದರೆ ಈ ಸೂರ್ಯನಮಸ್ಕಾರ ಎನ್ನುವ ಮೂಲಕ ಕೇಂದ್ರ ಆರ್‌ಎಸ್‌ಎಸ್ ಅಜೆಂಡಾವನ್ನು ಎಲ್ಲೆಡೆ ಜಾರಿಗೊಳಿಸುವ ಮೂಲಕ ಗೊಂದಲಗಳನ್ನು ಸೃಷ್ಟಿಸುತ್ತಿದೆ.

ಈ ಬಗ್ಗೆ ಈಗಾಗಲೇ ರಾಜ್ಯಸರ್ಕಾರ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೂ ಇದನ್ನು ಜಾರಿಗೊಳಿಸುವ ಆಜ್ಞೆಯನ್ನು ಮಾಡಿದೆ.
ಈಗ ಎಲ್ಲಡೆ ಪರ–ವಿರೋಧಗಳ ಚರ್ಚೆಗಳು ನಡೆಯುತ್ತಿವೆ. ಯಾಕೆ ಇಂತಹ ಗೊಂದಲಗಳಿಗೆ ಎಡೆ ಮಾಡಿಕೊಡುತ್ತವೆ ಎನ್ನುವುದೇ  ಈಗ ದೊಡ್ಡ ವಿಷಯ. ಈ ರಾಜಕೀಯ ಪಕ್ಷಗಳಿಗೆ ಆ ಮೂಲಕವೇ ಆಡಳಿತದ ಮೇಲೆ ಇಂತ ಅನಗತ್ಯ ವಿಷಯಗಳನ್ನು ಜಾರಿ ಮಾಡುವ ಮೂಲಕ ತಮ್ಮ ಯೋಜಿತ ಕಾರ್ಯಗಳನ್ನು ಒತ್ತಾಯಪೂರ್ವಕವಾಗಿ ತೂರಿಸುತ್ತವೆ ಎನಿಸುತ್ತದೆ.

ವಿದ್ಯಾರ್ಥಿಗಳ ಸೃಜನಶೀಲತೆಗೆ ಅಭಿವ್ಯಕ್ತಿ ದೊರಕಿಸಿಕೊಡುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲು ಅವಕಾಶ ಇದೆ. ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಈಗಾಗಲೇ ಭಾಗವಹಿಸುತ್ತಿದ್ದಾರೆ. ಅದರ ಜೊತೆಗೆ ಹೆಚ್ಚುವರಿಯಾಗಿ ದೈಹಿಕ ಚಟುವಟಿಕೆಯನ್ನು ದಿಢೀರ್ ಹೇರಲು ಹೊರಟಿರುವುದನ್ನು ನೋಡಿದರೆ, ಶಿಕ್ಷಣ ಕ್ಷೇತ್ರದಲ್ಲಿ ರಚನಾತ್ಮಕ ಚಿಂತನೆಗಳಿಗೂ ಬರ ಬಂದಿದೆಯೇ? ಎನ್ನುವ ಅನುಮಾನ ಮೂಡುವಂತಿದೆ, ಪಿಯು ಹಂತ ವಿದ್ಯಾರ್ಥಿ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವೂ ಆಗಿರುವುದರಿಂದ, ಚರ್ಚೆ–ಸಂವಾದಗಳಂಥ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಗ್ನರಾಗಬೇಕಾದ ವಿದ್ಯಾರ್ಥಿಗಳ ಗಮನವನ್ನು ಕಾಲೇಜಿನ ಅವಧಿಯಲ್ಲಿ ಬೇರೆಡೆಗೆ ತಿರುಗಿಸುವ ಪ್ರಯತ್ನವು ಶೈಕ್ಷಣಿಕ ಹಿತಾಸಕ್ತಿಗೆ ಪೂರಕವಾದ ಚಿಂತನೆಯಲ್ಲ. ಆಸಕ್ತ ವಿದ್ಯಾರ್ಥಿಗಳು ತಂತಮ್ಮ ಮನೆಗಳಲ್ಲಿ ವ್ಯಾಯಾಮ ಅಥವಾ ಯೋಗ ಮಾಡುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಕೋವಿಡ್ ಸೋಂಕಿನ ಮೂರನೇ ಅಲೆಯ ಆತಂಕ ಬೂದಿ ಮುಚ್ಚಿದ ಕೆಂಡದಂತಿರುವ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರ ಅಚ್ಚರಿ ಹುಟ್ಟಿಸುವಂತಿದೆ. ಕೊರೊನಾ ಸೋಂಕು ತೀವ್ರವಾಗಿದ್ದ ಸಮಯದಲ್ಲಿ ಉದ್ಯಾನ ಹಾಗೂ ಜಿಮ್‌ಗಳ ಬಾಗಿಲು ಮುಚ್ಚಿಸಿದ್ದ ಸರ್ಕಾರವೇ ಈಗ ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಕಣ್ಣಾಮುಚ್ಚಾಲೆ ಆಡಲು ಹೊರಟಿದೆ. ಸೋಂಕಿನ ಆತಂಕದ ಸಮಯದಲ್ಲಿ ಸೂಕ್ತ ಮುನ್ನೆಚ್ಚರಿಕೆಗಳೊಂದಿಗೆ ಶಾಲಾ? ಕಾಲೇಜುಗಳನ್ನು ನಡೆಸುವುದೇ ಕಷ್ಟವಾಗಿರುವಾಗ, ಹೆಚ್ಚುವರಿಯಾಗಿ ಮತ್ತೇನೋ ಪಠ್ಯೇತರ ಚಟುವಟಿಕೆ ಬಗ್ಗೆ ಯೋಚಿಸುತ್ತಿರುವ ಸರ್ಕಾರದ ನಡೆಯು ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕವಾಗಿಲ್ಲ ಎಂದೇ ಹೇಳಬೇಕಾಗುತ್ತದೆ.

ಸ್ವಾತಂತ್ರ್ಯ ಹೋರಾಟವು ಭಾರತವನ್ನು ಬ್ರಿಟಿಷ್ ಆಡಳಿತದಿಂದ ಬಿಡುಗಡೆಗೊಳಿಸುವ ಆಶಯದ ಜೊತೆಗೆ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಆಶಯಗಳನ್ನು ಒಳಗೊಂಡಿತ್ತು. ಈ ನೆಲೆಯಲ್ಲಿ ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್ ಮುಂತಾದವರು ಪ್ರತಿಪಾದಿಸಿದ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಗಳಿಗೂ ಸೂರ್ಯ ನಮಸ್ಕಾರಕ್ಕೂ ಸಂಬಂಧವೇ ಇಲ್ಲ. ಒಂದುವೇಳೆ ಬೇರೆಬೇರೆ ಸಂಸ್ಥೆಗಳು ತಮ್ಮ ನಂಬಿಕೆ ಮತ್ತು ಆಚರಣೆಗಳನ್ನು ಆಧರಿಸಿ ಕೋಟ್ಯಂತರ ಜನರನ್ನು ಸೇರಿಸಲು ಅಪೇಕ್ಷೆಪಟ್ಟರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಧಿಕೃತವಾಗಿ ಭಾಗೀದಾರ ಆಗಬೇಕಾಗುತ್ತದೆ. ಭಾಗೀದಾರ ಆಗದಿದ್ದರೆ ಪಕ್ಷಪಾತವಾಗುತ್ತದೆ. ಇಷ್ಟಕ್ಕೂ ಸರ್ಕಾರಗಳು ಮಾಡಬೇಕಾದ ಕಾರ್ಯಕ್ರಮಗಳು ಬೇರೆಯೇ ಇವೆ.

ಬಹುಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಧಾರೆಗಳನ್ನು ಪರಿಚಯಿಸುವ ಮತ್ತು ದ್ವೇಷ ಬಿಟ್ಟು ದೇಶ ಕಟ್ಟುವ ದೇಶಭಕ್ತಿಯ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿ ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವ ಬದಲು ಸಂಸ್ಥೆಯೊಂದರ ಇಂತಹ ಕಾರ್ಯಕ್ರಮಕ್ಕೆ ಸರ್ಕಾರಗಳು ಅಧಿಕೃತವಾಗಿ ಆದ್ಯತೆ ನೀಡುವುದು ಹೋರಾಟ ಮತ್ತು ಸಂವಿಧಾನಾತ್ಮಕ ಆಶಯಗಳಿಗೆ ವಿರುದ್ಧವಾದ ನಡೆಯಾಗಿದೆ.

ಕಳೆದ ಏಳೂವರೆ ದಶಕಗಳಲ್ಲಿ ಸ್ವತಂತ್ರ ಭಾರತ ಎದುರಿಸಿದ ಸವಾಲುಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ದೇಶ ಮಾಡಿದ ಸಾಧನೆಗಳ ಬಗ್ಗೆ ಯುವ ಸಮೂಹಕ್ಕೆ ತಿಳಿವಳಿಕೆ ನೀಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಇಂಥ ಸೃಜನಶೀಲ ಕಾರ್ಯಕ್ರಮಗಳ ಬದಲು, ಅಮೃತ ಮಹೋತ್ಸವ ಆಚರಣೆಯನ್ನೇ ಕಸರತ್ತಿನ ಮಟ್ಟಕ್ಕೆ ಇಳಿಸಲು ಸರ್ಕಾರ ಹೊರಟಂತಿದೆ. ಸಂಸ್ಕೃತಿ, ಧರ್ಮದ ಹೆಸರಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ; ಶಿಕ್ಷಣವನ್ನು ಕೇಸರೀಕರಣಗೊಳಿಸಲಾಗುತ್ತಿದೆ ಎನ್ನುವ ಆರೋಪಗಳು ಸಾರ್ವಜನಿಕ ವಲಯದಲ್ಲಿವೆ.
ಇಂಥ ಆರೋಪಗಳಿಗೆ ಪುಷ್ಟಿ ನೀಡುವಂತೆ ಬಿಜೆಪಿ ನೇತೃತ್ವದ ಸರ್ಕಾರಗಳಿಂದ 'ಸೂರ್ಯ ನಮಸ್ಕಾರ'ದ ಬಳಕೆಯಾಗುತ್ತಿದೆ. 2012ರಲ್ಲಿ ರಾಜ್ಯದ ಎಲ್ಲ ಶಾಲಾ ಮಕ್ಕಳಿಗೆ ಸೂರ್ಯ ನಮಸ್ಕಾರವನ್ನು ಕಡ್ಡಾಯಗೊಳಿಸಿದ ಮಧ್ಯಪ್ರದೇಶ ಸರ್ಕಾರದ ಕ್ರಮ ತೀವ್ರ ಟೀಕೆಗೆ ಗುರಿಯಾಗಿತ್ತು. ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಶಿಕ್ಷಣ ಕೇಸರೀಕರಣದ ಪ್ರಯತ್ನ ಎಂದು ಮುಸ್ಲಿಂ ಸಮುದಾಯದ ಕೆಲವರು ಆಪಾದಿಸಿದ್ದರು. ಯೋಗ ಮತ್ತು ಸೂರ್ಯ ನಮಸ್ಕಾರ ವಿರೋಧಿಸುವವರನ್ನು ಸಮುದ್ರಕ್ಕೆ ಎಸೆಯುವಂತೆ ಇಲ್ಲವೇ ಭಾರತದಿಂದ ಹೊರಹಾಕುವಂತೆ 2015ರಲ್ಲಿ ಬಿಜೆಪಿ ಸಂಸದರಾಗಿದ್ದ, ಉತ್ತರಪ್ರದೇಶದ ಇಂದಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿಕೆ ನೀಡಿದ್ದರು. 2015ರಲ್ಲಿ ರಾಜಸ್ಥಾನ ಸರ್ಕಾರ ಕೂಡ ಶಾಲೆಗಳಲ್ಲಿ ಸೂರ್ಯ ನಮಸ್ಕಾರ ಕಡ್ಡಾಯಗೊಳಿಸಿತ್ತು. ಇಂಥ ನಿರ್ಣಯ ಹಾಗೂ ಹೇಳಿಕೆಗಳ ಹಿಂದೆ ಮಕ್ಕಳ ಕಾಳಜಿಗಿಂತಲೂ ಹೆಚ್ಚಾಗಿ ಧಾರ್ಮಿಕ ರಾಜಕಾರಣವೇ ಎದ್ದುಕಾಣುತ್ತದೆ. ವಿದ್ಯಾರ್ಥಿಗಳು ಬಯಸಿದಲ್ಲಿ ಶಾಲೆಗಳಲ್ಲಿ ಭಗವದ್ಗೀತೆಯ ಬೋಧನೆಗೆ ರಾಜ್ಯ ಸರ್ಕಾರಗಳು ಅವಕಾಶ ಮಾಡಿಕೊಡಬಹುದು ಎಂದು ಕೇಂದ್ರ ಶಿಕ್ಷಣ ಖಾತೆಯ ರಾಜ್ಯ ಸಚಿವೆ ಅನ್ನಪೂರ್ಣಾ ದೇವಿ ಅವರು ಲೋಕಸಭೆಯಲ್ಲಿ ನೀಡಿರುವ ಹೇಳಿಕೆ ಕೂಡ ಓಲೈಕೆ ರಾಜಕಾರಣದ ಭಾಗವಾಗಿದೆ. ಸಮುದಾಯಗಳ ನಡುವೆ ಬಿರುಕು ಹೆಚ್ಚುತ್ತಿರುವ ಸಂದರ್ಭದಲ್ಲಿ, ಸಾಮಾಜಿಕ ಸಾಮರಸ್ಯ ಮೂಡಿಸುವ ದಿಸೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಶಿಕ್ಷಣ ಕ್ಷೇತ್ರವನ್ನೂ ಬಗ್ಗಡಗೊಳಿಸುವ ಕೆಲಸವು ಬಹುತ್ವದ ಕಟ್ಟಡವನ್ನು ತಳಪಾಯ ಮಟ್ಟದಲ್ಲೇ ಶಿಥಿಲಗೊಳಿಸುವ ಪ್ರಯತ್ನವಾಗಿದೆ.

ಸರ್ಕಾರಗಳು ಅನಗತ್ಯವಾಗಿ ಇಂಥ ಹೇರಿಕೆಯನ್ನು ಬಿಟ್ಟು ಸಾಮಾಜಿಕ ಕಳಕಳಿ,ಇತಿಹಾಸ,ಇತಿಹಾಸ ನಾಯಕರ ಮತ್ತು ದೇಶದ ಚೇತನಗಳ ಕುರಿತು ಪಠ್ಯಗಳಲ್ಲಿ ಸೇರ್ಪಡಿಸಿದರೆ ಅದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗುತ್ತದೆ ಅವರ ಜ್ಞಾನಾರ್ಜನೆಗೂ ಉಪಯೋಗವಾಗುತ್ತದೆ ಆದರೆ ಇತ್ತೀಚಿನ ಸರ್ಕಾರಗಳು ತಮ್ಮ ಪಕ್ಷಗಳ ಯೋಜನೆಗಳನ್ನು ಶಾಲೆಗಳಿಗೂ ಕಡ್ಡಾಯಗೊಳಿಸುವ ಸಂಸ್ಕೃತಿ ಕಡಿಮೆಯಾಗಬೇಕು ರಾಜಕಾರಣ ಕೇವಲ ಆಡಳಿತದಲ್ಲಿ ಇದ್ದರೆ ಒಳಿತು ಅದು ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರಬಾರದು.



ಇಂಥವರು

# ಕಮಲಾ ಹ್ಯಾರಿಸ್ ಎನ್ನುವ ಅಸಾಧಾರಣ ಮಹಿಳೆ.!



ಆಕೆ ಗಟ್ಟಿಗಿತ್ತಿ ತನ್ನ ಹೋರಾಟದ ಮನೋಭಾವಗಳನ್ನು ನಿಭಾಯಿಸಿ ಇಡೀ ವಿಶ್ವವೇ ತನ್ನತ್ತ ನೋಡುವತ್ತ ರೂಪಿಸತವಾದವಳು ಎಂದರೆ ಆಕೆಯ ಸಾಧನೆ ಅಷ್ಟಿಷ್ಟಲ್ಲ ಒಬ್ಬಮಹಿಳೆ ತನ್ನನ್ನು ತಾನೂರ ಹಂತ ಹಂತವಾಗಿ ರೂಪಿಸಿಕೊಂಡು ಅಮೆರಿಕಾದಂತ ರಾಷ್ಟ್ರದಲ್ಲಿ ಉಪಾಧಕ್ಷೆಯಾಗುತ್ತಳೆ ಎಂದರೆ ಆಕೆ ಸವಿಸಿದ ಹಾದಿ ಇದೆಯಲ್ಲ ಅದು ಅಂತದ್ದೆ ಆಕೆಯ ಗಟ್ಟಿ ಧೈರ್ಯ ಸಾಹಸಗಳು ಇವೆಲ್ಲಕ್ಕೂ ಪೂರಕವಾಗಿಯೇ ಇವೆ.

ಈಕೆಯ ಕುರಿತು ಇತ್ತೀಚೆಗೆ ಕಮಲ ಹ್ಯಾರೀಸ್ ಅವರ ಜೀವನ ಚರಿತ್ರೆ ಕುರಿತು ಪುಸ್ತಕ ಹೊರಬಂದಿದೆ ಅದನ್ನು ಲೇಖಕ ಚಿದಾನಂದ ರಾಘಟ್ಟ ಅವರು 'ಅದ್ಭುತ ಮಹಳೆ–ಕಮಲ ಹ್ಯಾರಿಸ್' ಅವರ ಪುಸ್ತಕ ಅತ್ಯಂತ ರೋಚಕವಾಗಿದೆ  ಸುಮಾರು 320 ಪುಟಗಳ ಪುಸ್ತಕ. ಹಾರ್ಪರ್ ಕಾಲಿನ್ಸ್ ಇಂಡಿಯಾ ಪ್ರಕಟಣೆ. ಕಮಲಾ ಹ್ಯಾರಿಸ್ ಜೀವನ ಮತ್ತು ಕಾರ್ಯಗಳನ್ನು ಸಮಗ್ರವಾಗಿ ನಿರೂಪಿಸುವ ಮೂಲಕ ಈ ಪುಸ್ತಕ ಆ ವ್ಯಕ್ತಿಯನ್ನೇ ತೆರೆದ ಪುಸ್ತಕವನ್ನಾಗಿಸಿದೆ. ಕಮಲಾ ಹ್ಯಾರಿಸ್ ಹೆಸರಿನೊಂದಿಗೆ ಹಲವು ಮೊದಲುಗಳು ಸೇರಿಕೊಂಡಿವೆ. 2010ರಲ್ಲಿ ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ಆಗಿ ಸೇವೆ ಸಲ್ಲಿಸಿದ ಮೊದಲ ಆಫ್ರಿಕನ್–ಅಮೆರಿಕನ್ ಮಹಿಳೆ. 2016ರಲ್ಲಿ ಯುಎಸ್ ಸೆನೆಟ್‌ಗೆ ಆಯ್ಕೆಯಾದ ಇಂಡೋ–ಅಮೆರಿಕನ್ ಮಹಿಳೆ. ಉಪಾಧ್ಯಕ್ಷ ಹುದ್ದೆಗೇರಿದ ಹೋವರ್ಡ್ ವಿಶ್ವವಿದ್ಯಾನಿಲಯದ ಮೊದಲ ಪದವೀಧರೆ. ಅಮೆರಿಕದಲ್ಲಿ ಉಪಾಧ್ಯಕ್ಷೆಯಾದ ಭಾರತದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಸಹ ಕಮಲಾರದ್ದು. ಫೋರ್ಬ್–2021ರ ರ?ಯಾಂಕಿಂಗ್ ಪಟ್ಟಿಯಲ್ಲಿ ಎರಡನೇ ಅತ್ಯಂತ ಶಕ್ತಿಶಾಲಿ ಮಹಿಳೆಯಾಗಿ ಹೊರಹೊಮ್ಮಿದ್ದು ಕಡಿಮೆ ಸಾಧನೆಯಲ್ಲ. ಕಾನೂನು ಪದವಿ ಪಡೆದ ಸ್ವಲ್ಪ ಸಮಯದ ನಂತರ ಕ್ಯಾಲಿಫೋರ್ನಿಯಾದಲ್ಲಿ ವಕೀಲೆಯಾಗಿ ಕಮಲಾ ಕೆಲಸ ಪ್ರಾರಂಭಿಸುತ್ತಾರೆ. ನಂತರ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಮಕ್ಕಳ ನಿರ್ಲಕ್ಷ್ಯ ಹಾಗೂ ದುರುಪಯೋಗದ ಘಟನೆಗಳನ್ನು ಕುರಿತು ತನಿಖೆ ನಡೆಸುತ್ತಾರೆ. ಸ್ಯಾನ್‌ಫ್ರಾನ್ಸಿಸ್ಕೋ ನಗರದ ಇತಿಹಾಸದಲ್ಲೇ ಮೊದಲ ಮಹಿಳಾ ಅಟಾರ್ನಿ ಜನರಲ್ ಆಗಿದ್ದರು ಎಂಬುದು ಕೂಡ ಅವರ ಹೆಗ್ಗಳಿಕೆ. ನಂತರ ಕ್ಯಾಲಿಫೋರ್ನಿಯಾದ ಮೊದಲ ಚುನಾಯಿತ ಅಟಾರ್ನಿ ಜನರಲ್ ಆಗಿ ಸಹ ಅವರು ಆಯ್ಕೆಯಾಗುತ್ತಾರೆ. 2019ರಲ್ಲಿ ಮೊದಲ ಬಾರಿಗೆ ಡೆಮಾಕ್ರೆಟ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ, ನಂತರ ಹಿಂದೆ ಸರಿಯುತ್ತಾರೆ. ಕೊನೆಗೆ 2020ರಲ್ಲಿ ಜೋ ಬೈಡನ್ ಸರ್ಕಾರದ ಉಪಾಧ್ಯಕ್ಷೆಯಾಗಿ ಶ್ವೇತಭವನಕ್ಕೆ ತೆರಳುತ್ತಾರೆ. ಅಮೆರಿಕದಲ್ಲಿ ಅಸಾಧಾರಣ ಮಹಿಳೆಗೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ಈ ಐತಿಹಾಸಿಕ ಘಟನೆ ಸಾಕ್ಷಿಯಾಗುತ್ತದೆ. ಕೊರೋನಾ ಸಾಂಕ್ರಾಮಿಕದಂತಹ ಭಯಾನಕ ಕಾಲದಲ್ಲಿ ಕಮಲಾ ಅಧಿಕಾರಕ್ಕೆ ಬರುತ್ತಾರೆ.

ಯುನೈಟೆಡ್ ಸ್ಟೇಟ್ಸ್‌ನಂತಹ ಪೂರ್ವಗ್ರಹ ಪೀಡಿತ ಸಮಾಜದಲ್ಲಿ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆಯಾಗಿ ಪರಿಗಣಿಸಲಾಗಿದೆ, ಅದರಲ್ಲೂ ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ. ಆದಾಗ್ಯೂ ಇಲ್ಲಿ ಮಹತ್ವಾಕಾಂಕ್ಷೆಯುಳ್ಳ ಕಪ್ಪುವರ್ಣೀಯ ಮಹಿಳೆಯ ಜೀವನ ಮತ್ತು ಹೋರಾಟವನ್ನು ಲೇಖಕರು ಚಿತ್ರಿಸುವಲ್ಲಿ ಉದಾರತೆ ತೋರಿದ್ದಾರೆ.

ಕಮಲಾ ಹ್ಯಾರಿಸ್ ತಂದೆ ಡೊನಾಲ್ಡ್ ಹ್ಯಾರಿಸ್ ಜಮೈಕಾದವರು. ತಾಯಿ ಶ್ಯಾಮಲಾ ಗೋಪಾಲನ್ ಭಾರತದವರು. ವಿಜ್ಞಾನಿ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತೆ ಆಗಿದ್ದ ಕಮಲಾ ತಾಯಿ, ತಮ್ಮ ವೃತ್ತಿಜೀವನದ ಪ್ರತಿ ಹಂತದಲ್ಲೂ ಯುಎಸ್‌ನಲ್ಲಿ ಅಸ್ತಿತ್ವಕ್ಕಾಗಿ ಹೋರಾಡಬೇಕಾಯಿತು. ಅಮೆರಿಕದಲ್ಲಿ 1960ರ ಸಮಯದಲ್ಲಿ ಕಮಲಾ ಮತ್ತು ಮಾಯಾ ಎಂಬ ಇಬ್ಬರೂ ಹೆಣ್ಣುಮಕ್ಕಳನ್ನು ಸಿಂಗಲ್ ಪೇರೆಂಟ್ ಆಗಿ ನೋಡಿಕೊಳ್ಳುವುದು ಶ್ಯಾಮಲಾಗೆ ಸುಲಭವಾಗಿರಲಿಲ್ಲ. ನಿಸ್ಸಂದೇಹವಾಗಿ ಕಮಲಾ ತಾಯಿಯಂತೆ ಕಲ್ಲುಮುಳ್ಳಿನ ಹಾದಿಯಲ್ಲೇ ನಡೆದವರು. ಶ್ಯಾಮಲಾ ಸಂಪ್ರದಾಯಸ್ಥ ತಮಿಳು ಬ್ರಾಹ್ಮಣ ಕುಟುಂಬದಿಂದ ಸ್ವತಂತ್ರ ಎನ್‌ಆರ್‌ಐ ಆಗಿ, ಅಲ್ಲಿಂದ ಅಮೆರಿಕನ್ ಪ್ರಜೆಯಾಗಿ ರೂಪುಗೊಂಡಿದ್ದನ್ನು ಲೇಖಕರು ಎಳೆಎಳೆಯಾಗಿ ಚಿತ್ರಿಸಿದ್ದಾರೆ. ಶ್ಯಾಮಲಾ ತಮ್ಮಿಬ್ಬರು ಹೆಣ್ಣುಮಕ್ಕಳಿಗೆ ತಮ್ಮ ಸಾಂಸ್ಕೃತಿಕ ಗುರುತನ್ನು ಉಳಿಸಿಕೊಳ್ಳುವ ಸಲುವಾಗಿ ಭಾರತೀಯ ಪೌರಾಣಿಕ ಹೆಸರುಗಳನ್ನು ಇಟ್ಟಿದ್ದೇನೆಂದು ಒಮ್ಮೆ ಹೇಳಿಕೊಂಡಿದ್ದರು. ಕಮಲ ಕೆಸರಿನಲ್ಲಿ ಬೆಳೆಯುತ್ತದೆ ಹಾಗೂ ಶುದ್ಧತೆಯ ಸಂಕೇತವಾಗಿದೆ. ಕಮಲಾ 2020ರ ಚುನಾವಣಾ ಪ್ರಚಾರದುದ್ದಕ್ಕೂ ರಾಜಕೀಯ ಕೆಸರೆರಚಾಟಕ್ಕೆ ಒಳಗಾದಾಗ ಅದು ಸ್ಪಷ್ಟವಾಯಿತು. ಅಂದಹಾಗೆ ಕಮಲಾ ಅಯ್ಯರ್ ಹ್ಯಾರಿಸ್ ಆಗಿದ್ದ ಕಮಲಾ, ಕಮಲಾ ದೇವಿ ಹ್ಯಾರಿಸ್ ಆಗಿ ಬದಲಾದರು. ಮನೆಯ ಆಧಾರಸ್ತಂಭವಾಗಿದ್ದ ತಾಯಿ 2009ರಲ್ಲಿ ಕ್ಯಾನ್ಸರ್‌ನಿಂದ ತೀರಿಕೊಂಡಾಗ ಕಮಲಾರ ಹಾದಿ ಮತ್ತಷ್ಟು ಕಠಿಣವಾಯ್ತು. ಅಮೆರಿಕದ ಬಿಳಿಯನ್ನರು ಕಮಲಾರನ್ನು ಫಾರಿನರ್, ಆಂಕರ್ ಬೇಬಿ ಎಂದೆಲ್ಲಾ ಹೀಯಾಳಿಸಿದರು. ಟ್ರಂಪ್ ಕಮಲಾರನ್ನು ಬೇಕಂತಲೇ ಯಾವಾಗಲೂ 'ಕಮೀಲಾ' ಎಂದು ತಪ್ಪಾಗಿಯೇ ಕರೆಯುತ್ತಿದ್ದರು. ಉದ್ದೇಶಪೂರ್ವಕವಾಗಿಯೇ ಕೆಲವು ಬಲಪಂಥಿಯರು, ಟೀವಿ ನಿರೂಪಕರು, ರೇಡಿಯೋ ಜಾಕಿಗಳು, ಟ್ರೋಲರ್‌ಗಳು ಕಮಲಾ ಹೆಸರನ್ನು ತಪ್ಪಾಗಿ ಉಚ್ಚರಿಸುತ್ತಿದ್ದರು. ಲೇಖಕ ರಾಜಘಟ್ಟ ಪ್ರಕಾರ, ಕಮಲಾ ಸಂಕೋಚವಿಲ್ಲದೇ ತಾನು ಕಪ್ಪು ಎಂದೇ ಹೇಳಿಕೊಳ್ಳುತ್ತಿದ್ದರು.



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

## ಅನಾವರಣ

ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ
ಚಂದಾದಾರರ ವಿವರ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಅಭಿಮಾನವಿದ್ದರೆ ಮಹದಾಯಿ ಯೋಜನೆ ಜಾರಿಗೆ ಪಾದಯಾತ್ರೆ ಕೈಗೊಳ್ಳಿ

ರಾಜ್ಯದಲ್ಲಿ ಸದ್ಯದ ಮಟ್ಟಿಗೆ ಎಂಇಎಸ್ ಎನ್ನುವ ಸಂಘಟನೆಯನ್ನು ನಿಷೇಧ ಮಾಡಬೇಕು ಎನ್ನುವುದು ಎಲ್ಲರವಾದ. ಕನ್ನಡ ಬಾವುಟವನ್ನು ಸುಟ್ಟು ಕರ್ನಾಟಕಕ್ಕೆ ಅವಮಾನ ಮಾಡಿದ ಎಂಇಎಸ್ ಉದ್ದಟತನಕ್ಕೆ ಕಾಂಗ್ರೆಸ್ ಗಪ್‌ಚುಪ್ ಆಗಿದೆ ಎಲ್ಲರೂ ಅವರ ಅವರ ರಾಜಕೀಯ ನಿಲುವುಗಳೇ ಮುಖ್ಯವಾಗಿವಿಯೇ ಹೊರೆತು ರಾಜ್ಯದ ಹಿತಾಸಕ್ತಿ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ ಎನ್ನುವುದು ಪದೇ ಪದೇ ಇಂತ ಸಂದರ್ಭಗಳಲ್ಲಿ ರಾಷ್ಟ್ರೀಯ ಪಕ್ಷಗಳ ರಾಜಕಾರಣಿಗಳ ತಮ್ಮ ನಿಜ ಮುಖವನ್ನು ಪ್ರದರ್ಶಿಸಿದ್ದಾರೆ.

ಆದರೆ ರಾಜ್ಯದಲ್ಲಿ ಮೇಕೆದಾಟು ಯೋಜನೆ ಕುರಿತು ಕಾಂಗ್ರೆಸ್ ಪಾದೆಯಾತ್ರೆಗೆ ಸಜ್ಜಾಗಿ ನಿಂತಿದೆ. ಇದರ ಬದಲಿ ಎಂಇಎಸ್ ಎನ್ನುವ ಸಂಘಟನೆಯನ್ನು ನಿಷೇಧ ಮಾಡಲೇ ಬೇಕು ಮರಾಠಿಗರ ದರ್ಪಕ್ಕೆ ಕನ್ನಡಿಗರಾದ ನಾವು ಅರ ಹುಟ್ಟಡಗಿಸಬೇಕು ಎನ್ನುವ ನಿಲುವನ್ನು ತಾಳಿ ಬೆಳಗಾವಿಗೆ ಪಾದಯಾತ್ರೆ ಮಾಡಿ ರಾಜ್ಯ ಸರ್ಕಾರದ ಮೇಲೆ ಒತ್ತಡ ತರಲಿ.. ಆದರೆ ರಾಜಕೀಯ ಉದ್ದೇಶಗಳಿಗೆ ಮೇಕೆದಾಟು ಯೋಜನೆಯನ್ನಕೈಗೊಂಡಿರುವ ಕಾಂಗ್ರೆಸ್‌ಗೆ ನಿಜವಾದ ಈ ನಾಡಿನ ಜನರ ಮೇಲೆ ಪ್ರೀತಿ ಇದ್ದಿದ್ದರೆ ಮಹಾದಾಯಿ ಯೋಜನೆ ಬಗ್ಗೆ ಯಾಕೆ ನಿರಾಸಕ್ತಿ ಅದರ ಬಗ್ಗೆ ಯಾಕೆ ಹೋರಾಟ ಮಾಡುತ್ತಿಲ್ಲ .ಇನ್ನೂ ಕೃಷ್ಣ ಮೇಲ್ದಂಡೆ ಯೋಜನೆ ಕುರಿತ ವಿವಾದವೂ ಇದೆ ಅದರ ಕುರಿತು ಯಾಕೆ ಹೋರಾಟ ನಡೆಸುತ್ತಿಲ್ಲ ಎಲ್ಲವೂ ತಮ್ಮ ಹಿತಾಸಕ್ತಿಗಾಗಿಯೇ ಹೊರೆತು ಜನರ ಮೇಲೆ ಈ ರಾಜ್ಯದ ಮೇಲೆ ಇರುವ ವಿಶ್ವಾಸವಂತೂ ಅಲ್ಲವೇ ಅಲ್ಲ.

ಇದು ವಿಶೇಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತಮ್ಮ ಶಕ್ತಿ ಪ್ರದರ್ಶನ ಮಾಡಬೇಕು ಆ ಮೂಲಕ ಸಿಎಂ ಆಗುವ ಕನಸಿಗೆ ಇದು ನನಸಾಗಬಹುದು ಎನ್ನುವುದು ಇದರ ಮೂಲ ತಿರುಳು. ಯಾಕೆಂದರೆ ಅವರು ಈ ಮೇಕೆದಾಟು ಯೋಜನೆಗೆ ಯಾವೆಲ್ಲ ಜಿಲ್ಲೆಗಳಿಗೆ ಅನುಕೂಲವಾಗಲಿದೆ ಮತ್ತು ಆ ಜಿಲ್ಲೆಗಳಲ್ಲಿನ ಮತಗಳನ್ನು ಹೇಗೆ ಪಡೆಯಬಹುದು ಎನ್ನುವುದು ಇದರ ಹಿಂದೆ ಇರುವ ಲೆಕ್ಕಾಚಾರ. ಈ ಪಾದಯಾತ್ರೆ ಹೊರಟಿರುವುದು ಜನರ ದರ್ಶನಕ್ಕಂತೂ ಅಲ್ಲ ಜನರ ದರ್ಶನದ ನೆಪದಲ್ಲಿ ರಾಜಕೀಯ ಉದ್ದೇಶಗಳಿಗೆ ಮುಮದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದರೆ ತಾವು ಸಿಎಂ ಆಗಬಹುದು ಎನ್ನುವುದು ಡಿಕೆಶಿ ಅವರ ಬಲವಾದ ನಂಬಿಕೆ ಹೀಗಾಗಿಯೇ ಹಲವು ವಿರೋಧಗಳ ಮಧ್ಯೆಯೇ ತಾವು ಇತ್ತದ್ದೊಂದು ಪದಾಯಾತ್ರೆ ಮಾಡುವ ಮೂಲಕ ತನ್ನ ನೇತೃತ್ವದಲ್ಲಿ ಆದ ಪಾದಯಾತ್ರೆ ಯಶಸ್ವಿಯಾಗಿದ್ದು ತಾವು ಸಿಎಂ ಆಗಬಹುದು ಎನ್ನುವುದು ಅವರ ಕನಸಾಗಿದೆ. ಇನ್ನೊಂದು ಅಂಶವನ್ನು ಇಲ್ಲಿ ಹೇಳಬೇಕಾಗುತ್ತದೆ ಅವರು ಇದೇ ಮೇಕೆದಾಟು ಯೋಜನೆ ಜಾರಿಗೆ ಆಯ್ಕೆ ಮಾಡಿರುವ ಉದ್ದೇಶದ ಹಿಂದೆ ಇರುವುದು ಒಕ್ಕಲಿಗರ ಮತಗಳ ಬೇಟೆಗಾಗಿ ಜೆಡಿಎಸ್‌ನ ಬೆಲ್ಟ್ ಅನ್ನು ಒಡೆದು ತಮ್ಮ ತೆಕ್ಕೆಗೆ ಹಾಕಿಕೊಳ್ಳಬೇಕು ಎನ್ನುವ ಮನೋಬಲ ಅವರದ್ದು ಹಾಗಾಗಿಯೇ ಈ ಯೋಜನೆಯನ್ನು ಆಯ್ಕೆಮಾಡಿಕೊಂಡಿದ್ದಾರೆ ಹತ್ತು ದಿನಗಳ ಈ ಪಾದಯಾತ್ರೆ ಹತ್ತು ಜಿಲ್ಲೆಗಳು 87 ವಿಧಾನಸಭಾ ಕ್ಷೇತ್ರಗಳ ಮೇಲೆ ಕಣ್ಣಿಡಲಾಗಿದೆ ಕನಕಪುರ, ರಾಮನಗರ, ಮೈಸೂರು, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ ಮೈಸೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಮೇಲೆ ಕಣ್ಣಿಟ್ಟಿದ್ದು ಇವೆಲ್ಲವೂ ಜೆಡಿಎಸ್ ಬೆಲ್ಟ್ ಎನ್ನುವುದು ವಿಶೇಷ. ಅಲ್ಲದೆ ಒಕ್ಕಲಿಗ ಸಮುದಯಾಯದ ಮತಗಳೇ ನಿರ್ಣಾಯಕ ಹೀಗಾಗಿ ಈ ಎಲ್ಲಾ ಮತಗಳನ್ನು ಕೈನತ್ತ ವಿಶೇಷವಾಗಿ ಡಿಕೆಶಿ ನೇತೃತ್ವದಲ್ಲಿ ನಡೆದ ಈ ಪದಯಾತ್ರೆಯಿಂದ ಈ ಮತಗಳು ಕೈಗೆ ಬಂದಿವೆ ಎನ್ನುವ ಸಂದೇಶವನ್ನು ಹೈಕಮಾಂಡ್‌ಗೆ ಕಳಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಾವು ಸಿಎಂ ಆಗಬಹುದು ಎನ್ನುವುದು ಅವರಲ್ಲಿರುವ ಲೆಕ್ಕಾಚಾರ.

1999ರಲ್ಲಿ ಎಸ್‌ಎಂ ಕೃಷ್ಣ ಅವರು ಕೆಪಿಸಿಸಿ ಅಧ್ಯಕ್ಷರಾದ ವೇಳೆ ಪಾಂಚಜನ್ಯ ಮೂಲಕ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರು,ಆಗ ಒಕ್ಕಲಿಗ ಸಮುದಾಯ ಕೃಷ್ಣ ಅವರನ್ನು ಬೆಂಬಲಿಸಿತ್ತು . ರಾಜ್ಯದಲ್ಲೆಡೆ ಕಾಂಗ್ರೆಸ್ ಗಾಳಿ ಜೋರಾಗಿಯೇ ಬೀಸಿತ್ತು ಆದೇ ಲೆಕ್ಕಾಚಾರದಲ್ಲಿ ಈಗ ಡಿಕೆಶಿ ಈ ಪಾದಾಯಾತ್ರೆ ಮಾಡಲು ಹೊರಟಿದ್ದಾರೆ ಉದ್ದೇಶ ತಾವು ಸಿಎಂ ಆಗಬೇಕು ಎನ್ನುವ ಒಂದೇ ಛಲ . ಆ ಕಾರಣಕ್ಕಗಿಯೇ ಮೇಕೆದಾಟುಎನ್ನುವ ಯೋಜನೆ ಜಾರಿಗೆಒತ್ತಾಯಿಸಿ ಈ ನೆಪದಲ್ಲಿ ಪಾದಾಯಾತ್ರೆ ನಡೆಯುತ್ತಿದೆ. ಆದರೆ ಸಿದ್ದರಾಮಯ್ಯ ಲೆಕ್ಕಚಾರವೇ ಬೇರೆ ಇದೆ.

ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಹಲವಾರು ಜ್ವಲಂತ ಸಮಸ್ಯೆಗಳಿವೆ ಆದರೆ ಆದರ ಬಗ್ಗೆ ಕ್ಯಾರೆ ಅನ್ನದೆ ಕೇವಲ ಮೇಕೆದಾಟು ಯೋಜನೆಗೆ ಮಾತ್ರ ಒತ್ತಾಯಕ್ಕೆ ಮುಂದಾಗಿದೆ .ಈ ಕುರಿತು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಕೂಡ ಮಹಾದಾಯಿ ಯೋಜನೆಯನ್ನು ಜಾರಿಗೆ ಸರ್ಕಾರ ಬದ್ದವಾಗಿದೆ ಎಂದು ಹೇಳಿಕೆ ನೀಡಿದ್ದಾರೆ ಆದರೂ ಕಾಂಗ್ರೆಸ್ ಪಕ್ಷ ಪಾದಾಯಾತ್ರೆಗೆ ಹೊರಟು ನಿಂತಿದೆ, ಅದು ಕೊರೊನಾದ ಮತ್ತೊಂದು ತಳಿ ಓಮೈಕ್ರಾನ್ ಸೋಂಕು ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ ಜನರ ಗುಂಪು ಕಟ್ಟಿಕೊಂಡು ಹೋಗುವುದು ಯಾವ ಪುರುಷಾರ್ಥಕ್ಕೆ?

ನಿಮಗೆ ನಿಜವಾದ ಕಾಳಜಿ ಇದ್ದಿದ್ದರೆ ರಾಜ್ಯದ ಮೂರು ಸಮಸ್ಯೆಗಳಾದ ಕೃಷ್ಣ ಮೇಲ್ದಂಡೆ ಯೋಜನೆ, ಕಳಸಾ –ಬಂಡೂರಿ( ಮಹಾದಾಯಿ) ಯೋಜನೆ ಮತ್ತು ಮೇಕೆದಾಟು ಯೋಜನೆ ಕುರಿತಂತೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಯಾಕೆ ಚರ್ಚೆ ಮಾಡಲಿಲ್ಲ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಯಾದ ಈ ಮಹಾದಾಯಿ ಯೋಜನೆ ಅಲ್ಲಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆಗೆ ಈ ಯೋಜನೆ ಜಾರಿಯಾಗಿದೆ 1978ರಲ್ಲಿ ಇದರ ರೂಪರೇಷಗಳು ಒಳಗೊಂಡಿದ್ದರೂ ಕೂಡ ಇನ್ನೂ ಇದು ಜಾರಿಯಾಗಿಲ್ಲ 1996 ರಲ್ಲಿ ಇದರ ಬಗ್ಗೆ ಆಗಿನ ಗೋವ ಮತ್ತು ಕರ್ನಾಟಕದ ಇಬ್ಬರು ನೀರಾವರಿ ಸಚಿವರು ಕೂತ ನಡೆಸಿದ ಮಾತುಕತೆಯೂ ವಿಫಲವಾಗಿತ್ತು ಆಗಿನಿಂದಲೂ ನೆನಗುದಿಗೆ ಬಿದ್ದಿದೆ. ಮತ್ತೆ ಕಳೆದ ಐದು ವರ್ಷದ ಹಿಂದೆ ಇದರ ಜೀವ ಪಡೆದು ಹೋರಾಟಗಳು ನಡೆದವು ಕಳಸಾ–ಬಂಡೂರಿ ಹೋರಾಟ ಸಮಿತಿ ನಿರಂತರವಾಗಿ ಹೋರಾಟ ನಡೆಸಿತು ಆದರೂ ಅದರ ಪ್ರಯೋಜನವಾಗಲಿಲ್ಲ ಯಾವೊಬ್ಬ ರಾಜಕೀಯ ನಾಯಕರೂ ಅದರ ನೇತೃತ್ವ ವಹಿಸಲಿಲ್ಲ ಇರುವ ಪ್ರಾದೇಶಿಕ ಪಕ್ಷ ಜೆಡಿಎಸ್ ಕೇವಲ ಬೂಟಾಟಿಕೆ ಎನ್ನುವಂತೆ ಮಾತನಾಡಿ ತೆಪ್ಪಗಾಯಿತು ಯಾಕೆಂದರೆ ಅಲ್ಲಿನ ಜನರ ಬೆಂಬಲ ಜೆಡಿಎಸ್‌ಗೆ ಇಲ್ಲ ಎನ್ನುವ ಕಾರಣಕ್ಕೆ ಮತ್ತೆ ಅದರ ಬಗ್ಗೆ ಜೆಡಿಎಸ್ ದ್ವನಿ ಎತ್ತಲೇ ಇಲ್ಲ ಇನ್ನೂ ಎರಡು ರಾಷ್ಟ್ರೀಯ ಪಕ್ಷಗಳು ಗೋವಾ ತಂಟೆಗೆ ಹೋದರೆ ಹೈಕಮಾಂಡ್ ಕಿಡಿ ಕಾರುತ್ತದೆಎನ್ನುವ ಕಾರಣಕ್ಕೆ ಕಳಸಾ–ಬಂಡೂರಿ ಯೋಜನೆ ಕುರಿತು ತುಟಿಕ್‌ಪಿಟಿಕ್ ಎನ್ನುತ್ತಿಲ್ಲ ಹೀಗಿರುವಾಗ ಮಹಾದಾಯಿ ಯೋಜನೆ ಕುರಿತು ಹೋರಾಟ ನಡೆಸಲು ತಾಕತ್ತು ಇಲ್ಲದ ಕಾಂಗ್ರೆಸ್ ಪಕ್ಷ ಈಗ ಮೇಕೆದಾಟು ಯೋಜನೆ ಜಾರಿಗೆ ಕುರಿತು ನಡೆಸುತ್ತಿರುವ ಪಾದಾಯಾತ್ರೆ ಯಾವ ಉದ್ದೇಶಕ್ಕೆ ಎನ್ನುವುದು ಮೇಲೆ ಹೇಳಲಾಗಿದೆ.ಇಂತ ಬಂಡ ನಾಯಕರಿಗೆ ಜನರೇ ಉತ್ತರ ನೀಡಬೇಕು ಇಲ್ಲವಾದರೆ ಬಂಡತನ ಮತ್ತಷ್ಟು ಹೆಚ್ಚಾದರೆ ರಾಜ್ಯದ ಜನರಿಗೆ ಆಪತ್ತು.

# ಅರ್ಥವೇ ಕಳೆದುಕೊಳ್ಳುತ್ತಿರುವ ಬ್ರೇಕಿಂಗ್ ನ್ಯೂಸ್




## ಹಿಟ್ & ರನ್

ಮುದ್ರಣ ಮಾಧ್ಯಮದ ಸಂದರ್ಭದಲ್ಲಿ ಈ ಬ್ರೇಕಿಂಗ್ ನ್ಯೂಸ್‌ನ ಗೆ ಒಂದು ವೆಶೇಷ ಅರ್ಥವಿತ್ತು. ಇದೀಗ ಬಂದ ಸುದ್ದಿ ಎನ್ನುವುದು ಇದರ ಪರ್ಯಾಯ ಅರ್ಥವಾದರೂ ಅದನ್ನು ಎಲೆಕ್ಟ್ರಾನಿಕ್ ಮಾಧ್ಯಮಗಳು ಬ್ರೇಕಿಂಗ್ ನ್ಯೂಸ್ ಎಂಬ ಈ ಶಬ್ದಕ್ಕೆ ವಿಶೇಷ ಅರ್ಥವನ್ನು ನೀಡಿದರು.

ಈ ಬ್ರೇಕಿಂಗ್ ನ್ಯೂಸ್ ಎನ್ನುವುದು ಒಂದು ದೊಡ್ಡ ಸುದ್ದಿ ವಿಶೇಷ ಸುದ್ದಿ ಮತ್ತು ಇದು ಶಾಕಿಂಗ್ ಆಗಿರಬಹುದು ಅಥವಾ ಒಂದು ಸರ್ಕಾರವನ್ನು ಉರುಳಿಸುವ ಸುದ್ದಿಯೇ ಆಗಿರಬಹುದು ಆದರೆ ಈ ಬ್ರೇಕಿಂಗ್ ಸುದ್ದಿಗೆ ಬರು ಬರುತ್ತಾ ಅದರ ಅರ್ಥವೇ ಕಳೆದುಕೊಂಡು ಬಿಟ್ಟಿದೆ.

ಇತ್ತೀಚೆಗೆ ಎಲೆಕ್ಟ್ರಾನಿಕ್ ಮಾಧ್ಯಮಗಳು ಒಂದು ಬುಲಟಿನ್ ಸುದ್ದಿಯಲ್ಲಿ ಹತ್ತಾರು ಬ್ರೇಕಿಂಗ್ ಸುದ್ದಿಗಳೆಂದು ಪರದೆ ಮೇಲೆ ಪ್ರಸಾರ ಮಾಡುತ್ತಲೇ ಇವೆ. ನಿಜ! ಬ್ರೇಕಿಂಗ್ ಎಂದರೆ ಅದಕ್ಕೆ ದೊಡ್ಡ ಅರ್ಥವೇ ಇದೆ ಮುಖ್ಯಮಂತ್ರಿಯೊಬ್ಬರು ದಿಡೀರ್ ಅಂತ ರಾಜ್ಯಭವನಕ್ಕೆ ತೆರಳಿದರೆ ಅದು ಬ್ರೇಕಿಂಗ್ ಆಗಬಹುದು, ವಿರೋಧ ಪಕ್ಷದ ನಾಯಕ ದಾಖಲೆಗಳ ಸಮೇತ ಒಬ್ಬ ಸಚಿವ ಅಥವಾ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡುವ ಆ ತಕ್ಷಣ ಬ್ರೇಕಿಂಗ್ ನ್ಯೂಸ್ ಎಂದು ಪ್ರಸಾರ ಮಾಡಬಹುದು ಆದರೆ ಇಂದು ಏನಾಗಿದೆ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ ಅದು ಬ್ರೇಕಿಂಗ್ ನ್ಯೂಸ್ ಆಗಿ ಬರುತ್ತದೆ. ಒಂದು ಬೈಕ್ ಅಫಘಾತವಾದರೂ ಬ್ರೇಕಿಂಗ್ ನ್ಯೂಸ್ ಆಗಿ ಬರುತ್ತಿದೆ . ಇನ್ಯಾವುದೋ ಚಾನಲ್ ಒಂದು ಸುದ್ದಿ ಪ್ರಸಾರ ಮಾಡುತ್ತಿದ್ದಂತೆ ಅದನ್ನೇ ಬ್ರೇಕಿಂಗ್ ನ್ಯೂಸ್ ಎಂದು ತಗೆದುಕೊಳ್ಳುವುದು ಒಂದು ಚಾಳಿಯಾಗಿಬಿಟ್ಟಿದೆ.

ಬ್ರೇಕಿಂಗ್ ನ್ಯೂಸ್‌ಗೆ ಅರ್ಥವೇ ಇಲ್ಲದಂತಾಗಿದೆ. ಯಾವುದನ್ನು ಬ್ರೇಕಿಂಗ್ ನ್ಯೂಸ್ ಆಗಿ ಯಾವುದನ್ನು ಸ್ಕ್ರಾಲ್ ಆಗಿ ಪ್ರಸಾರ ಮಾಡಬೇಕು ಎನ್ನುವ ಸೂಕ್ಷ್ಮತೆಯೂ ಇನ್‌ಪುಟ್‌ನಲ್ಲಿ ಕೆಲಸ ನಿರ್ವಹಿಸುವ ಪತ್ರಕರ್ತರಿಗೆ ತಿಳಿದಿಲ್ಲ ಎಂದರೆ ಹೇಗೆ. ಅಂತದ್ದನ್ನು ನೋಡಿಕೊಂಡು ಸಂಪಾದಕರು ಅದನ್ನೇ ಅಸ್ವಾದಿಸುತ್ತಾರೆ ಎಂದರೆ ಅದಕ್ಕಿಂತ ದುರ್ದೈವದ ಸಂಗತಿ ಇನ್ನೊಂದಿಲ್ಲ.

ಹೌದು ಒಬ್ಬ ಸಂಪಾದಕರಿಗೆ ಒಂದು ಸುದ್ದಿಯನ್ನು ಹೇಗೆ ಎಷ್ಟು ಸಮಯ ,ಯಾವ ಸಮಯದಲ್ಲಿ ಅದು ಸೂಕ್ತವಾಗುತ್ತದೆ ಎನ್ನುವ ಪರಿಜ್ಞಾನ ಇರಬೇಕು ಇಲ್ಲವೆಂದರೆ ಅರ್ಥಗಳೇ ಕಳೆದುಕೊಂಡು ಬಿಡುತ್ತವೆ ಇಂದು ಆಗಿರುವುದು ಅದೆಯೇ.ಸುದ್ದಿಗಳಿಗೆ ಅರ್ಥವೇ ಇಲ್ಲದಂತಾಗಿದೆ ಯಾವ ಸುದ್ದಿಗಳು ಯಾವಾಗ ಬೇಕಾದರೂ ಪ್ರಸಾರವಾಗಿಬಿಡುತ್ತವೆ ಅದಕ್ಕೊಂದು ನಿಯಮವೇ ಇಲ್ಲದಂತಾಗಿದೆ.

# ಮನೆಗೆ ಬೆಂಕಿ ಬಿದ್ದಿದೆ ಸರ್, ಮಲಗಿದ್ದೀರಾ?

ದೆಹಲಿ ದೃಷ್ಟಿ

ಡಿ.ಉಮಾಪತಿ
ಹಿರಿಯ ಪತ್ರಕರ್ತರು



ಮೊನ್ನೆ ಹರಿದ್ವಾರದಲ್ಲಿ ಜರುಗಿದ ಸಾಧು ಸಂತರ ಧರ್ಮಸಂಸತ್ತು ದೇಶವಾಸಿ ಮುಸಲ್ಮಾನರನ್ನು ಕೊಂದು ಹಿಂದೂ ರಾಷ್ಟ್ರ ಸ್ಥಾಪಿಸಬೇಕೆಂಬುದಾಗಿ ಕರೆ ನೀಡಿದ್ದು ಮತ್ತು ಮಾಜಿ ಪ್ರಧಾನಿಗೆ ಸಂಸತ್ತಿನಲ್ಲೇ ಗೋಡ್ಸೆಯಂತೆ ಗುಂಡಿಕ್ಕಿ ಕೊಲ್ಲುವ ಮಾತುಗಳು ಅತ್ಯಂತ ಆಘಾತಕಾರಿ ವಿದ್ಯಮಾನ. ನರಮೇಧಕ್ಕೆ ನೀಡಿದ ನೇರ ಆಹ್ವಾನ. ಭವಿಷ್ಯದ ಭಯಾನಕ ಚಿತ್ರ. ವ್ಯಾಧಿ ಉಲ್ಬಣಿಸಿದ ಸಂಕೇತ.



ಸ್ವಚ್ಛಭಾರತದ ಆಂದೋಲನದ ಗೂಢಾರ್ಥ ಅಲ್ಪಸಂಖ್ಯಾತರು– ಆನಂತರ ದಲಿತ ಆದಿವಾಸಿಗಳ ಗುಡಿಸಿ ಹಾಕುವ ಆಂದೋಲನ ಎಂಬ ಗುಮಾನಿ ನೂರಕ್ಕೆ ನೂರು ನಿಜರೂಪ ಧರಿಸತೊಡಗಿದೆ.

ಹಿಂದೂ ರಾಷ್ಟ್ರ ನಿರ್ಮಿಸಲು ಹೋರಾಡಬೇಕು, ಸಾಯಬೇಕು ಅಗತ್ಯ ಬಿದ್ದರೆ ಕೊಲ್ಲಬೇಕು ಎಂಬುದಾಗಿ ನವದೆಹಲಿಯಲ್ಲಿ ನಡೆದ ಹಿಂದೂ ಯುವವಾಹಿನಿಯ ಸಮಾವೇಶ ಪಣ ತೊಟ್ಟಿತು.

ಮುಸಲರ ಹತ್ಯೆಗೆ ಕೇವಲ ಖಡ್ಗವನ್ನು ಬಳಸಿದರೆ ಸಾಲದು. ?.ಅವರ ಬಳಿ ಅತ್ಯಾಧುನಿಕ ಹತಾರುಗಳಿವೆ. ಹೀಗಾಗಿ ತಾಂತ್ರಿಕವಾಗಿ ನಾವು ಮೇಲ್ದರ್ಜೆಗೇರಬೇಕಿದೆ ಎಂದು ಸರಸ್ವತಿಯವರು ಸಾರುವ ವಿಡಿಯೋ ವೈರಲ್ ಆಗಿದೆ. 'ಹೆಚ್ಚು ಹೆಚ್ಚು ಮಕ್ಕಳ ಹುಟ್ಟಿಸಿರಿ, ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ಅತ್ಯುತ್ತಮ ಹತಾರುಗಳನ್ನು ಹೊಂದಿಸಿ ಇಟ್ಟುಕೊಳ್ಳಿರಿ' ಎಂದು ಯತಿ ನರಸಿಂಘಾನಂದ ಸರಸ್ವತಿ ಎಂಬಾತ ಹೇಳುತ್ತಿದ್ದಾನೆ.

ಸಾಧು ಧರ್ಮದಾಸ್ ಮಹಾರಾಜ್ ಮಾತುಗಳು ಹೀಗಿವೆ– 'ದೇಶದ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕು ಮುಸಲ್ಮಾನರದು ಎಂದು ನಮ್ಮ ಅಂದಿನ ಪ್ರಧಾನಮಂತ್ರಿ (ಮನಮೋಹನಸಿಂಗ್) ಹೇಳಿದ್ದ ಕೇಳಿದೆ. ನಾನೊಬ್ಬ ಸಂಸದನಾಗಿದ್ದು ನನ್ನ ಬಳಿ ರಿವಾಲ್ವರ್ ಇದ್ದಿದ್ದರೆ ನಾಥುರಾಮ್ ಗೋಡ್ಸೆಯಾಗಿ ಮನಮೋಹನ್ ಸಿಂಗ್ ಎದೆಗೆ ಆರು ಕಾಡತೂಸುಗಳನ್ನು ಸಿಡಿಸುತ್ತಿದ್ದೆ' (ಆದರೆ ಮನಮೋಹನಸಿಂಗ್ ಇಂತಹ ಹೇಳಿಕೆ ನೀಡಿರುವ ಯಾವುದೇ ದಾಖಲೆಗಳಿಲ್ಲ. 2006ರಲ್ಲಿ ಜರುಗಿದ ರಾಷ್ಟ್ರೀ ಅಭಿವೃದ್ಧಿ ಮಂಡಳಿಯ ಸಭೆಯನ್ನು ಉದ್ದೇಶಿಸಿ ಅವರು ಹೇಳಿದ್ದಿಷ್ಟೇ– 'ಅಭಿವೃದ್ಧಿಯ ಫಲಗಳನ್ನು ನ್ಯಾಯಯುತವಾಗಿ ಹಂಚಿಕೊಳ್ಳುವಂತೆ ಮುಸಲ್ಮಾನರಿಗೆ ಚೈತನ್ಯ ನೀಡುವ ನವೀನ ದಾರಿಗಳನ್ನು ಸರ್ಕಾರ ರೂಪಿಸಬೇಕಿದೆ'.



ಛತ್ತೀಸಗಢದಲ್ಲಿ ಜರುಗಿದ ಮತ್ತೊಂದು ಅಧರ್ಮಸಂಸತ್ತಿನ ವೇದಿಕೆಯಲ್ಲಿ ಗಾಂಧೀ ಹಂತಕ ನಾಥೂರಾಮ ಗೋಡ್ಸೆಗೆ ಕೈಯೆತ್ತಿ ಮುಗಿದು, ದೇಶದ ಸತ್ಯಾನಾಶ ಮಾಡಿದ ಹರಾಮಖೋರ ಎಂದು ಗಾಂಧೀಜಿಯನ್ನು ನಿಂದಿಸಲಾಯಿತು.

ಗಾಂಧೀಜಿಯ ಘೋರನಿಂದನೆ ಮಾಡಿದ ಕುರಿತು ತನಗೆ ಯಾವುದೇ ಪಶ್ಚಾತ್ತಾಪ ಇಲ್ಲವೆಂದು ಕಾಳೀಚರಣ ಮಹಾರಾಜ ಎಂಬ ತಥಾಕಥಿತ ಸಂತ ಸಾರಿದ್ದಾನೆ. ಕಾಂಗ್ರೆಸ್ ಆಡಳಿತವಿರುವ ಛತ್ತೀಸಗಢ ಸರ್ಕಾರ ಮತ್ತು ಶಿವಸೇನೆ–ಕಾಂಗ್ರೆಸ್–ಎನ್.ಸಿ.ಪಿ. ಸಮ್ಮಿಶ್ರ ಆಡಳಿತವಿರುವ ಮಹಾರಾಷ್ಟ್ರ ಸರ್ಕಾರ ಈ ಸಂತನ ವಿರುದ್ಧ ಕಾನೂನು ಕ್ರಮ ಜರುಗಿಸಿವೆ.

ಆದರೆ ಹರಿದ್ವಾರದಲ್ಲಿ ಕೋಮುವಾದಿ ವಿಷಕಾರಿದ ಕಾರ್ಕೋಟಕ ಸಂತರ ಕೂದಲೂ ಕೊಂಕಿಲ್ಲ ಬಿಜೆಪಿ ಆಡಳಿತವಿರುವ ಉತ್ತರಾಖಂಡ ಸರ್ಕಾರವಾಗಲೀ, ಮೋದಿ ಸರ್ಕಾರವಾಗಲಿ ಮುಸಲ್ಮಾನರ ನರಮೇಧದ ಕರೆ ಕುರಿತು ತುಟಿ ಬಿಚ್ಚಿಲ್ಲ.

''ಧರ್ಮಗಳು ಬೇರೆ ಬೇರೆಯಾದರೂ ಎಲ್ಲ ಭಾರತೀಯರದು ಒಂದೇ ರಕ್ತ, ಒಂದೇ ಡಿ.ಎನ್.ಎ. ಹೀಗಾಗಿ ಮುಸಲ್ಮಾನರು ಭಯದ ಆವರ್ತದಲ್ಲಿ ಸಿಕ್ಕಿಹಾಕಿಕೊಳ್ಳಬಾರದು. ಪೂಜೆ ಪ್ರಾರ್ಥನೆಯ ಆಧಾರದ ಮೇಲೆ ಜನರ ನಡುವೆ ಭೇದ ಭಾವ ಎಣಿಸುವುದು ಸಲ್ಲದು. ಗುಂಪಾಗಿ ಬಡಿದು ಕೊಲ್ಲುವವರು ಹಿಂದುತ್ವದ ವಿರೋಧಿಗಳು. ಹಿಂದು–ಮುಸ್ಲಿಮ್ ಘರ್ಷಣೆಗಳಿಗೆ ಪರಿಹಾರ ಮಾತುಕತೆಯೇ ವಿನಾ ವೈಮನಸ್ಯ ಅಲ್ಲ'' ಎಂಬ ಆರೆಸ್ಸೆಸ್ ಮುಖ್ಯಸ್ಥರ ಮಾತುಗಳಿಗೆ ಅರ್ಥವೇನು ಎಂದು ಜಗ್ಗಿಸಿ ಕೇಳಬೇಕಿದೆ.

ಮುಸಲ್ಮಾನರ ಸಂಹಾರಕ್ಕೆ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳುವಂತೆ ನೀಡಿರುವ ಕರೆ ಹಿಂಸಾತ್ಮಕ ಮತ್ತು ಜನಾಂಗೀಯ ಹತ್ಯೆಗೆ ಆಹ್ವಾನ. ಉಳಿದೆಲ್ಲ ಧರ್ಮೀಯರಿಗೆ ಸಮಾನತೆಯನ್ನು ನಿರಾಕರಿಸಿ ಅಡಿಯಾಳುಗಳನ್ನಾಗಿಸುವ ಹಿಂದುರಾಷ್ಟ್ರದ ಪರಿಕಲ್ಪನೆ. ನಮ್ಮ ಸಂವಿಧಾನದ ಸಹಬಾಳುವೆಯ ಆಶಯಕ್ಕೆ ಎಸೆದ ನೇರ ಸವಾಲು. ಕೋಮುವಾದಿ ಕಾರ್ಕೋಟಕ ವಿಷವನ್ನು ಕಾರುವ ಈ ಉನ್ಮಾದಕಾರಿ ಕೃತ್ಯಕ್ಕೆ ದೇಶವನ್ನು ಆಳುವವರು ಪ್ರತ್ಯಕ್ಷ ಪರೋಕ್ಷ ಕುಮ್ಮಕ್ಕು ನೀಡತೊಡಗಿದ್ದಾರೆ. ರಕ್ಷಣೆಯನ್ನೂ ಒದಗಿಸುತ್ತಿದ್ದಾರೆ. ಹೀಗಾಗಿಯೇ ಈ ಶಕ್ತಿಗಳಿಗೆ ಕಾನೂನಿನ ಭಯವಿಲ್ಲ. ಏನು ಮಹಾ ಆದೀತು, ಹೆಚ್ಚೆಂದರೆ ಒಂದು ಎಫ್.ಐ.ಆರ್. ಎಂಬ ಉಡಾಫೆ ಮೂಡಿದೆ.



'ದೇಶ್ ಕೇ ಗದ್ದಾರೋಂ ಕೋ ಗೋಲಿ ಮಾರೋ ಸಾಲೋಂಕೋ' ಎಂಬುದಾಗಿ ದೆಹಲಿಯ ಬಹಿರಂಗಸಭೆಯಲ್ಲಿ ಘೋಷಣೆ ಕೂಗಿಸಿದ ಕೇಂದ್ರ ರಾಜ್ಯ ಸಚಿವ ಅನುರಾಗ್ ಠಾಕೂರ್ ಎಂಬ ಕಿರಿಯ ಮಂತ್ರಿಯ ಮೇಲೆ ಕ್ರಮ ಜರುಗಲಿಲ್ಲ. ಬದಲಿಗೆ ಮೋದಿಯವರ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ದರ್ಜೆಗೆ ಬಡ್ತಿ ನೀಡಿ ಸಮ್ಮಾನಿಸಲಾಯಿತು.

ನೆರೆಹೊರೆಯ ಉತ್ತರಪ್ರದೇಶ, ಹಿಮಾಚಲಪ್ರದೇಶ ಹಾಗೂ ಪಂಜಾಬಿನ ಜೊತೆಗೆ ಉತ್ತರಾಖಂಡವೂ ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳನ್ನು ಎದುರಿಸಿದೆ. ಮೂರೂ ರಾಜ್ಯಗಳಲ್ಲಿ ಕೋಮುವಾದಿ ಧೃವೀಕರಣ ರಾಜಕಾರಣದ ವಿಷಸರ್ಪ ಭುಸುಗುಟ್ಟಿ ಫೂತ್ಕರಿಸಿದೆ. ಮುಸಲ್ಮಾನರ ನರಮೇಧಕ್ಕೆ ನೀಡಿದ ಕರೆಯು ಮುಸಲ್ಮಾನರಿಂದಲೂ ಇಂತಹುದೇ ವಿಪರೀತ ಪ್ರತಿಕ್ರಿಯೆಯನ್ನು ಪ್ರಜ್ಞಾಪೂರ್ವಕವಾಗಿ ಬಯಸಿದೆ.

2013ರಲ್ಲಿ ಯೂಪಿ ಬಿಹಾರದ ಉದ್ದಗಲಕ್ಕೆ ಬೀಸಿದ ಕೋಮುವಾದಿ ವಿಷಗಾಳಿ 2014ರ ಚುನಾವಣೆಗಳನ್ನು ಭರ್ಜರಿಯಾಗಿ ಬಿಜೆಪಿಗೆ ಗೆಲ್ಲಿಸಿಕೊಟ್ಟಿತ್ತಲ್ಲ. ಈ ಭೂಕಂಪದ ಕಂಪನಕೇಂದ್ರ ಪಶ್ಚಿಮೀ ಉತ್ತರಪ್ರದೇಶವೇ ಆಗಿತ್ತು. ಈ ಸೀಮೆಯ ರೈತಶಕ್ತಿ ಇದೀಗ ಆಳುವವರ ಮಗ್ಗುಲ ಮುಳ್ಳಾಗಿ ಅವರ ಚಿಂತೆಗೆ ಕಾರಣವಾಗಿದೆ. ಹರಿದ್ವಾರ ಉತ್ತರಾಖಂಡದ ಭೂಭಾಗವೆನ್ನುವುದು ಹೌದು. ಆದರೆ ಪಶ್ಚಿಮೀ ಉತ್ತರಪ್ರದೇಶವೇ ಅದರ ನೆರೆಹೊರೆ. ಹೀಗಾಗಿ ಮುಸ್ಲಿಮ್ ನರಮೇಧದ ಕರೆ ಪಶ್ಚಿಮೀ ಉತ್ತರಪ್ರದೇಶದಲ್ಲಿ ಧೃವೀಕರಣ ಬಿತ್ತುವ ನಿಚ್ಚಳ ಪ್ರಯತ್ನ.

ಮನೆಗಳನ್ನು ಮನಸುಗಳನ್ನು ಒಡೆಯುವ ಇಂತಹ ಅಪಾಯಕಾರಿ ಧೃವೀಕರಣದ ರಾಜಕಾರಣ ಕೊಂಚ ಕಾಲ ಬಿಜೆಪಿ ಬಲಗೊಳ್ಳಬಹುದು. ಆದರೆ ದೇಶ ದುರ್ಬಲವಾಗುತ್ತದೆ. ಸಾಮರಸ್ಯದ ಸಾಮಾಜಿಕ ಹಂದರ ಚಿಂದಿಯಾಗುತ್ತದೆ. ದೇಶ ಮೊದಲು ಎಂದು ಸಾರುವವರು ಆಡಿದ ಮಾತನ್ನು ನಡೆಸಿಕೊಡಬೇಕು.

ರಾಜಕಾರಣದ ಹಿಂದೂಕರಣ ಮತ್ತು ಹಿಂದೂಕರಣದ ಸೈನ್ಯೀಕರಣ ಎಂಬುದೇ ಅತ್ಯುತ್ತಮ ಮತ್ತು ದೂರದರ್ಶಿತ್ವದ ಹಿಂದೂ ರಾಷ್ಟ್ರರಾಜಕಾರಣ ಎಂಬುದು ಸಾವರ್ಕರ್ ಪ್ರಣೀತ ಸಿದ್ಧಾಂತ. ದೇಶದಲ್ಲಿಂದು ಇದೇ ಸಿದ್ಧಾಂತವನ್ನು ಜಾರಿಗೆ ತರಲಾಗುತ್ತಿದೆ.

ಧರ್ಮದ ಹೆಸರಿನ ಧರ್ಮಾಂಧತೆ ಪ್ರತ್ಯೇಕವಾದಕ್ಕೆ ದಾರಿ ಮಾಡುತ್ತದೆ. ಪ್ರತ್ಯೇಕವಾದವು ಭಯೋತ್ಪಾದನೆಯನ್ನು ಹುಟ್ಟಿ ಹಾಕೀತು. ತಾಲೀಬಾನಿ ಲಷ್ಕರ್ ಎ ತೊಯ್ಬಾ, ಐ.ಎಸ್.ಐ.ಎಸ್. ಮುಂತಾದ ಮತಾಂಧ ಮುಸ್ಲಿಮ್ ಸಂಘಟನೆಗಳೇ ಈ ಮಾತಿಗೆ ಉದಾಹರಣೆ.

ಕಡು ದ್ವೇಷವನ್ನು ಬಿತ್ತಿ ಕೋಮುಗಲಭೆಗಳಿಗೆ ಕಿಡಿ ಹೊತ್ತಿಸಿ ಚುನಾವಣೆ ಬೇಳೆ ಬೇಯಿಸಿಕೊಳ್ಳುವುದು ನಿಜ ಅರ್ಥದಲ್ಲಿ ದೇಶದ್ರೋಹದ ಕೃತ್ಯ. ಇದರ ವಿರುದ್ಧ ಗಣ್ಯ ವ್ಯಕ್ತಿಗಳು– ಪೌರಸಮಾಜ ಗಟ್ಟಿ ದನಿಯೆತ್ತಬೇಕಿದೆ.

ಹಿಂದೀಯ ಬಹುಮುಖ್ಯ ಕವಿಗಳಲ್ಲಿ ಒಬ್ಬರಾಗಿದ್ದ ಸರ್ವೇಶ್ವರ ದಯಾಳ ಸಕ್ಸೇನಾ ಅವರ ಈ ಕವಿತೆ ದಶಕಗಳ ಹಿಂದೆ ಬರೆದದ್ದು. ನನ್ನ ಅನುವಾದ ತೆಳುವೆನಿಸಿದರೆ ಕ್ಷಮಿಸಿ.

ದೇಶವೆಂಬುದು ಕಾಗದದ ಮೇಲೆ ಬಿಡಿಸಿದ ನಕ್ಷೆಯಲ್ಲ
ನಿಮ್ಮ ಮನೆಯ
ಒಂದು ಕೋಣೆಗೆ ಬೆಂಕಿ ಬಿದ್ದಿದೆಯಾದರೆ
ಮತ್ತೊಂದು ಕೋಣೆಯಲಿ
ಮಲಗಿ ನಿದ್ರಿಸಬಲ್ಲಿರಾ ನೀವು?
ನಿಮ್ಮ ಮನೆಯ ಒಂದು ಕೋಣೆಯಲಿ
ಹೆಣ ಬಿದ್ದು ಕೊಳೆಯುತ್ತಿದ್ದರೆ
ಇನ್ನೊಂದು ಕೋಣೆಯಲಿ
ಪ್ರಾರ್ಥಿಸಬಲ್ಲಿರಾ
ನೀವು?
ಹೌದು ಎಂಬುದೇ ನಿಮ್ಮ
ಉತ್ತರವಾಗಿದ್ದರೆ
ನಿಮ್ಮೊಡನೆ ಮಾತಾಡುವುದು
ಏನೂ ಉಳಿದಿಲ್ಲ ನನಗೆ.
ದೇಶವೆಂಬುದು ಬರಿದೇ ಕಾಗದದ ಮೇಲೆ
ಬರೆದ ನಕ್ಷೆಯಲ್ಲ
ಒಂದು ಹಿಸ್ಸೆ ಹರಿದು ಹೋದರೆ
ಬಾಕಿ ಹಿಸ್ಸೆಯು ಬಾಧಿತವಾಗದೆ ಉಳಿದು
ಹೋಗುವುದಿಲ್ಲ ಮತ್ತು
ನದಿಗಳು ಪರ್ವತ ಶಹರು ಹಳ್ಳಿ
ತಮ್ಮ ತಮ್ಮ ಜಾಗೆಗಳಲ್ಲಿ ಹಾಗೇ
ಇಡಿಯಾಗಿ ಕಂಡು ಉದಾಸೀನ
ಉಳಿಯುವುದಿಲ್ಲ.
ಮಾನವ ಜೀವಕಿಂತ ಮಿಗಿಲೆನಿಸಿದ್ದು
ಇನ್ನೇನೂ ಇಲ್ಲ ಈ ಇಳೆಯೊಳಗೆ
ಈಶ್ವರ
ಜ್ಞಾನ
ಚುನಾವಣೆ
ಯಾವುದೂ ಅಲ್ಲ
ಕಾಗದದ ಮೇಲೆ ಗೀಚಿದ ಯಾವುದೇ ಅನುಲೇಖವ
ಹರಿದು ಒಗೆಯಲುಬಹುದು
ಮತ್ತು ನೆಲದಾಳದ ಏಳು ಪದರಗಳಡಿಯಲಿ
ಹುಗಿಯಲೂಬಹುದು ಅದನು.
ಕಣ್ಣಿಲ್ಲದ ಕಪೋತವದು
ಕಳೇಬರಗಳ ಮೇಲೆ ಕಾಲೂರಿ
ನಿಂತ ವಿವೇಕ
ಕೊಲೆಗಡುಕರ ದಂಧೆಯದು
ನೆನಪಿನಲಿಡಯ್ಯಾ
ಒಂದು ಕಂದನ ಹತ್ಯೆ
ಒಬ್ಬ ಮಹಿಳೆಯ ಮರಣ
ಕಾಡತೂಸುಗಳು ಚಿಂದಿಹೊಡೆದ
ಮನುಷ್ಯನೊಬ್ಬನ ಮೃತದೇಹ
ಸಂಪೂರ್ಣ ರಾಷ್ಟ್ರದ ಪತನವೇ
ವಿನಾ ಕೇವಲ
ಯಾವುದೊಂದು ಆಡಳಿತ ಮಾತ್ರದ್ದಲ್ಲ
ಇಂತಹ ನೆತ್ತರು ಹರಿದು
ಇಳೆಗಿಳಿದು ತೋಯಿಸಿ ಹಿಂಗುವುದಿಲ್ಲ
ಬದಲಿಗೆ
ಆಗಸದಲಿ ಪಟಪಟಿಸುವ ಪತಾಕೆಗಳ
ಮೆತ್ತಲಿದೆ ಕಪ್ಪಾಗಿ
ಫೌಜು ಬೂಟುಗಳ ನಿಶಾನೆ ಬಿದ್ದ ನೆಲ
ಮತ್ತು ಅದರ ಮೇಲೆ ಹೆಣಗಳು ಉರುಳುತಿರುವ
ಆ ಅದೇ ನೆಲ
ಬೆಂಕಿಯಾಗಿ ನಿಮ್ಮ ನೆತ್ತರ ಸೇರಿ ಬೆರೆತು ಓಡದಿದ್ದರೆ
ಇಕೋ ತಿಳಿದುಕೊಳ್ಳಿರಿ
ನೀವು ಬಂಜರು ಬಿದ್ದಿರುವಿರಿ
ಉಸಿರಾಡುವ ಅಧಿಕಾರವೂ ಇಲ್ಲ ನಿಮಗೆ ಇಲ್ಲಿ
ಸತ್ತೇ ಹೋಗಿದೆ ನಿಮ್ಮ ಪಾಲಿನ ಇಹದ ವ್ಯಾಪಾರ
ಕಟ್ಟಕಡೇ ಮಾತು
ಅಗದೀ ನೇರ ನಿಚ್ಚಳ
ಎಂದೆಂದಿಗೂ ಕ್ಷಮಿಸಿದಿರಿ
ಯಾವನೇ ಹಂತಕನನ್ನು
ಆಗಿರವಲ್ಲನ್ಯಾಕೆ ಅವನು
ನಿಮ್ಮ ಜಿಗರೀ ದೋಸ್ತ
ದುರಂಧರ ಧರ್ಮದ ಗುತ್ತಿಗೆದಾರ,
ಲೋಕತಂತ್ರದ
ಸ್ವನಾಮಧನ್ಯ ಪಹರೆದಾರ



# ಬಿಟ್‌ಕಾಯಿನ್ ತನಿಖೆಯಲ್ಲಿ ಸಿಸಿಬಿ ಕಳ್ಳಾಟ..?!




● ಎಂ.ಡಿ. ದಿನೇಶ್‌ರಾವ್

ಹಬ್ಬಾ..! ಬಿಟ್‌ಕಾಯಿನ್ ಹಗರಣದ ವೇಳೆ ರಾಜಕೀಯ ನಾಯಕರು ಆಡಳಿತ ಪಕ್ಷದ ಮೇಲೆ ಮುಗಿಬಿದ್ದು ಎಗ್ಗಿಲ್ಲದೆ ಟೀಕೆಗಳ ಮೇಲೆ ಟೀಕೆ. ಮಾಡುತ್ತಾ ಇನ್ನೇನು ಸರ್ಕಾರವನ್ನೇ ಕೆಡವಿಬಿಡುತ್ತೇವೆ ಸಿಎಂ ಅವರನ್ನು ಅಧಿಕಾರದಿಂದಕೆಳಗಿಳಿಸಿಬಿಡುತ್ತೇವೆ ಎಂದು ಬಾಯಿ ಬಾಯಿ ಬಡೆದುಕೊಂಡ ಪ್ರತಿಪಕ್ಷಗಳು ನಂತರ ತೆಪ್ಪಗಾಗಿದ್ದು ಏಕೆ..? ಎನ್ನುವ ಪ್ರಶ್ನೆಗಳಿಗೆ ಉತ್ತರವೇ ಸಿಕ್ಕಿರಲಿಲ್ಲ..

ಆದರೆ ಶ್ರೀಕಿ ಎನ್ನುವ ಅಂತಾರಾಷ್ಟ್ರೀಯ ಹ್ಯಾಕರ್ ನಾಪಾತ್ತೆಯಾಗಿದ್ದವನು ಪೊಲೀಸರಿಗೆ ಸಿಕ್ಕ ನಂತರ ಎಲ್ಲಾ ಪ್ರತಿಪಕ್ಷಗಳು ಬಾಯಿ ಮುಚ್ಚಿಕೊಂಡು ಸುಮ್ಮನಾಗಿವೆ.. ಯಾಕೆ.. ಇದರ ಹಿಂದೆ ಬಹಳಷ್ಟು ರಾಜಕೀಯ ಮಂದಿ ಇದ್ದಾರೆ ಎನ್ನುವ ಸತ್ಯ ಒನ್ನೊಂದೆ ಹೊರಬರುತ್ತಿದ್ದಂತೆ ಎಲ್ಲರೂ ಬಾಯಿಗೆ ಬೀಗ ಹಾಕಿ ಕೂತುಕೊಂಡಿವೆ. ಅದರಲ್ಲು ಸಿದ್ದರಾಮಯ್ಯ ಅಂತವರೂ ಕೂಡ ಮತ್ತೆ ಅದರ ಧ್ವನಿಯೇ ಎತ್ತಿಲಿಲ್ಲ ಎಂದರೆ ಹೇಗೆ ಯಾಕೆ ಹೀಗಾಯಿತು ಎಂದರೆ.. ಒನ್ನೊಂದಾಗಿ ಸರಪಳಿಗಳು ಬಿಚ್ಚಿಕೊಳ್ಳುತ್ತವೆ.. ನಾಯಕರ ನೆಂಟರು..ಸ್ನೇಹಿತರ ಮಕ್ಕಳು ಇದರಲಿ ಇದ್ದಾರೆ ಎನ್ನುವ ಸತ್ಯಗಳು ಬಹಿರಂಗವಾಗುತ್ತಿದ್ದಂತೆ ಎಲ್ಲರೂ ಗಪ್‌ಚುಪ್‌ಆಗಿದ್ದಾರೆ .

ರಾಜ್ಯದಲ್ಲಿ ಭಾರೀ ಸದ್ದು ಮಾಡಿದ್ದ ಬಿಟ್‌ಕಾಯಿನ್ ಹಗರಣ ಇದ್ದಕ್ಕಿದ್ದಂತೆ ತಣ್ಣಗೆ ಆಗಿದ್ದು ಹೇಗೆ ಎನ್ನುವ ಜಾಡು ಹಿಡಿದು ಹೊರಟರೆ ಅದರ ಹಿಂದೆ ಆಡಳಿತ ನಡೆಸುವವರ ಹಿಡಿತದ ಮೂಲಕ ಸಿಸಿಬಿ ಪೊಲೀಸರು ಇಡೀ ಹಗರಣವನ್ನೇ ಹೇಗೆ ನುಂಗಿ ಹಾಕಿದ್ದಾರೆ ಎನ್ನುವ ಒನ್ನೊಂದೆ ಸತ್ಯ ಬಯಲಾಗುತ್ತಾ ಹೋಗುತ್ತದೆ. ರಕ್ಷಿಸುವವರೆ ಭಕ್ಷಕರಾದರೆ ಹೇಗಿರುತ್ತದೆ ಎನ್ನುವುದಕ್ಕೆ ಇದೊಂದು ತಾಜಾ ಉದಾಹರಣೆ.

ಸುಮಾರು ಹತ್ತು ಸಾವಿರ ಕೋಟಿಗೂ ಅಧಿಕ ಮೊತ್ತದ ಹಣಕಾಸು ವಂಚನೆಯ ಮತ್ತು ಸುಮಾರು 200 ಕೋಟಿ ರೂ.ಗಳಿಗೆ ಅಧಿಕ ಸರ್ಕಾರಿ ಬೊಕ್ಕಸಕ್ಕೆ ಕನ್ನ ಹಾಕಿದ ಬಹುಕೋಟಿ ವಂಚನೆ ಪ್ರಕರಣದ ಕುರಿತು ಆರಂಭಿಕ ತನಿಖೆ ನಡೆಸಿದ ಸಿಸಿಬಿ ಪೊಲೀಸರೇ ಪ್ರಕರಣದಲ್ಲಿ ಶಾಮೀಲಾಗಿದ್ದು, ಪ್ರಮುಖ ಆರೋಪಿ ಶ್ರೀಕಿ ಅಲಿಯಾಸ್ ಶ್ರೀಕೃಷ್ಣನನ್ನು ಬಳಸಿಕೊಂಡು ತನಿಖಾಧಿಕಾರಿಗಳೇ ಭಾರೀ ಅವ್ಯವಹಾರ ನಡೆಸಿದ್ದಾರೆ ಎಂಬ ಅನುಮಾನಗಳಿಗೆ ಇದೀಗ ಪುರಾವೆ ಸಿಕ್ಕಿದ್ದು, ಸ್ವತಃ ಸಿಸಿಪಿಎಸ್ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ



ಪಟ್ಟಿಯಲ್ಲಿಯೇ ಸಿಸಿಬಿ ಪೊಲೀಸರು ಪ್ರಕರಣದ ಕುರಿತು ಪ್ರಮುಖ ಸಾಕ್ಷ್ಯಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾಹಿತಿಯನ್ನು ಸಿಐಡಿ ಅಧಿಕಾರಿಗಳಿಂದ ಮರೆಮಾಚಿದ್ದರು ಎನ್ನುವ ಸತ್ಯ ಬಯಲಾಗಿದೆ.

ಜಾಗತಿಕ ಮಟ್ಟದ ವಿವಿಧ ಬಿಟ್ ಕಾಯಿನ್ ಕಂಪನಿಗಳ ಸರ್ವರ್ ಹ್ಯಾಕ್ ಮಾಡಿ ಸಾವಿರಾರು ಕೋಟಿ ಮೊತ್ತದ ಬಿಟ್ ಕಾಯಿನ್ ಲಪಟಾಯಿಸಿ ಅವುಗಳನ್ನು ರಾಜ್ಯದ ಅಧಿಕಾರಸ್ಥರ ಆಪ್ತರು ಸೇರಿದಂತೆ ವಿವಿಧ ಬಿಟ್ ಕಾಯಿನ್ ವಹಿವಾಟುದಾರರ ಖಾತೆಗಳಿಗೆ ರವಾನಿಸಿ ಭಾರೀ ವಂಚನೆ ಎಸಗಿರುವ ಗಂಭೀರ ಪ್ರಕರಣ ಇದಾಗಿದೆ. ಅದರೊಂದಿಗೆ ಪ್ರಕರಣದ ಪ್ರಮುಖ ಆರೋಪಿ ಶ್ರೀಕಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಈ ಪೇಮೆಂಟ್ ಪೋರ್ಟಲ್ ಗಳನ್ನು ಕೂಡ ಹ್ಯಾಕ್ ಮಾಡಿ ಸುಮಾರು 200 ಕೋಟಿಗೂ ಅಧಿಕ ಮೊತ್ತದ ಹಣಕಾಸು ವಂಚನೆ ಎಸಗಿರುವುದಾಗಿ ಸ್ವತಃ ಪೊಲೀಸರೇ ಈ ಹಿಂದೆ ಸಲ್ಲಿಸಿದ್ದ ಚಾರ್ಜ್ ಶೀಟ್ ನಲ್ಲಿ ಹೇಳಲಾಗಿತ್ತು. ಆ ಪೈಕಿ ನಿರ್ದಿಷ್ಟವಾಗಿ ರಾಜ್ಯ ಸರ್ಕಾರದ ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಹ್ಯಾಕ್ ಮಾಡಿ 11.55 ಕೋಟಿ ರೂ. ದೋಚಿದ್ದ ಪ್ರಕರಣದ ಕುರಿತು ತನಿಖೆ ನಡೆಸಿದ ಸೈಬರ್ ಅಪರಾಧ ಪೊಲೀಸ್ ಠಾಣೆಯ ತನಿಖಾಧಿಕಾರಿ ನ್ಯಾಯಾಯಕ್ಕೆ ಸಲ್ಲಿಸಿರುವ ಚಾರ್ಜ್ ಶೀಟ್ ವಿವರಗಳು ಇದೀಗ ಬಹಿರಂಗವಾಗಿವೆ.

## ಹಾದಿ ತಪ್ಪಿಸಿದ ಸಿಸಿಬಿ

ಹ್ಯಾಕರ್ ಶ್ರೀಕಿಯಿಂದ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಹಾರ್ಡ್ ಡಿಸ್ಕ್, ಲ್ಯಾಪ್ ಟಾಪ್ ಮತ್ತಿತರ ಉಪಕರಣಗಳಿಂದ ಸಿಸಿಬಿ ಪೊಲೀಸರು ತನಿಖೆಯ ವೇಳೆ ಸಂಗ್ರಹಿಸಿದ್ದ ಮಾಹಿತಿಯನ್ನು ಮತ್ತೊಂದು ತನಿಖಾ ಸಂಸ್ಥೆ ಸಿಐಡಿಯೊಂದಿಗೆ ಹಂಚಿಕೊಳ್ಳಲು ಸಹಕರಿಸಿಲ್ಲ ಎಂದು ಚಾರ್ಜ್ ಶೀಟ್ ನಲ್ಲಿ ಉಲ್ಲೇಖಿಸಲಾಗಿದೆ. ಶ್ರೀಕಿಯಿಂದ ವಶಪಡಿಸಿಕೊಂಡಿದ್ದ ಉಪಕರಣಗಳಿಂದ ಸಂಗ್ರಹಿಸಿದ್ದ ಮಾಹಿತಿಯಲ್ಲಿ ಹಲವು ಮಹತ್ವದ ಸಾಕ್ಷ್ಯಗಳಿದ್ದವು. ಆದರೆ, ಸಿಸಿಬಿ ಪೊಲೀಸರು ಆ ಮಾಹಿತಿಯನ್ನು ಫೋರೆನ್ಸಿಕ್ ಇಮೇಜ್ ಪ್ರತಿ ಮಾಡಿಸಿ, ನಿಗೂಢ ಲಿಪಿ(ಎನ್ ಕ್ರಿಪ್ಷನ್)ಗೆ ಪರಿವರ್ತಿಸಿದ್ದರು ಮತ್ತು ಆ ಕುರಿತು ಪಾಸ್ ವರ್ಡ್ ನೀಡುವಾಗ ತಪ್ಪಾದ ಪಾಸ್ ವರ್ಡ್ ನೀಡಿ ಸಿಐಡಿಗೆ ಹಾದಿ ತಪ್ಪಿಸಿದ್ದರು ಎಂಬುದು ಚಾರ್ಜ್ ಶೀಟ್ ನೊಂದಿಗೆ ಸಲ್ಲಿಸಿರುವ ದಾಖಲೆಗಳಿಂದ ಬಯಲಾಗಿದೆ .

ಕಳೆದ ಜನವರಿಯಲ್ಲಿ ಶ್ರೀಕಿ ಸಿಸಿಬಿ ಪೊಲೀಸರ ವಶದಲ್ಲಿರುವಾಗಲೆ ಸಿಸಿಬಿ ಪೊಲೀಸರಿಗೆ ಸಿಐಡಿ ಅಧಿಕಾರಿಗಳು ಪತ್ರ ಬರೆದು ಪ್ರಕರಣದ ಸಾಕ್ಷ್ಯಗಳನ್ನು ಕೋರಿದ್ದರು ಮತ್ತು ವಿಶೇಷವಾಗಿ ಆತನ ಹಾರ್ಡ್ ಡಿಸ್ಕ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣಗಳಿಂದ ವಶಪಡಿಸಿಕೊಂಡಿರುವ ಮಾಹಿತಿಯನ್ನು ನೀಡುವಂತೆ ಸೂಚಿಸಿದ್ದರು. ಅದಕ್ಕೆ ಪ್ರತಿಯಾಗಿ ಸಿಸಿಬಿ ಪೊಲೀಸರು ಮಾಹಿತಿ ನೀಡಿದ್ದರೂ, ಇ ಕಡತದ ಮೂಲಕ ನೀಡಿದ ಮಾಹಿತಿಯನ್ನು ಗೌಪ್ಯಲಿಪಿಗೆ ಪರಿವರ್ತಿಸಿದ್ದರು ಮತ್ತು ಸರಿಯಾದ ಪಾಸ್ ವರ್ಡ್ ನೀಡದೇ ಮರೆಮಾಚಿದ್ದರು. ಆ ಹಿನ್ನೆಲೆಯಲ್ಲಿ ಸಿಐಡಿ ಅಧಿಕಾರಿಗಳು ಸಿಸಿಬಿ ಮುಖ್ಯಸ್ಥರಿಗೆ ಮತ್ತೊಂದು ಪತ್ರ ಬರೆದು ತಪ್ಪು ಪಾಸ್ ವರ್ಡ್ ನೀಡಿದ ಬಗ್ಗೆ ಆಕ್ಷೇಪವೆತ್ತಿದ್ದರು ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದೇ ವಿಷಯದಲ್ಲಿ ಬಳಿಕ ಸಿಸಿಪಿಎಸ್ ಪೊಲೀಸರು ಸಿಸಿಬಿ ವಿರುದ್ಧ ನ್ಯಾಯಾಲಯಕ್ಕೂ ಎರಡು ಬಾರಿ ಆಕ್ಷೇಪಣೆ ಅರ್ಜಿ ಸಲ್ಲಿಸಿದ್ದರು ಎಂಬುದು ಕೂಡ ಚಾರ್ಜ್ ಶೀಟ್ ನ ಹೊಸ ವಿವರಗಳು ಬಯಲುಮಾಡಿವೆ.



ಈಗ ಇರುವ ಪ್ರಶ್ನೆ; ಸಿಸಿಬಿ ಪೊಲೀಸರು ಉನ್ನತ ತನಿಖಾ ಸಂಸ್ಥೆ ಸಿಐಡಿಗೆ ಎಲ್ಲಾ ಮಾಹಿತಿ ನೀಡುವ ಬದಲು, ಗೌಪ್ಯಲಿಪಿಯಲ್ಲಿ ಮಾಹಿತಿ ನೀಡಿ, ತಪ್ಪು ಪಾಸ್ ವರ್ಡ್ ನೀಡಿ ಹಾದಿ ತಪ್ಪಿಸಿದ್ದು ಯಾಕೆ? ತನಿಖೆಯ ವಿಳಂಬಕ್ಕೆ ಕಾರಣವಾಗಿದ್ದು ಯಾಕೆ? ಸ್ವತಃ ಸಿಸಿಬಿ ಅಧಿಕಾರಿಗಳ ಹಿತ ಕಾಯಲು ಹೀಗೆ ಮಾಡಿದರೆ? ಅಥವಾ ಅಧಿಕಾರಸ್ಥ ಪ್ರಭಾವಿಗಳನ್ನು ರಕ್ಷಿಸಲು ಹೂಡಿದ ನಾಟಕ ಅದಾಗಿತ್ತೆ? ಎಂಬುದು.

ಹಾಗೇ, "ಬಿಟ್ ಕಾಯಿನ್ ಹಗರಣದ ವಿಷಯದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ನಿಷ್ಪಕ್ಷಪಾತ ತನಿಖೆಯಾಗಲಿದೆ ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ" ಎಂದು ಹೇಳಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಸಿಸಿಬಿಯ ಈ ಕಳ್ಳಾಟದ ಬಗ್ಗೆ ಯಾವ ಕ್ರಮ ಜರುಗಿಸಲಿದ್ದಾರೆ ಎಂಬುದು. ಜೊತೆಗೆ ಪ್ರಕರಣದ ಕುರಿತು ಇಡಿ ಮತ್ತು ಸಿಬಿಐ ತನಿಖೆ ನಡೆಯುತ್ತಿದೆ ಎಂದು ಸಿಎಂ ಮತ್ತು ಹೋಂ ಮಿನಿಸ್ಟರ್ ಈ ಹಿಂದೆ ಹೇಳಿದ್ದರು ಕೂಡ. ಆ ತನಿಖೆಯ ಪ್ರಗತಿ ಎಲ್ಲಿಗೆ ಬಂತು? ಆ ತನಿಖೆಯ ವ್ಯಾಪ್ತಿಗೆ ಸಿಸಿಬಿ ಪೊಲೀಸರು ಪ್ರಕರಣದ ಕುರಿತ ಸಿಐಡಿ ತನಿಖೆಯನ್ನು ದಿಕ್ಕುತಪ್ಪಿಸಲು ನಡೆಸಿದ ಇಂತಹ ಕಳ್ಳಾಟಗಳೂ ಸೇರಲಿವೆಯೇ? ಅಥವಾ ಕೇಂದ್ರ ತನಿಖಾ ಸಂಸ್ಥೆಗಳು ತಮ್ಮ ತನಿಖೆಯ ವ್ಯಾಪ್ತಿಗೆ ಸಿಸಿಬಿಯ ಅಧಿಕಾರಿಗಳು ಪ್ರಕರಣವನ್ನು ಮರೆಮಾಚಲು ಯತ್ನಿಸಿದ ಸಂಗತಿಯನ್ನೂ ಸೇರಿಸಿಕೊಳ್ಳಬೇಕು ಎಂದು ಗೃಹ ಸಚಿವರು ಮತ್ತು ಸಿಎಂ ಕೇಂದ್ರದ ತಮ್ಮದೇ ಸರ್ಕಾರದ ಗೃಹ ಸಚಿವರಿಗೆ ಪತ್ರಬರೆಯುವರೇ? ಎಂಬುದು ಸಾರ್ವಜನಿಕ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯ ನಿರೀಕ್ಷೆಯ ಪ್ರಶ್ನೆಗಳು.

ಹಾಗೇ ಹಗರಣ ಮೊದಲ ಬಾರಿಗೆ ಮಾಧ್ಯಮಗಳಲ್ಲಿ ಭಾರೀ ಸದ್ದು ಮಾಡಿದ ಬಳಿಕ ಮೈಮೇಲೆ ಬಿಸಿನೀರು ಚೆಲ್ಲಿದಂತೆ ಬೆಚ್ಚಿಬಿದ್ದು ಅಬ್ಬರಿಸಿ ಬೊಬ್ಬಿರಿದಿದ್ದ ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಸಿಸಿಬಿಯ ಈ ಹೊಸ ಕಳ್ಳಾಟದ ಬಗ್ಗೆ ಏನು ಹೇಳುತ್ತಾರೆ? ಯಾಕೆ ಆ ಎರಡೂ ಪಕ್ಷಗಳ ನಾಯಕರು ಈ ಬಗ್ಗೆ ಮಾತನಾಡಲೇಬೇಕಿದ್ದ ಬೆಳಗಾವಿ ಅಧಿವೇಶನದಲ್ಲಿ ಜಾಣಮರೆವು ಪ್ರದರ್ಶಿಸಿದರು? ಎಂಬ ಪ್ರಶ್ನೆಗಳಿಗೂ ರಾಜ್ಯದ ಜನತೆ ಉತ್ತರದ ನಿರೀಕ್ಷೆಯಲ್ಲಿದ್ದಾರೆ!

ಅದರಲ್ಲೂ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರು ಪ್ರಕರಣದ ಆರಂಭದ ದಿನಗಳಲ್ಲಿ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿ ಸರ್ಕಾರ ಮತ್ತು ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ಆದರೆ, ಯಾವಾಗ ಶ್ರೀಕಿ ಡ್ರಗ್ಸ್ ಪ್ರಕರಣದಲ್ಲಿ ಬಂಧಿತನಾಗಿ ಒಳಹೋದನೋ ಅವಾಗಿನಿಂದ ದಿಢೀರನೇ ಮೌನಕ್ಕೆ ಶರಣಾಗಿದ್ದು ಯಾಕೆ? ಯಾವ ಭಯ ಆ ನಾಯಕರ ಬಾಯಿ ಮುಚ್ಚಿಸಿದೆ? ಎಂಬುದು ಕೂಡ ಅವರು ಉತ್ತರ ನೀಡಲೇಬೇಕಾದ ಪ್ರಶ್ನೆಗಳೇ.

## ಎಲ್ಲರ ಹೇಳಿಕೆಯಲ್ಲೂ ದ್ವಂದ್ವ

ಈ ನಡುವೆ, ಪ್ರಕರಣದ ಕುರಿತು ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಿ, ರಾಜಕೀಯ ಕೆಸರೆರಚಾಟದಿಂದ ಗೊಂದಲದ ಗೂಡಾಗಿರುವ ವಿವಾದದ ಕುರಿತು ಸ್ಪಷ್ಟನೆ ನೀಡಬೇಕಾದ ಪೊಲೀಸರು ಕೂಡ ದ್ವಂದದ ಹೇಳಿಕೆ ನೀಡುವ ಮೂಲಕ ಇಡೀ ವಿವಾದವನ್ನು ಇನ್ನಷ್ಟು ಗೋಜಲುಗೊಳಿಸಿದ್ದಾರೆ.

ಬೆಂಗಳೂರು ನಗರ ಕಮೀಷನರ್ ಕಮಲ್ ಪಂಥ್ ಅವರು ಒಂದು ಹೇಳಿಕೆ ನೀಡಿ, ಪ್ರಕರಣದ ವಿಷಯದಲ್ಲಿ ಯಾವುದೇ ವಿದೇಶಿ ತನಿಖಾ ಸಂಸ್ಥೆಗಳೂ ಕರ್ನಾಟಕ ಪೊಲೀಸರಿಂದ ಮಾಹಿತಿ ಕೋರಿಲ್ಲ ಎಂದಿದ್ದಾರೆ. ಆದರೆ, ಇದೇ ಪ್ರಕರಣದ ಕುರಿತು ಸಿಬಿಐ ಇಂಟರ್ ಪೋಲ್ ಮಾಹಿತಿ ಕೋರಿದ ಬಳಿಕ ರಾಜ್ಯ ಸರ್ಕಾರ ಆ ಕುರಿತ ಮಾಹಿತಿಯನ್ನು ನೀಡಿರುವ ಕುರಿತು ಈಗಾಗಲೇ ಸ್ವತಃ ರಾಜ್ಯ ಸರ್ಕಾರವೇ ಬರೆದ ಪತ್ರ ಬಹಿರಂಗಗೊಂಡಿದೆ. ಹಾಗಿರುವಾಗ ಸಿಬಿಐ ಇಂಟರ್ ಪೋಲ್ ಮಾಹಿತಿ ಕೇಳಿದ್ದು ಯಾಕೆ? ಮತ್ತು ವಿದೇಶಿ ತನಿಖಾ ಸಂಸ್ಥೆಗಳು ಮಾಹಿತಿ ಕೋರದೆ ಇಂಟರ್ ಪೋಲ್ ಕೋರಲು ಸಾಧ್ಯವೆ?

● 12ನೇ ಪುಟಕ್ಕೆ...



# ಓಟ್ ಬ್ಯಾಂಕ್ ರಾಜಕೀಯ ಮತ್ತು ಕುವೆಂಪು





ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು


ಹನ್ನೆರಡನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಸಮಾನತೆಯ ಸಂದೇಶ ನೀಡಿದ ಬಸವಣ್ಣನವರ ಅನುಯಾಯಿಗಳನ್ನು ಬುಟ್ಟಿಗೆ ಹಾಕಿಕೊಂಡ ಕೋಮುವಾದಿ ಶಕ್ತಿಗಳು ಈಗ ಒಕ್ಕಲಿಗರ ಓಟ್ ಬ್ಯಾಂಕ್ ಹೈಜಾಕ್ ಮಾಡಲು ವಿಶ್ವ ಮಾನವ ಸಂದೇಶ ನೀಡಿದ ರಾಷ್ಟ್ರ ಕವಿ ಕುವೆಂಪು ಅವರ ಹೆಸರನ್ನು ಬಳಸಿಕೊಳ್ಳುವ ಹುನ್ನಾರ ನಡೆಸಿವೆ.

ಆದಿ ಚುಂಚನಗಿರಿ ಸ್ವಾಮಿಗಳನ್ನು ಸಾವರ್ಕರ್ ಪುಸ್ತಕ ಬಿಡುಗಡೆ ಕಾರ್ಯಕ್ರಮ ಕ್ಕೆ ಆಹ್ವಾನಿಸಿ ಅವರ ಮೂಲಕ ಕುವೆಂಪು ಮತ್ತು ಸಾವರ್ಕರ್ ಗೆ ಹೋಲಿಕೆ ಮಾಡಿಸುವ ಮಸಲತ್ತು ನಡೆದಿದೆ.

ಬದುಕಿದ್ದಕ್ಕೂ ವೈಚಾರಿಕ ಬೆಳಕನ್ನು ಚೆಲ್ಲುತ್ತ ಬಂದ ಉದಯ ರವಿಯ ಈ ಮಹಾ ಚೇತನವನ್ನು ಸಾವರ್ಕರಗೆ ಹೋಲಿಸಿದವರು ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮಿಗಳು. ಸಾವರ್ಕರ್ ಕುರಿತ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತಾಡಿದ ನಿರ್ಮಲಾನಂದರು ಹೀಗೇಕೆ ಹೇಳಿದರು ಅರ್ಥವಾಗಲಿಲ್ಲ.ಸಾವರ್ಕರ್ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಾವರ್ಕರ್ ಬಗ್ಗೆ ಮಾತಾಡಲು ಯಾರ ಅಭ್ಯಂತರವೂ ಇಲ್ಲ.ಅವರ ಬಗ್ಗೆ ಮಾತಾಡಲು ಬೇಕಾದಷ್ಟು ವಿಷಯಗಳಿವೆ.ಆದರೆ ಕುವೆಂಪು ಅವರನ್ನು ಸಾವರ್ಕರ್ ಗೆ ಹೋಲಿಸುವ ಅಗತ್ಯವಿರಲಿಲ್ಲ.

ಸಾವರ್ಕರ್ ಪುಸ್ತಕದ ಬಿಡುಗಡೆಯ ಈ ಕಾರ್ಯಕ್ರಮದಲ್ಲಿ ಶೂದ್ರ ಸಮುದಾಯದ ಒಕ್ಕಲಿಗರ ಮಠದ ಸ್ವಾಮಿಗಳು ಭಾಗವಹಿಸುತ್ತಿರುವ ಬಗ್ಗೆ ಮಂಡ್ಯದ ಲೇಖಕ ರಾಜೇಂದ್ರ ಪ್ರಸಾದ್ ಮತ್ತು ನಾಗೇಗೌಡ ಕಿಲಾರ ಅವರು ಪತ್ರ ಬರೆದಿದ್ದರು. ಭಾರತೀಯ ಸಂವಿಧಾನ ಮತ್ತು ಗಾಂಧಿ,ಅಂಬೇಡ್ಕರ್ ,ಆಶಯಗಳಿಗೆ ತದ್ವಿರುದ್ಧವಾದ ಸಾವರ್ಕರ್ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಔಚಿತ್ಯದ ಬಗ್ಗೆ ಪ್ರಶ್ನಿಸಿದ್ದರು.ಅದೇನೇ ಇರಲಿ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವದು ಅಥವಾ ಭಾಗವಹಿಸದಿರುವದ ಸ್ವಾಮಿಗಳ ವಯಕ್ತಿಕ ತೀರ್ಮಾನ. ಅದನ್ನು ನಾವು ಪ್ರಶ್ನಿಸಬಹುದು.ಆದರೆ ಆಕ್ಷೇಪಿಸುವಂತಿಲ್ಲ.

ಆದರೆ ನಿರ್ಮಲಾನಂದನಾಥ ಸ್ವಾಮಿಗಳು ನಮ್ಮ ನಾಡಿನ ನಾಲ್ಕೂವರೆ ಕೋಟಿ ಕನ್ನಡಿಗರ ಹೆಮ್ಮೆಯ ಕವಿಯನ್ನು ಸಾವರ್ಕರರಿಗೆ ಹೋಲಿಸಿದ್ದನ್ನು ಮಾತ್ರ ಆಕ್ಷೇಪಿಸಲೇಬೇಕಾಗಿದೆ. ಸ್ವಾಮಿಗಳು ಸಾವರ್ಕರ್ ಬಗ್ಗೆ ಹೇಳಲು ಬೇಕಾದಷ್ಟು ವಿಷಯಗಳಿದ್ದವು. ಅವುಗಳನ್ನು ಬಿಟ್ಟು ಕುವೆಂಪು ಅವರನ್ನು ಸಾವರ್ಕರ್ ಗೆ ಹೋಲಿಸುವ ಔಚಿತ್ಯವೇನು? ಇಬ್ಬರಲ್ಲೂ ಸಮಾನವಾಗಿರುವ ಅಂಶ ಯಾವುದು ಎಂದು ವಿವರಿಸಿದರೆ ಚೆನ್ನಾಗಿರುತ್ತಿತ್ತು. ಅಧಿಕಾರದಲ್ಲಿರುವವರನ್ನು ಒಲೈಸುವದಕ್ಕಾಗಿ ರಾಷ್ಟ್ರಕವಿಗೆ ಅಪಚಾರ ಮಾಡುವದು ಸರಿಯಲ್ಲ.



ಕುವೆಂಪು ಮತ್ತು ಸಾವರ್ಕರ. ವ್ಯಕ್ತಿತ್ವಗಳು ವಿಭಿನ್ನವಾಗಿವೆ. ಇಬ್ಬರೂ ನಂಬಿದ ಜೀವನ ಮೌಲ್ಯಗಳು ಸಿದ್ದಾಂತಗಳು ತದ್ವಿರುದ್ಧವಾಗಿವೆ.ಕುವೆಂಪು ಜಾತಿ ಮತಗಳ ಮುಳ್ಳು ಬೇಲಿಯನ್ನು ದಾಟಿ ವಿಶ್ವ ಮಾನವತ್ವದ ಸಂದೇಶ ನೀಡಿದವರು.ಸಾವರ್ಕರ್ "ಹಿಂದುಗಳಲ್ಲದವರು ಭಾರತದ ಪ್ರಜೆಗಳಲ್ಲ" " ಭಾರತ ಹಿಂದುರಾಷ್ಟ್ರವಾಗಬೇಕೆಂದು ಹೇಳಿದವರು .ಇಬ್ಬರಿಗೂ ಹೋಲಿಕೆಯಾಗುವದಿಲ್ಲ

" ಮಗು ಹುಟ್ಟುತ್ತ ವಿಶ್ವ ಮಾನವ.ಬೆಳೆಯುತ್ತ ಸುತ್ತಲಿನವರು ಆ ಮಗುವನ್ನು ಹಿಂದು,ಮುಸ್ಲಿಂ, ಕ್ರೈಸ್ತ, ಜೈನ,ಶಿಖ್ ,ಎಂದು ಹೆಸರಿಸಿ ಕುಬ್ಜ ಮಾನವನನ್ನಾಗಿ ಮಾಡುತ್ತಾರೆ" ಎಂದು ಹೇಳುತ್ತಲೇ ಬಂದ ಕುವೆಂಪು ವಿಶ್ವ ಮಾನವರಾಗಲು ಕರೆ

ಹೆಚ್ಚು ಬೆಳಕಿಗೆ ಬಾರದ ಒಂದು ವಿಷಯ ವನ್ನು ಹೇಳಲೇಬೇಕಾಗಿದೆ.ಆರ್.ಎಸ್.ಎಸ್. ತನ್ನ ಕಾರ್ಯಸೂಚಿಯ ಜಾರಿಗಾಗಿ ಸ್ಥಾಪಿಸಿದ ವಿಶ್ವ ಹಿಂದೂ ಪರಿಷತ್ತಿನ ಸ್ಥಾಪನಾ ಸಮ್ಮೇಳನ ಎಪ್ಪತ್ತರ ದಶಕದಲ್ಲಿ ಉಡುಪಿಯಲ್ಲಿ ನಡೆಯಿತು.ಈ ಸಮ್ಮೇಳನದ ಉದ್ಘಾಟನೆಗೆ ಬರುವಂತೆ ಕುವೆಂಪು ಅವರನ್ನು ಆಹ್ವಾನಿಸಲಾಗಿತ್ತು.ಈ ಆಹ್ವಾನವನ್ನು ಒಪ್ಪಿಕೊಳ್ಳದ ಕುವೆಂಪು ಕೆಲವು ಷರತ್ತುಗಳನ್ನು ಹಾಕಿದರು.ಅದರಲ್ಲಿ ಒಂದನೆಯದು ಹಿಂದುಗಳೆಲ್ಲ ಒಂದೇ ಅನ್ನುವದಾದರೆ ಉಡುಪಿಯ ಅಷ್ಟ ಮಠಗಳಲ್ಲಿ ಒಂದು ಮಠಕ್ಕಾದರೂ ಬ್ರಾಹ್ಮಣೇತರ ಸಮುದಾಯದ ವ್ಯಕ್ತಿಯನ್ನು ಪೀಠಾಧಿಪತಿಯನ್ನಾಗಿ ನೇಮಕ ಮಾಡಿ ಎಂಬುದಾಗಿತ್ತು.ಹೀಗೆ ಐದಾರು ಷರತ್ತುಗಳನ್ನು ಕುವೆಂಪು ಹಾಕಿದ್ದರು.ಅವುಗಳನ್ನು ಈಡೇರಿಸುವ ಸ್ಥಿತಿಯಲ್ಲಿ ಸಂಘ ಪರಿವಾರ ಆವಾಗಲೂ ಇರಲಿಲ್ಲ ಈಗಲೂ ಇಲ್ಲ.


ತಮ್ಮ ತಾತ್ವಿಕ ನಿಲುವುಗಳನ್ನು ಕುವೆಂಪು ಅವರು ಎಂದೂ ಮರೆ ಮಾಡಿ ಬಚ್ಚಿಟ್ಟುಕೊಂಡವರಲ್ಲ. ತಮಗೆ ಅನಿಸಿದ್ದನ್ನು ತಮ್ಮ ಪದ್ಯಗಳ ಮೂಲಕ ,ಕಾದಂಬರಿ, ಕತೆಗಳ ಮೂಲಕ ಹೇಳುತ್ತಲೇ ಬಂದವರು.ಇದು ನಿರ್ಮಲಾನಂದನಾಥ ಸ್ವಾಮಿಗಳಿಗೆ ಗೊತ್ತಿಲ್ಲವೆಂದಲ್ಲ.ಗೊತ್ತಿದ್ದೂ ಈ ರೀತಿ ಮಾತಾಡಿದ್ದಾರೆ.

ಪೂರ್ಣಚಂದ್ರ ತೇಜಸ್ವಿಯವರು ಈಗ ಬದುಕಿದ್ದರೆ ಈ ಹೋಲಿಕೆಯ ಮಾತುಗಳ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.ಹಿಂದೊಮ್ಮೆ ಒಕ್ಕಲಿಗರ ಸಂಘದ ಚುನಾವಣೆ ಯಲ್ಲಿ ಯಾರೋ ಚುನಾವಣೆ ಗೆ ನಿಂತವರು ಪ್ರಚಾರಕ್ಕಾಗಿ ಕುವೆಂಪು ಫೋಟೊ ಬಳಸಿಕೊಂಡ ಸುದ್ದಿ ಕೇಳಿ ತೇಜಸ್ವಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಬಸವಣ್ಣ,ಅಂಬೇಡ್ಕರ ಅವರಂತೆ ಕುವೆಂಪು ಕೂಡ ಇಡೀ ಮಾನವ ಕುಲಕ್ಕೆ ಸೇರಿದವರು.ಇವರು ಯಾವುದೇ ಜಾತಿ,ಮತಕ್ಕೆ ಸೇರಿದವರಲ್ಲ."ವಿಶ್ವ ಮಾನವ" ಎಂದು ಹೆಮ್ಮೆಯಿಂದ ಸಾರಿದವರು.ಆದರೆ ಸಾವರ್ಕರ್ ತಾನು "ಹಿಂದು " ಅಥವಾ "ಬ್ರಾಹ್ಮಣ" ಎಂದು ಹೇಳಿಕೊಳ್ಳಲು ಹೆಮ್ಮೆಪಟ್ಟುಕೊಂಡವರು.ಪ್ರೇಕ್ಷಕರ ಚಪ್ಪಾಳೆ ಗಾಗಿ ನಾವು ಯಾರನ್ನೋ ಇನ್ಯಾರಿಗೋ ಹೋಲಿಸಬಾರದು.

ನಿರ್ಮಲಾನಂದನಾಥ ಸ್ವಾಮಿಗಳು ವೇದಾಂತ, ವಿಜ್ಞಾನ, ಸೂಫಿ ಸಾಹಿತ್ಯ ,ಆಧುನಿಕ ಕನ್ನಡ ಸಾಹಿತ್ಯ ಓದಿಕೊಂಡವರೆಂದು ಗೊತ್ತು.ಇವರು ಚಿಕ್ಕ ಬಳ್ಳಾಪುರದ ಶಾಖಾ ಮಠದಲ್ಲಿ ಇದ್ದಾಗ ಇವರ ಉಪನ್ಯಾಸ ಕೇಳಿದ್ದೆ.ಇಂಥವರನ್ನು ಅವರು ಆಹ್ವಾನಿಸುವದು ಇವರ ಮೇಲಿನ ಅಭಿಮಾನ ಅಥವಾ ಗೌರವದಿಂದಲ್ಲ.ದಕ್ಷಿಣ ಕರ್ನಾಟಕದಲ್ಲಿ ಇರುವ ಬಹುದೊಡ್ಡ ಸಂಖ್ಯೆಯ ಒಕ್ಕಲಿಗರ ಓಟ್ ಬ್ಯಾಂಕ್ ಗಾಗಿ ಕರೆದಿದ್ದಾರೆ ಇದು ಸ್ವಾಮಿಗಳಿಗೂ ಗೊತ್ತು.ಅದೇನೇ ಇರಲಿ ಇನ್ನು ಮುಂದೆ ಹೀಗಾಗಬಾರದೆಂಬುದು ಅವರ ಅನೇಕ ಭಕ್ತರ ಅಭಿಪ್ರಾಯ.

ಕುವೆಂಪು ಬದುಕಿರುವವರೆಗೆ ಕೋಮುವಾದಿ ಸಂಘಟನೆಗಳ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲ.ಕುವೆಂಪು ಅವರನ್ನು ಸಾವರ್ಕರಗೆ ಹೋಲಿಸುವವರು ಈ ಬಗ್ಗೆ ಗಮನಿಸಬೇಕು.

ಬೆಂಗಳೂರಿನಲ್ಲಿ ಸಾವರ್ಕರ್ ಪುಸ್ತಕ ಬಿಡುಗಡೆಯಾದ ಸಂಸರ್ಭದಲ್ಲೇ ದೂರದ ಹರಿದ್ವಾರದಲ್ಲಿ ಧರ್ಮ ಸಂಸತ್ ಎಂಬ ದ್ವೇಷ ಸಂಸತ್ ನಡೆದಿದೆ.ಇದು ಈಗಿರುವ ಚುನಾಯಿತ ಸಂಸತ್ತಿಗೆ ಪ್ರತಿಯಾಗಿ ಕೋಮುವಾದಿ ಗಳು ರೂಪಿಸಿದ ಸಂವಿಧಾನೇತರ ಸಂಸತ್ ಈ ಸಮಾವೇಶದಲ್ಲಿ ಮಾತಾಡಿದವರೆಲ್ಲ "ಹಿಂದು ರಾಷ್ಟ್ರ ನಿರ್ಮಾಣಕ್ಕಾಗಿ ಹಿಂದೂ ಯುವಕರು ಶಸ್ತ್ರ ಗಳನ್ನು ಕೈಗೆ ತೆಗೆದುಕೊಳ್ಳಬೇಕು " ಎಂದು ಬಹಿರಂಗವಾಗಿ ಕರೆ ನೀಡಿದ್ದಾರೆ.



ಹರಿದ್ವಾರದ ವೇದ ನಿಕೇತನ ಆಶ್ರಯದಲ್ಲಿ ನಡೆದ ಈ ಧರ್ಮಸಂಸತ್ ನಲ್ಲಿ ಮಾತಾಡಿದ ಧರ್ಮದಾಸ ಮಹಾರಾಜ ಎಂಬ ಸ್ವಾಮಿ " ನಾನು ಗೊಡ್ಸೆ ಅನುಯಾಯಿಯಾಗಿದ್ದು ರಾಷ್ಟ್ರೀಯ ಸಂಪನ್ಮೂಲಗಳಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕು ಎಂದು ಹೇಳಿದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಎದೆಗೆ ಆರು ಗುಂಡುಗಳನ್ನು ಹಾರಿಸುತ್ತಿದ್ದೆ" ಎಂದು ಅರಚಾಡಿದ್ದಾನೆ.ಈ ಕಾರ್ಯಕ್ರಮ ದಲ್ಲಿ ಇತ್ತೀಚೆಗೆ ಬಿಜೆಪಿ ಸೇರಿದ ಹಿಂದುವಾಗಿ ಮತಾಂತರಗೊಂಡ ಶಿಯಾ ವಕ್ಫ್ ಮಂಡಲಿಯ ಮಾಜಿ ಅಧ್ಯಕ್ಷ ವಾಸಿಂ ರಜ್ವಿ ಅಲಿಯಾಸ ಜಿತೇಂದ್ರ ನಾರಾಯಣ ತ್ಯಾಗಿ ಶಸ್ತ್ರ ಹಿಡಿಯಲು ಹಿಂದು ಯುವಕರಿಗೆ ಕರೆ ನೀಡಿದ್ದಾನೆ. ಈ ಘಟನೆ ನಡೆದು ಒಂದು ವಾರದ ನಂತರ ಪೊಲೀಸರ ಎಫ್.ಐ.ಆರ್ ದಾಖಲಿಸಿದ್ದಾರೆ. ಆದರೆ ಯಾರನ್ನು ಬಂಧಿಸಿಲ್ಲ.ಪ್ರಚೋದಕ ಭಾಷಣ ಮಾಡಿದವರ ಮೇಲೆ ಭಾರತೀಯ ಅಪರಾಧ ಸಂಹಿತೆಯ 153( ಎ ) ಅನ್ವಯ ದೂರು ದಾಖಲಿಸಿದ್ದಾರೆ.ಇದು ಸುಲಭವಾಗಿ ಪಾರಾಗಿ ಬರಬಹುದಾದ ಕಲಮು.ನ್ಯಾಯವಾಗಿ ಹಿಂಸೆಗೆ ಬಹಿರಂಗವಾಗಿ ಪ್ರಚೋದಿಸಿದ ಇವರ ಮೇಲೆ ಯುಎಪಿಎ ಅನ್ವಯ ಪ್ರಕರಣ ದಾಖಲಿಸಿ ಜೈಲಿಗೆ ತಳ್ಳಬೇಕಾಗಿತ್ತು.ಆನಂದ ತೇಲ್ತುಂಬಡೆ, ವರವರರಾವ ಅವರಂಥ ಲೇಖಕರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ ಜೈಲಿಗೆ ಹಾಕುವ ನಮ್ಮ ವ್ಯವಸ್ಥೆ ಬಹಿರಂಗವಾಗಿ ಹಿಂಸೆಗೆ ಪ್ರಚೋದಿಸುವವರಿಗೆ ಈ ರಿಯಾಯಿತಿ ನೀಡುವದೇಕೆ?

ಕೋಮುವಾದಿ ಸಂಘಟನೆಗಳು ಏರ್ಪಡಿಸುವ ಕಾರ್ಯಕ್ರಮ ಗಳಲ್ಲಿ ಪಾಲ್ಗೊಳ್ಳುವ ಧರ್ಮಗುರುಗಳು ,ಮಠಾಧೀಶರು ಈ ಬಗ್ಗೆ ಕೊಂಚ ಯೋಚಿಸಬೇಕು.ಎಲ್ಲ ಧರ್ಮಗಳು ಶಾಂತಿ,ಸಹನೆ,ಸಹಬಾಳ್ವೆ ಯನ್ನು ಬೋಧಿಸುತ್ತವೆ .ಹೊಡಿ,ಬಡಿ, ಕಡಿ ಎಂದು ಅರಚಾಡುವವರು ಯಾವುದೇ ಧರ್ಮಕ್ಕೆ ಸೇರಿದವರಲ್ಲ.ಧರ್ಮದ ಹೆಸರನ್ನು ರಾಜಕೀಯ ಲಾಭಕ್ಕಾಗಿ ದುರುಪಯೋಗ ಮಾಡಿಕೊಳ್ಳುವವರು ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಉದಾಹರಣೆಗೆ ಗೋ ಹತ್ಯೆ ನಿಷೇಧ ಬಿಜೆಪಿ ಯ ರಾಜಕೀಯ ಘೋಷಣೆ .ಅದಕ್ಕೆ ಅವರ ಬದ್ಧತೆ ತೋರಿಕೆಯದು ಮಾತ್ರ. ಕರ್ನಾಟಕ ,ಗುಜರಾತ್ ಮುಂತಾದ ರಾಜ್ಯಗಳಲ್ಲಿ ಗೋಮಾಂಸ ಮಾರಾಟ ನಿಷೇಧಿಸುವ ಈ ಪಕ್ಷ ಅಧಿಕಾರದಲ್ಲಿರುವ ಗೋವಾ,ಮತ್ತು ಆಸ್ಸಾಮನಲ್ಲಿ ಅದು ಗೋಮಾಂಸ ನಿಷೇಧಕ್ಕೆ ಯಾವುದೇ ಕಾಯ್ದೆ ಮಾಡಿಲ್ಲ.ಕಾರಣ ಅದು ಅಲ್ಲಿ ಅಧಿಕಾರ ಉಳಿಸಿಕೊಳ್ಳಲು ಕ್ರೈಸ್ತರ ಮತಗಳೂ ಬೇಕು.ಕೇರಳದಲ್ಲಿ ಅದು ಗೋ ಮಾಂಸ ಭಕ್ಷಣೆಯನ್ನು ವಿರೋಧಿಸುವದಿಲ್ಲ.ಅಧಿಕಾರಕ್ಕೆ ಬಂದರೆ ಶುದ್ಧ ಗೋಮಾಂಸ ಒದಗಿಸುವದಾಗಿ ಮತದಾರರಿಗೆ ಭರವಸೆ ನೀಡುತ್ತದೆ.

ಮತಾಂತರ ನಿಷೇಧ ಕಾಯ್ದೆ ಕೂಡ ಕರ್ನಾಟಕದಲ್ಲಿ ಮತ್ತೆ ಚುನಾವಣೆ ಯಲ್ಲಿ ಗೆಲ್ಲಲು ಹಿಂದು ಓಟ್ ಬ್ಯಾಂಕ್ ನಿರ್ಮಿಸಲು ರೂಪಿಸಿದ ಕಾರ್ಯಕ್ರಮ. ನಮ್ಮ ಪಕ್ಕದ ಗೋವಾದಲ್ಲಿ ಬಿಜೆಪಿ ಸರಕಾರ ವಿದ್ದರೂ ಅಲ್ಲಿ ಗೋಮಾಂಸ ಮಾರಾಟ ಮತ್ತು ಸೇವನೆಗೆ ನಿರ್ಬಂಧವಿಲ್ಲ.ಹೀಗೆ ಒಂದೇ ರಾಷ್ಟ್ರ ಒಂದೇ ಧೋರಣೆ ಎಂದು ಹೇಳುತ್ತಲೇ ಆಯಾ ರಾಜ್ಯಗಳಲ್ಲಿ ಚುನಾವಣೆ ಗೆಲ್ಲಲು ಅನುಕೂಲ ವಾಗುವ ನೀತಿಯನ್ನು ಅದು ಅನುಸರಿಸುತ್ತದೆ.ಇಂಥವರ ಜೊತೆ ಸೇರಿ ನಮ್ಮ ಧರ್ಮ ಗುರುಗಳು,ಮಠಾಧೀಶರು ಇಕ್ಕಟ್ಟಿಗೆ ಸಿಲುಕಬಾರದು.


ಕುವೆಂಪು ಮತ್ತು ಸಾವರ್ಕರ್ ಸಾಹಿತ್ಯಗಳು ಮುಕ್ತವಾಗಿ ಎಲ್ಲ ಕಡೆ ಸಿಗುತ್ತವೆ.ಅವುಗಳನ್ನು ಓದಿದರೆ ಇಬ್ಬರಲ್ಲಿ ಎಲ್ಲಿ ಸಾಮ್ಯವಿದೆ ಎಲ್ಲಿ ಭಿನ್ನಾಭಿಪ್ರಾಯ ಇದೆ ಎಂಬುದು ಗೊತ್ತಾಗುತ್ತದೆ.ಪೂರ್ವ ಮತ್ತು ಪಶ್ಚಿಮ ಗಳು ಒಂದೇ ಎಂದು ಹೇಳಲು ಹೇಗೆ ಸಾಧ್ಯವಾಗುವದಿಲ್ಲವೋ ಅದೇ ರೀತಿ ಕುವೆಂಪು ಮತ್ತು ಸಾವರ್ಕರ್ ಒಂದೇ ಎಂದು ಹೇಳಲು ಆಗುವದಿಲ್ಲ.

ಕುವೆಂಪು ನನ್ನ ತುಂಬಾ ಇಷ್ಟದ ಸಾಹಿತಿ ಮಾತ್ರವಲ್ಲ ಅವರದು ಬಹುಮುಖಿ ವ್ಯಕ್ತಿತ್ವ. ಜಾತಿ ಮತಗಳನ್ನು ದೂರವಿಟ್ಟು ಅವರು ವಿಶ್ವ ಮಾನವರಾದರು.ಅವರನ್ನು ಯಾರಾರ ಜೊತೆಗೆ ಹೋಲಿಸುವದು ಸರಿಯಲ್ಲ. ರಸ ಋಷಿಗೆ ಅಪಚಾರ ಮಾಡುವದು ಬೇಡ.ನಮ್ಮ ಭಾರತವನ್ನು, ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ಉಳಿಸಿ ಬೆಳೆಸುವದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ.

ಮೂಗು ಹಿಡಿದರೆ ಬಾಯಿ ತನ್ನಿಂತಾನೆ ತೆರೆಯುತ್ತದೆ. ಇದನ್ನು ಬಲ್ಲ ರಮೇಶ ಜಾರಕಿಹೊಳಿ, ಬಿಜೆಪಿ ಮೂಗನ್ನು ಒತ್ತಿ ಹಿಡಿದಿದ್ದಾರೆ. ತಮ್ಮ ಕಿರಿಯ ಸಹೋದರ ಲಖನ್ ಜಾರಕಿಹೊಳಿ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಿಸಿರುವ ರಮೇಶ್ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾದ ಬಿಜೆಪಿ, ಮೌನದಲ್ಲಿದೆ. ಬೆಳಗಾವಿ ಜಿಲ್ಲೆ ತನ್ನ ಸಾಮ್ರಾಜ್ಯ ಎನ್ನುತ್ತಿರುವ ಜಾರಕಿಹೊಳಿ, ತಮ್ಮದೇ ಪಕ್ಷದ ಸರ್ಕಾರ ತಮ್ಮ ಕೂದಲನ್ನೂ ಕೊಂಕಿಸಲಾರದು ಎನ್ನುತ್ತಿದ್ದಾರೆ.

# ಜಾರಕಿಹೊಳಿ ಜಾರುಬಂಡೆ ಆಟ!

ರಾಜಸೂತ್ರ
ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ರಾಜ್ಯದ ಯಾವ ಮೂಲೆಯಲ್ಲಿ ಏನು ನಡೆಯುತ್ತಿದೆ; ಯಾರೆಲ್ಲ ಅದರಲ್ಲಿ ಪಾತ್ರಧಾರಿಗಳಾಗಿದ್ದಾರೆ ಎನ್ನುವುದು ಸುಲಭದಲ್ಲಿ ನಿಲುಕುವ ಸಂಗತಿಯಾಗಿ ಉಳಿದಿಲ್ಲ. ಏಡಿ ಸಂಸ್ಕೃತಿ ಎಂಬ ಮಾತಿದೆ. ಮೇಲೇರಲು ಹೊರಟ ಏಡಿಯನ್ನು ಉಳಿದವು ಹಿಂಜಗ್ಗುವಂತಿದೆ ಕರ್ನಾಟಕದ ಪಾಲಿಟಿಕ್ಸ್. ಡಿಕೆ ಶೀವಕುಮಾರ್, ಸಿದ್ದರಾಮಯ್ಯ ಒಂದೇ ಪಕ್ಷದ ನಾಯಕರೇ ಹೌದಾದರೂ ಇವರನ್ನು ಕಂಡರೆ ಅವರಿಗೆ ಅವರನ್ನು ಕಂಡರೆ ಇವರಿಗೆ ಅಷ್ಟಕ್ಕಷ್ಟೆ. ಇನ್ನೂ ಸೀದಾ ಸೀದಾ ಮಾತಿನಲ್ಲಿ ಹೇಳುವುದಾದರೆ ಅವರಿಬ್ಬರ ನಡುವಿನದು ಎಣ್ಣೆ ಸೀಗೇಕಾಯಿ ಸಂಬಂಧ. ಸಿದ್ದರಾಮಯ್ಯನವರಿಗೆ ಮತ್ತೊಂದು ಬಾರಿ ಮುಖ್ಯಮಂತ್ರಿ ಆಗಬೇಕೆಂಬ ಚಪಲ ಅಮರಿಕೊಂಡಿದೆ. ಅದಕ್ಕಾಗಿ ಅವರ ಯತ್ನ ಸಾಗಿದೆ. ತಾವು ಈಬಾರಿ ಸಿಎಂ ಆಗದಿದ್ದರೆ ಭವಿಷ್ಯದಲ್ಲಿ ಮತ್ತೆಂದೂ ಅವಕಾಶ ಕೂಡಿ ಬರಲಾರದೆಂಬ ಭಯ ಡಿಕೆಶಿಯವರಲ್ಲಿದೆ. ಆ ನಿಟ್ಟಿನಲ್ಲಿ ಅವರ ಪ್ರಯತ್ನ ಸಾಗಿದೆ. ಅವರ ಕಾಲನ್ನು ಇವರು ಇವರ ಕಾಲನ್ನು ಅವರು ಏಡಿಯಂತೆ ಕೆಳಕ್ಕೆ ಜಗ್ಗುತ್ತಿದ್ದಾರೆ.



ಇದು ಕಾಂಗ್ರೆಸ್ ಪಾಳಯದ ಕಥೆಯಾದರೆ ಆಡಳಿತಾರೂಢ ಬಿಜೆಪಿಯಲ್ಲಿ ಮತ್ತೊಂದು ಬಗೆಯ ರಗಳೆ. ಅಲ್ಲಿ ಎಲ್ಲರೂ ಎಲ್ಲವುದಕ್ಕಾಗಿಯೂ ಕಿತ್ತಾಡುವವರೇ. ಆದರೆ ಅದು "ಶಿಸ್ತಿನ ಪಕ್ಷ" ಆಗಿರುವ ಕಾರಣ ಕಾಂಗ್ರೆಸ್‌ನಷ್ಟು ಸದ್ದುಗದ್ದಲ ಅಲ್ಲಿ ಕೇಳಿಸುತ್ತಿಲ್ಲ. ಇಲ್ಲಿ ಕಾಂಗ್ರೆಸ್‌ನಲ್ಲಿ ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿ ಓಟು ತಂದುಕೊಡುವ ಶಕ್ತಿಯಾಗಿಲ್ಲ ಎನ್ನುವುದು ಕಾಂಗ್ರೆಸ್‌ನವರಿಗೆ ಗೊತ್ತಿದೆ. ಆದರೆ ಬಿಜೆಪಿಯಲ್ಲಿ ಹಾಗಿಲ್ಲ. ಆ ಶಕ್ತಿ ನರೇಂದ್ರ ಮೋದಿಯವರಲ್ಲಿ ಇನ್ನೂ ಇದೆ ಎಂಬ ಕಾರಣಕ್ಕಾಗಿ ಗಪ್‌ಚುಪ್ ಹಂಗಾಮಾ ಅಲ್ಲಿ ಸಾಗಿದೆ. ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗಳಿಗೆ ಇಷ್ಟರಲ್ಲಿಯೆ ನಡೆಯಲಿರುವ ಚುನಾವಣೆ ಫಲಿತಾಂಶ ಮೋದಿಯವರಲ್ಲಿ ಉಳಿದಿರುವ ಶಕ್ತಿ ಎಷ್ಟು ಮತ್ತು ಅಳಿದು ಹೋಗಿರುವ ಶಕ್ತಿ ಎಷ್ಟು ಎನ್ನುವುದನ್ನು ಹೇಳಲಿದೆ. ಅಲ್ಲೀವರೆಗೆ ಮೋದಿ ಭಯ ಆ ಪಕ್ಷದಲ್ಲಿ ಇದ್ದೇ ಇರುತ್ತದೆ.



ಕರ್ನಾಟಕದಲ್ಲಿ ಮೋದಿ ಭಯದಲ್ಲಿ ಅನೇಕ ಬಿಜೆಪಿ ನಾಯಕರಿದ್ದಾರೆ. ಬಾಯಿ ಬಿಡಲೂ ಹೆದರುತ್ತಾರೆ. ಖಾಸಗಿ ಮಾತುಕತೆ ಸಂದರ್ಭದಲ್ಲಿ ತಮ್ಮ ಗೋಳನ್ನು ತೋಡಿಕೊಳ್ಳುತ್ತಾರೆ. ಅಂಥದೊಂದು ಒಳಗೋಳಿನ ವೃತ್ತಾಂತ ಬೆಳಗಾವಿ ಜಿಲ್ಲೆಯಲ್ಲಿ ಕಣ್ಣಾಮುಚ್ಚಾಲೆ ಆಡುತ್ತಿದೆ. ಅದರ ಸೂತ್ರಧಾರ, ಹಗರಣವೊಂದರಲ್ಲಿ ಸಿಕ್ಕುಬಿದ್ದು ಸಚಿವ ಪೀಠ ಕಳೆದುಕೊಂಡಿರುವ ರಮೇಶ ಜಾರಕಿಹೊಳಿ. ರಮೇಶ, ಸತೀಶ, ಬಾಲಚಂದ್ರ, ಲಖನ್ ಈ ಎಲ್ಲರ ಮುಂದೂ ಜಾರಕಿಹೊಳಿ ಎಂಬ ಕುಟುಂಬ ನಾಮಧೇಯವಿದೆ. ಲಖನ್ ಜಾರಕಿಹೊಳಿ ಇನ್ನೂ ಪ್ರಮಾಣ ವಚನ ಸ್ವೀಕರಿಸಿಬೇಕಿರುವ ಚುನಾಯಿತ ಎಂಎಲ್‌ಸಿ. ಉಳಿದವರೆಲ್ಲರೂ ಎಂಎಲ್‌ಎಗಳು. ಪಾರ್ಟಿ ಪಕ್ಷ ಪಂಗಡ ಇವರ ಲೆಕ್ಕಕ್ಕಿಲ್ಲ. ಎಲ್ಲ ಪಾರ್ಟಿಗೂ ಇವರ ಕುಟುಂಬದ ಒಬ್ಬರಲ್ಲ ಒಬ್ಬರು ಮುಖಂಡ. ಬಿಜೆಪಿ, ಕಾಂಗ್ರೆಸ್ಸು, ಜೆಡಿಎಸ್ ಈ ಪೈಕಿ ಯಾವುದೆ ಪಕ್ಷ ಅಧಿಕಾರಕ್ಕೆ ಬರಲಿ, ಜಾರಕಿಹೊಳಿ ಕುಟುಂಬಕ್ಕೆ ಕನಿಷ್ಟ ಒಂದು ಸಚಿವ ಹುದ್ದೆ ಗ್ಯಾರಂಟಿ. ಅವರನ್ನು ಹೊರಕ್ಕೆ ಇಟ್ಟು ಆಡಳಿತ ನಡೆಸುವ ಧೈರ್ಯ ಕರ್ನಾಟಕದಲ್ಲಿ ಚುನಾವಣಾ ರಾಜಕೀಯ ಮಾಡಿಕೊಂಡು ಬಂದಿರುವ ಮೂರೂ ಪಕ್ಷಗಳಲ್ಲೂ ಇಲ್ಲ.



ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಜಾರಕಿಹೊಳಿ ಕುಟುಂಬದ ಯಾರೂ ಸಚಿವರಿಲ್ಲ. ರಮೇಶ ಜಾರಕಿಹೊಳಿ ಕಳೆದುಕೊಂಡಿದ್ದನ್ನು ಪಡೆಯುವ ಯತ್ನವನ್ನು ಬಾಲಚಂದ್ರ ಜರಕಿಹೊಳಿ ಮಾಡಿದರಾದರೂ ಬಯಸಿದ್ದು ಸಿಗಲಿಲ್ಲ. ಹಾಗಂತ ಅವರೆಲ್ಲ ಕೈಚೆಲ್ಲಿ ಕುಳಿತಿದ್ದಾರೆಂದು ಅರ್ಥ ಮಾಡಬೇಕಿಲ್ಲ. ಇಂದಲ್ಲ ನಾಳೆ ಆರೋಪ ಮುಕ್ತರಾಗಿ ಸಚಿವ ಸ್ಥಾನಕ್ಕೆ ಮರಳುವ ಹಂಬಲದಲ್ಲಿ ರಮೇಶ ಜಾರಕಿಹೊಳಿ ಇದ್ದಾರೆ. ಆದರೆ "ಪವರ್ ಪಾಲಿಟಿಕ್ಸ್"ನಲ್ಲಿ ಅದೆಲ್ಲ ಅಂದುಕೊಂಡಷ್ಟು ಸುಲಭವಲ್ಲ. ಪ್ರತ್ಯೇಕವಾದ ಮದ್ದನ್ನು ಅರೆಯುವ ಅಗತ್ಯ ಅಲ್ಲಿದೆ. ರಮೇಶ ಜಾರಕಿಹೊಳಿ ಮದ್ದನ್ನು ಅರೆಯುವುದಕ್ಕೆ ಏನೆಲ್ಲ ಬೇಕೋ ಆ ಎಲ್ಲ ಪರಿಕರಗಳನ್ನು ಇದೀಗ ಒಗ್ಗೂಡಿಸುತ್ತಿದ್ದಾರೆ. ಅಂಥ ಪರಿಕರಗಳಲ್ಲಿ ಒಂದು ಲಖನ್ ಜಾರಕಿಹೊಳಿ.

ಹೊಸ ವರ್ಷದಲ್ಲಿ (ಸಂಕ್ರಾಂತಿ ಆಜೂಬಾಜೂ ಎನ್ನೋಣವೆ) ಪ್ರಮಾಣ ವಚನ ಸ್ವೀಕರಿಸಿದ ನಂತರದಲ್ಲಿ ಅಧಿಕೃತವಾಗಿ ಶಾಸಕರಾಗಲಿರುವ ಲಖನ್, ಅಣ್ಣ ರಮೇಶ ಜಾರಕಿಹೊಳಿ ಹೇಳಿದಂತೆ ಹೆಜ್ಜೆ ಹಾಕುವ ಮನುಷ್ಯ. ಅಣ್ಣನಿಗಾಗಿ ಏನನ್ನು ಮಾಡಲೂ ಸಿದ್ಧವಿರುವ ಲಕ್ಷ್ಮಣ. ಆ ಕುಟುಂಬದ ಮಟ್ಟಿಗೆ ರಮೇಶನೇ ರಾಮ, ಲಖನ್ ಲಕ್ಷ್ಮಣ. ಈ ಕುಟುಂಬದಲ್ಲಿ ತೀರ್ಮಾನ ಯಾವುದೆ ಆಗಿರಲಿ ಗೆರೆ ಎಳೆಯುವುದು ರಾಮನೆ ಹೊರತೂ ಲಕ್ಷ್ಮಣ ಅಲ್ಲ! ತಾವು ಆಡಲಿರುವ ಆಟದ ಮೊದಲಭಾಗವಾಗಿ ತಮ್ಮ ಲಖನ್‌ರನ್ನು ಚುನಾವಣಾ ಅಖಾಡಾದಲ್ಲಿ ಗೆಲ್ಲಿಸಿಕೊಂಡು ಬಂದಿರುವ ರಮೇಶ ಜಾರಕಿಹೊಳಿ ಮುಂದಿನದನ್ನು ಪರದೆಯ ಮೇಲೆ ನೋಡಿ ಎನ್ನುತ್ತಿದ್ದಾರೆ. ಟ್ರೈಲರ್ ಬಿಡುಗಡೆಯಾಗಿದೆ; ಪೂರ್ಣ ಚಿತ್ರಕ್ಕೆ ಕಾದು ನೋಡಿ ಎನ್ನುವ ಸಂದೇಶವನ್ನು ಅವರು ಈಗಾಗಲೇ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ಕಳಿಸಿದ್ದಾರೆ. ಸಂದೇಶದ ನಕಲನ್ನು ದೆಹಲಿಗೂ ಕಳಿಸಿದ್ದಾರೆ.



ಪೂರ್ಣ ಚಿತ್ರದಲ್ಲಿ ಎಷ್ಟು ಹಾಡುಗಳಿವೆಯೋ, ಎಷ್ಟು ಫೈಟಿಂಗ್ ಮಾರಾಮಾರಿ ಇರಲಿವೆಯೋ ಗೊತ್ತಿಲ್ಲ. ಎಷ್ಟೆಲ್ಲ ತಿರುವು ಥ್ರಿಲ್‌ಗಳನ್ನು ಕಥೆ ಹೊಂದಿದೆಯೋ ಅದೂ ಗೊತ್ತಿಲ್ಲ. ರಮೇಶ ಜಾರಕಿಹೊಳಿ ಬೀಗುತ್ತಿರುವ ರೀತಿಯನ್ನು ನೋಡಿದರೆ ಚಿತ್ರ ಸೂಪರ್ ಹಿಟ್ ಆಗುವುದು ಗ್ಯಾರಂಟಿ. ಕದ್ದುಮುಚ್ಚಿ ಎನ್ನುತ್ತಾರಲ್ಲ ಹಾಗೆ ಕಥೆಯ ಎಳೆ ಹೊರಬರುತ್ತಿದೆ. ಹಾಗೆ ಬಂದುದೆಲ್ಲ ನಿಜವೆ ಹೌದಾದರೆ ಕೊನೆಗೆ ಗೆಲ್ಲುವುದು ರಮೇಶರೇ ಹೊರತೂ ಬಿಜೆಪಿ ಅಲ್ಲ. ಲಖನ್ ಜಾರಕಿಹೊಳಿ ಗೆಲುವಿನಲ್ಲಿ ಬಿಜೆಪಿಯ ಮಹೇಶ ಕವಟಗಿಮಠರ ಸೋಲು ಮಾತ್ರವೆ ಇಲ್ಲ ಆ ಪಕ್ಷದ ನಾಯಕರ ದಿವಾಳಿತನವೂ ಇದೆ. "ಶಿಸ್ತಿನ ಪಕ್ಷದ" ಬಹಳ ಸ್ವಾರಸ್ಯಕರ ಕಥೆ ಅದು!



ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ 25 ಸ್ಥಾನಕ್ಕೆ ಇತ್ತೀಚೆಗೆ ಚುನಾವಣೆ ಘೋಷಣೆಯಾದಾಗ ಹಾಸನ ಜಿಲ್ಲೆಯ ಬಿಜೆಪಿ ಮುಖಂಡ, ಮಾಜಿ ಶಾಸಕ ಎ.ಮಂಜು ಅವರ ಮಗ ಮಂಥರ ಗೌಡ ಕಾಂಗ್ರೆಸ್ ಸೇರಿ ಟಿಕೆಟ್ ಪಡೆದು ಕೊಡಗು ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧ ಕಣಕ್ಕೆ ಇಳಿದರು. ಪಕ್ಷ ವಿರೋಧಿ ಚಟುವಟಿಕೆ ಅದು ಎನಿಸಿತು ಬಿಜೆಪಿಗೆ. ಪಕ್ಷದಲ್ಲಿ ಮಂಜು ಹೊಂದಿದ್ದ ಸ್ಥಾನಮಾನ, ಅಧಿಕಾರಗಳೆಲ್ಲವನ್ನೂ ಬಿಜೆಪಿ ಹಿಂತೆಗೆದುಕೊಂಡಿತು. ಮಗ ಮಾಡಿದ ತಪ್ಪಿಗೆ ಅಪ್ಪನಿಗೆ ಶಿಕ್ಷೆ ಕೊಟ್ಟವರು ಬಿಜೆಪಿ ವರಿಷ್ಟರು. ತೋಳ ಕುರಿಮರಿ ಕಥೆ ಸುಳ್ಳಲ್ಲ. ಅತ್ತ ಬೆಳಗಾವಿ ದ್ವಿಸದಸ್ಯ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ನಡುವೆ ಲಖನ್‌ರನ್ನು ಕಣಕ್ಕಳಿಸಿದ್ದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ. ಆದರೆ ಪಕ್ಷದ ಮುಖಂಡರು ತುಟಿಪಿಟಿಕ್ ಎನ್ನಲಿಲ್ಲ. ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದಕ್ಕೆ ಸುಣ್ಣ ಎಂಬ ನೀತಿಗೆ ಅವರೆಲ್ಲ ಶರಣಾದರು. ಇಷ್ಟಕ್ಕೂ ಆ ಕ್ಷೇತ್ರದಲ್ಲಿ ಸೋತ ಕವಟಗಿಮಠ ಕೇವಲ ಬಿಜೆಪಿ ಅಭ್ಯರ್ಥಿ ಮಾತ್ರವೇ ಆಗಿರದೆ ಬಿ.ಎಸ್. ಯಡಿಯೂರಪ್ಪನವರ ಆಯ್ಕೆಯ ಅಭ್ಯರ್ಥಿಯೂ ಆಗಿದ್ದರು. ಶಿಸ್ತು ಕ್ರಮ ಜರುಗಿಸುವುದಕ್ಕೆ ಸೂಕ್ತ ಕಾರಣವನ್ನು ಸ್ವತಃ ರಮೇಶ ಜಾರಕಿಹೊಳಿಯವರೆ ಒದಗಿಸಿದ್ದರು. ಆದರೆ ಅದಕ್ಕೆ ಬೇಕಾದ ಧೈರ್ಯ ಪಕ್ಷದಲ್ಲಿಲ್ಲವಾಯಿತು.



ಪಕ್ಷೇತರರಾಗಿ ಆಯ್ಕೆಯಾದ ಶಾಸಕರಿಗೆ ಅವರ ಇಚ್ಚೆಯ ಪಕ್ಷ ಸೇರುವುದಕ್ಕೆ ಆರು ತಿಂಗಳ ಕಾಲಾವಕಾಶವಿರುತ್ತದೆ. ಸ್ವತಂತ್ರವಾಗಿದ್ದುಕೊಂಡು ತಮ್ಮ ಆಯ್ಕೆಯ ಪಕ್ಷಕ್ಕೆ ಬೆಂಬಲ ಸೂಚಿಸುವ ಅಥವಾ ವಿರೋಧಿಸುವ ಸ್ವಾತಂತ್ರ್ಯವೂ ಇರುತ್ತದೆ. ಲಖನ್ ಏನು ಮಾಡಬಬಹುದು...? 75 ಸದಸ್ಯ ಬಲದ ವಿಧಾನ ಪರಿಷತ್‌ನಲ್ಲಿ ಆಡಳಿತ ಪಕ್ಷಕ್ಕೆ ಸರಳ ಬಹುಮತ ಬರಲು 38 ಸ್ಥಾನ ಬಲದ ಅಗತ್ಯವಿದೆ. ಬಿಜೆಪಿ 11 ಸ್ಥಾನ ಗೆದ್ದಿದ್ದು ಹೌದಾದರೂ ಅದರ ಬಲ 37ಕ್ಕೆ ನಿಂತುಬಿಟ್ಟಿದೆ. ಅದು 38 ಕ್ಕೆ ಏರುವುದಕ್ಕೆ ಲಖನ್‌ರ ಬೆಂಬಲ ಬೇಕೇ ಬೇಕು. ಆ ಬೆಂಬಲ ಸುಲಭಕ್ಕೆ ಬರುವುದಿಲ್ಲ; ಪುಗಸಟ್ಟೆಯೂ ಬರುವುದಿಲ್ಲ. ರಮೇಶ ಜಾರಕಿಹೊಳಿ ಕಣ್ಣು ಮಿಟುಕಿಸಿದರೆ ಲಖನ್ ಅದನ್ನು ಪಾಲಿಸುತ್ತಾರೆ. ಆದರೆ ಸದ್ಯಕ್ಕೆ ರಮೇಶ್ ಕಣ್ಮುಚ್ಚಿ ಕುಳಿತಿದ್ದಾರೆ. ಅವರು ಕಣ್ತೆರೆಯುವುದಕ್ಕೆ ಸಚಿವ ಸ್ಥಾನವೆಂಬ ಮೇನಕೆ ಅವರ ಮುಂದೆ ಕುಣಿಯಬೇಕು. ಬಲ್ಲ ಮೂಲಗಳ ಪ್ರಕಾರ ತಮ್ಮ ಬೇಕು ಬೇಡಿಕೆಯನ್ನು ರಮೇಶ ಜಾರಕಿಹೊಳಿ ಬಿಜೆಪಿ ವರಿಷ್ಟರ ಗಮನಕ್ಕೆ ತಂದಿದ್ದಾರೆ. ಅವರು ಮುಂದಿಟ್ಟಿರುವ ನುಂಗಲೂ ಆಗದ ಉಗುಳಲೂ ಆಗದ ಬಿಸಿ ತುಪ್ಪದಂತಿರುವ ತಷರತ್ತುಗಳನ್ನು ಪಕ್ಷದ ವರಿಷ್ಟರು ಇದೀಗ ಕೈಕೈ ಹಿಸುಕಿಕೊಳ್ಳುತ್ತ ಪರಿಶೀಲಿಸುತ್ತಿದ್ದಾರೆ.

ತಾವು ರಾಜೀನಾಮೆ ನೀಡಿದ ಸಚಿವ ಹುದ್ದೆಗೆ ತಮ್ಮನ್ನು ಪುನಃ ನೇಮಿಸಿಕೊಳ್ಳಬೇಕು; ಈ ಹಿಂದೆ ತಾವು ಹೊಂದಿದ್ದ ಜಲಸಂಪನ್ಮೂಲ ಖಾತೆಯನ್ನೇ ತಮಗೆ ನೀಡಬೇಕು; ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ತಮ್ಮನ್ನೇ ನಿಯೋಜಿಸಬೇಕು.... ಇವು ರಮೇಶ್ ಜಾರಕಿಹೊಳಿ ಮುಂದಿಟ್ಟಿದ್ದಾರೆನ್ನಲಾದ ಸರಳ ಬೇಡಿಕೆಗಳು! ಬೇಡಿಕೆ ಈಡೇರಿದಾಕ್ಷಣವೇ ಆಡಳಿತ ಪಕ್ಷ ವಿಧಾನ ಪರಿಷತ್‌ನಲ್ಲಿ ಸರಳ ಬಹುಮತ ಪಡೆಯಲಿದ ಎಂಬ ವಿಚಾರದಲ್ಲಿ ಅನುಮಾನ ಬೇಡ. ಆದರೆ ಜಲ ಸಂಪನ್ಮೂಲ ಖಾತೆ ಈಗ ಗೋವಿಂದ ಕಾರಜೋಳರ ಕೈಯಲ್ಲಿದೆ. ದಲಿತ ಮುಖಂಡರಾಗಿರುವ ಅವರ ಕೈಯಿಂದ ಮಹತ್ವದ ಆ ಖಾತೆಯನ್ನು ಹಿಂದಕ್ಕೆ ಪಡೆದರೆ ಅವರು ಸುಮ್ಮನೆ ಕೂತಾರೆಯೇ...? ಕಷ್ಟ. ಆದರೆ ಅದಕ್ಕೂ ಒಂದು ಪರಿಹಾರವನ್ನು ಯೋಚಿಸಲಾಗುತ್ತಿದೆ ಎನ್ನುವುದು ಬೆಳಗಾವಿಯಲ್ಲಿ ಅಧಿವೇಶನ ನಡೆದ ಸಂದರ್ಭದಲ್ಲಿ ಸರಿದಾಡಿದ ವರ್ತಮಾನ. ಆ ವರ್ತಮಾನದ ಪ್ರಕಾರ, ಸಂಪುಟದಲ್ಲಿ ಒಂದಿಷ್ಟು ಸಣ್ಣಪುಟ್ಟ ಬದಲಾವಣೆ ಆಗಲಿವೆ. ಸುನಿಲ್ ಕುಮಾರ್ ಕೈಯಲ್ಲಿ ಇಂಧನ ಮತ್ತು ಕನ್ನಡ ಸಂಸ್ಕೃತಿ ಖಾತೆಗಳಿವೆ. ಅವರಿಂ ದ ಮಹತ್ವದ ಇಂಧನ ಖಾತೆಯನ್ನು ಹಿಂಪಡೆದು ಅದನ್ನು ಕಾರಜೋಳರಿಗೆ ವಹಿಸುವುದು; ಕಾರಜೋಳರ ಜೋಳಿಗೆಯಲ್ಲಿರುವ ಜಲ ಸಂಪನ್ಮೂಲ ಖಾತೆಯನ್ನು ರಮೇಶ ಜಾರಕಿಹೊಳಿ ಅವರಿಗೆ ಕೊಡುವುದು ಸದ್ಯದ ಯೋಚನೆ ಎನ್ನಲಾಗಿದೆ. ರಾಜಕೀಯದಲ್ಲಿ ಇಂಥವು ನಡೆಯುತ್ತವೆ. ಆದರೆ ರಮೇಶ್ ಜಾರಕಿಹೊಳಿ ವಿರುದ್ಧದ ಹಗರಣ ಕೋರ್ಟ್ ಮುಂದಿದೆ. ಆ ಸಂಬಂಧವಾಗಿ ನಡೆಯುತ್ತಿರುವ ತನಿಖೆ ಎಲ್ಲೀವರೆಗೆ ಬಂದಿದೆಯೋ ಗೊತ್ತಿಲ್ಲ. ಬಿಜೆಪಿ ಕೈಯಲ್ಲೇ ಸರ್ಕಾರ ಇರುವುದರಿಂದ ತನಿಖೆ ಹಳ್ಳ ಹಿಡಿಯುವಂತೆ ಮಾಡುವುದು ದೊಡ್ಡ ಸಮಸ್ಯೆ ಅಲ್ಲ. ಆದರೆ ಕೋರ್ಟ್...? ಜಾರಕಿಹೊಳಿ ತಲೆಯಲ್ಲಿ ಈ ಕಷ್ಟದ ನಿವಾರಣೆಗೆ ಯಾವ ರೀತಿಯ ಯೋಜನೆ ಯೋಚನೆ ಇದೆಯೋ ಬಯಲಿಗೆ ಬಂದಿಲ್ಲ.



# ಸೈನಿಕರ ಆತ

# ಭಾರತೀಯ

# ಆತ

ಜೈ ಜವಾನ್! ಜೈ ಕಿಸಾನ್! ಇದು ನಮ್ಮ ದೇಶದ ಬಹು ಜನಪ್ರಿಯ ಸ್ಲೋಗನ್. ಭಾರತದ ಸರಳ, ಸಜ್ಜನ, ಪ್ರಾಮಾಣಿಕ ರಾಜಕಾರಣಿ, ದಿವಂಗತ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಈ ದೇಶ ಸುಭದ್ರವಾಗಿ, ನೆಮ್ಮದಿಯಾಗಿರಬೇಕಾದರೆ, ಗಡಿ ಕಾಯುವ ನಮ್ಮ ಸೈನಿಕರು, ಅನ್ನ ನೀಡುವ ದೇಶದ ಎಲ್ಲಾ ರೈತರು ಕಾರಣ. ಅದಕ್ಕಾಗಿಯೇ ನಾವು ಮೊದಲು ಆ ಇಬ್ಬರಿಗೆ ನಮಿಸಬೇಕು. ಅವರನ್ನು ಈ ದೇಶದ ಪ್ರತಿ ಪ್ರಜೆಯೂ ಪ್ರತಿ ದಿನ ನೆಲೆಸಬೇಕು ಎಂದು ಜೈ ಜವಾನ್! ಜೈ ಕಿಸಾನ್! ಘೋಷಣೆಯ ಮೂಲಕ ಹೃದಯ ಪೂರ್ವಕ ಗೌರವ ಸೂಚಿಸಿದ್ದರು. ಆದರೆ ಈಗೇನಾಗಿದೇ? ದೇಶದ ಪ್ರಜೆಗಳ ರಕ್ಷಣೆಗಾಗಿ ಗಡಿಯಲ್ಲಿ ಮಳೆ ಚಳಿಯೆನ್ನದೇ, ಹಗಲಿರುಳು ಜೀವದ ಹಂಗು ತೊರೆದು, ಕಾಯುತ್ತಿರುವ ನಮ್ಮ ಸೈನಿಕರು ಇತ್ತೀಚೆಗೆ ಪದೆ ಪದೆ ಆತ್ಮಹತ್ಯೆಗೆ ಕೊರಳೊಡ್ಡುತ್ತಿರುವುದು, ತಾವೇ ಗುಂಡು ಹಾರಿಸಿಕೊಂಡು ಸಾಯುತ್ತಿರುವುದು ದೇಶದ ಭವಿಷ್ಯಕ್ಕೆ ಶುಭ ಸೂಚನೆ ಯಂತೂ ಅಲ್ಲವೇ ಅಲ್ಲ. ಭಾರತದ ರಕ್ಷಣೆಗಾಗಿ ಯುದ್ಧಭೂಮಿಯಲ್ಲಿ ರಕ್ತ ಹರಿಸಿ, ಹೋರಾಡಿ ಪ್ರಾಣವನ್ನೇ ನೀಡುವ ತಾಕತ್ತು, ಧೈರ್ಯ -ಸ್ಥೈರ್ಯವಿದ್ದ ನಮ್ಮ ಹುಲಿಯಂತಹ ಸೈನಿಕರು ಆತ್ಮಹತ್ಯೆ



ಹಾದಿ ತುಳಿಯುತ್ತಿರಲು ಕಾರಣವಾದರೂ ಏನೂ ಎಂಬುದು ತುಂಬಾ ಕಳವಳಕಾರಿ ಸಂಗತಿಯಾಗಿದೆ.

ನಮಗೆ ಅನ್ನ ಬೆಳೆದು ಕೊಡುವ ರೈತರು ಸಾಲದ ಬಾಧೆಯಿಂದ, ಬರಗಾಲದಿಂದ,ಚಂಡಮಾರುತ ನೆರೆಹಾವಳಿಯಿಂದ, ಬೆಳೆ ನಷ್ಟವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ನಡೆದುಕೊಂಡೇ ಬರುತ್ತಿದೆ. ಕೆಲವು ಸಾರಿ ರೈತರ ಸರಣಿ ಆತ್ಮಹತ್ಯೆಗಳು, ಕೌಟುಂಬಿಕ, ಸಾಮೂಹಿಕ ಆತ್ಮಹತ್ಯೆಗಳು ನಡೆದಿವೆ. ಆದರೆ ಇತ್ತೀಚಿಗೆ ದೇಶದಲ್ಲಿ ರೈತರಂತೆಯೇ ನಿರಂತರವಾಗಿ ಸರಣಿಯಂತೆ ಸೈನಿಕರು, ಸೈನ್ಯದ ಉನ್ನತ ಮಟ್ಟದ ಅಧಿಕಾರಿಗಳು, ತಮ್ಮ ರೈಫಲ್ ಗಳಿಂದಲೇ ಶೂಟಿಂಗ್ ಮಾಡಿಕೊಂಡು ಸಮವಸ್ತ್ರದಲ್ಲೇ ಪ್ರಾಣಬಿಟ್ಟಿರುವುದು ಕೇಂದ್ರ ಸರ್ಕಾರವು ಗಂಭೀರವಾಗಿಯೇ ಯೋಚಿಸಬೇಕಾದ ವಿಚಾರವೇ ಆಗಿದೆ. ಅದಕ್ಕಾಗಿಯೇ ಇತ್ತೀಚೆಗೆ ತಡವಾಗಿಯಾದರೂ ಎಚ್ಚೆತ್ತು ಕೊಂಡಿರುವ ಕೇಂದ್ರ ಸರ್ಕಾರ ಈಗ ಈ ಸೈನಿಕರ ಆತ್ಮಹತ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಿ.ಆರ್.ಪಿ.ಎಫ್. ನ ಎಲ್ಲಾ ಅರೆಸೇನಾ ಪಡೆಗಳಿಗೂ ಸುತ್ತೋಲೆ ಹೊರಡಿಸಿದ್ದು "ಸಂಸ್ಕಾರ ಶಾಲೆ" ತೆರೆಯಲು ಮುಂದಾಗಿದೆ! ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಕ್ಷೇಮಾಭಿವೃದ್ಧಿ ವಿಭಾಗದವು ಈ ನಿಟ್ಟಿನಲ್ಲಿ ಈಗ ಹಿರಿಯ ಮಿಲಿಟರಿ ಅಧಿಕಾರಿಗಳ ಸಲಹೆ, ಮಾರ್ಗದರ್ಶನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಭಾರತೀಯ ಸೇನೆಯಲ್ಲಿ ಖಿನ್ನತೆಗೊಳಗಾಗಿ, ಮಾನಸಿಕ ಆರೋಗ್ಯ ಸಂಬಂಧಿ ಸಮಸ್ಯೆಯಲ್ಲಿರುವ ಸೈನಿಕರನ್ನು ಈ ಸಂಸ್ಕಾರ ಶಾಲೆಗಳಲ್ಲಿ ಉತ್ತಮ ತರಬೇತಿ ಶಿಬಿರಗಳ ಮೂಲಕ ಅವರನ್ನು ಸದ್ರಡಗೊಳಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುತ್ತದೆಯಂತೆ. ಹಿರಿಯ ಮಿಲಿಟರಿ ಅಧಿಕಾರಿಗಳ ಜೊತೆ ಕಿರಿಯ ಸೈನಿಕ ದರ್ಜೆಯ ಸೋಲ್ಜರ್ ಗಳನ್ನು, ಬೆರೆಯಲು ಅವಕಾಶ ಮಾಡಿಕೊಟ್ಟು, ಸಾಮರಸ್ಯ ಹರಡುವ 'ಗೆಟ್ ಟುಗೆದರ್' ರೀತಿಯ ಸಾಮೂಹಿಕ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆಯಂತೆ. ಸೇನೆಯಲ್ಲಿ ಮೇಲಧಿಕಾರಿಗಳಿಂದ ಕೆಳಗಿನವರಿಗೆ ಆಗುತ್ತಿರುವ ಅವಮಾನ, ಕಿರುಕುಳ, ಮಾನಸಿಕ ಹಿಂಸೆಗಳನ್ನು ತಪ್ಪಿಸಲು ಈ ರೀತಿಯ ಹೊಸ ಆಲೋಚನೆಗಳನ್ನು ಸೈನ್ಯದ ಭಾಗವಾಗಿ ಅಳವಡಿಸಿ ಕೊಳ್ಳಲು ಕೇಂದ್ರ ಸರ್ಕಾರವು ಈಗ ಮುಂದೆ ಬರುತ್ತಿದೆಯಂತೆ. ಎಲ್ಲಾ ವರ್ಗದ ಉನ್ನತ ಹುದ್ದೆಗಳಲ್ಲಿರುವವರಿಗೂ, ಪರಸ್ಪರ ಸಹಜವಾಗಿ ಯಾವುದೇ ರೀತಿಯ ಭಯವಿಲ್ಲದೇ ಸ್ನೇಹ ಭಾವದಿಂದ ಬೆರೆಯಲು, ಕೆಳಹಂತದ ಸೈನಿಕರಿಗೂ ಅವಕಾಶವಾಗುವಂತೆ ಈ ಸಂಸ್ಕಾರ ಶಾಲೆಗಳಲ್ಲಿ ಮೌಲ್ಯಗಳನ್ನು ತಿಳಿಸಿಕೊಡಲಾಗುತ್ತದಂತೆ!

## ಅಂಕಿ ಅಂಶಗಳು ಏನು ಹೇಳುತ್ತವೆ

ಉತ್ತಮ ದೈಹಿಕ ಸಾಮರ್ಥ್ಯದ ಜೊತೆಗೆ ಮಾನಸಿಕ ಸ್ಥೈರ್ಯ ಗಟ್ಟಿತನವಿದ್ದರೆ ಮಾತ್ರ ಬಲಿಷ್ಠ ಭಾರತದ ಸೈನಿಕನಾಗಿ ಉಳಿಯಲು ಸಾಧ್ಯ. ಯುದ್ಧ ಭೂಮಿಯಲ್ಲಿ ಹೋರಾಡಬೇಕಾದರೇ ಮಾನಸಿಕ ಸಿದ್ಧತೆಯೇ ಬಹುಮುಖ್ಯ ವಾಗಿರುವುದರಿಂದ, ನಮ್ಮ ಹೆಮ್ಮೆಯ ಭಾರತೀಯ ಸೈನಿಕರು ಆತ್ಮಹತ್ಯೆ ಯಂತಹ ಕ್ಷುಲ್ಲಕ ಸಂಗತಿಗಳ ಹತ್ತಿರಕ್ಕೂ ಸುಳಿಯಬಾರದು. ಆ ರೀತಿಯಲ್ಲಿ ಸರ್ಕಾರಗಳು ನಮ್ಮ ಸೈನಿಕರನ್ನು ತಯಾರುಮಾಡಬೇಕಿದೆ. ಸೈನ್ಯದಲ್ಲಿ ಸೀನಿಯರ್ ಜೂನಿಯರ್ ಗಳ ಮಧ್ಯೆ ಆಗಾಗ್ಗೆ ನಡೆಯುವ ಮನಸ್ತಾಪಗಳು ಉಂಟಾಗದಂತೆ, ಒಗ್ಗಟ್ಟಿನ ಕೋಟೆಯೊಳಗೇ ಪರಸ್ಪರ ಮಾನಸಿಕ ಕ್ಷೋಭೆ ಬುಗಿಲೇಳದಂತೆ ಸೈನಿಕರನ್ನು ಸಂಸ್ಕಾರವಂತರನ್ನಾಗಿಸಲು ಈ 'ಸಂಸ್ಕಾರ ಶಾಲೆ'ಗಳನ್ನು, ಯೋಗ ಧ್ಯಾನದ ಕೇಂದ್ರಗಳನ್ನು ತೆರೆಯಲು ಸೈನಿಕರ ಕಲ್ಯಾಣ ಸಂಸ್ಥೆ ಈಗ ಸರ್ಕಾರದ ಜೊತೆ ಕೈಜೋಡಿಸಲು ಮುಂದೆ ಬರುತ್ತಿದೆ. ಏಕೆಂದರೆ ಅಂಕಿ ಅಂಶಗಳನ್ನು ನೋಡುತಿದ್ದರೇ ನಮ್ಮ ಮನಸ್ಸಿಗೆ ಆಘಾತವಾಗುತ್ತದೆ. 2020 ರಿಂದ ಕೇವಲ ಒಂದೇ ವರುಷದಲ್ಲಿ 2021ರ ಸೆಪ್ಟೆಂಬರ್ ವರೆಗೇ ಸಿ.ಆರ್.ಪಿ.ಎಫ್. ನಲ್ಲಿ 101 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಅದಕ್ಕೂ ಹಿಂದಿನ ವರ್ಷಗಳಲ್ಲಿ 120ಕ್ಕೂ ಹೆಚ್ಚಿನ ಸೈನಿಕರ ಸೂಸೈಡ್ ಕೇಸುಗಳು ವರದಿಯಾಗಿ ನಮ್ಮ ಸೈನಿಕ ವ್ಯವಸ್ಥೆಯೇ ತಲೆತಗ್ಗಿಸುವಂತೆ ಮಾಡಿವೆ. ಸೈನ್ಯದಲ್ಲಿ ಪರಸ್ಪರ ಗೌರವಿಲ್ಲದೆ ಜಗಳ, ಮನಸ್ತಾಪ, ವಾಗ್ವಾದಗಳು ಹುಟ್ಟಿಕೊಂಡು ಕೊಲೆವರೆಗೂ, ಆತ್ಮಹತ್ಯೆವರೆಗೂ, ತಲುಪುತ್ತಿವೆ. ಇದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸೈನಿಕ ವ್ಯವಸ್ಥೆಯ ವರ್ಚಸ್ಸಿಗೆ ಬಾರೀ ದಕ್ಕೆಉಂಟಾಗುತ್ತಿದೆ. ದೇಶದೊಳಗಿನ ಗಡಿ ಭಾಗದ ಭಯೋತ್ಪಾದ, ಕೆಂಪು ಉಗ್ರರ ವಿರುದ್ಧದ ಹೋರಾಟ,ಯುದ್ಧ, ತುರ್ತು ಪರಿಸ್ಥಿತಿಗಳಲ್ಲಿ ಹಗಲಿರುಳೆನ್ನದೆ ಪ್ರಾಣದ ಹಂಗು ತೊರೆದು ಹೋರಾಡುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿ.ಆರ್.ಪಿ.ಎಫ್) ಯ ಸೈನಿಕರು ಆತ್ಮಹತ್ಯೆಗೆ ಶರಣಾಗುವ ಈ ಕೆಟ್ಟ ಚಾಳಿಗೆ ಅಂತ್ಯ ಹಾಡಲೇಬೇಕಿದೆ ಎಲ್ಲಾ ಬೆಟಾಲಿಯನ್ ಗಳಲ್ಲೂ



● ಪರಶಿವ ಧನಗೂರು



ನೈತಿಕ ಮೌಲ್ಯಗಳನ್ನು ಗಟ್ಟಿಗೊಳಿಸುವುದು, ಪರಸ್ಪರ ಬಾಂಧವ್ಯ ಬೆಸೆಯುವ, ಕಷ್ಟ ಸುಖ ಹಂಚಿಕೊಳ್ಳುವ, ಪ್ರೀತಿ ಬೆಸೆಯುವಂತಹ ಅನೌಪಚಾರಿಕ ಕಾರ್ಯಕ್ರಮ ಗಳನ್ನು ಹೆಚ್ಚಾಗಿ ನಡೆಸಿದಾಗ ಮಾತ್ರ ಏನಾದರೂ ಬದಲಾವಣೆ ಪ್ರಾರಂಭವಾಗಬಹುದು. ಯುದ್ಧ ವಿಮಾನ ಪತನದ ಸಾವುಗಳು, ಬಾಂಬ್ ಬ್ಲಾಸ್ಟ್,ಗಡಿದಾಳಿ, ಹೆಲಿಕಾಪ್ಟರ್ ಪತನದ ಸಾವು ನೋವುಗಳು ಸಹಜವಾಗಿ ಸೈನಿಕರನ್ನು ಕಂಗೆಡಿಸಲೂಬಹುದು. ಧೈರ್ಯ ಗೆಡಿಸಲೂಬಹುದು. ಆದರೇ ಇವೆಲ್ಲ ಸಾವು ನೋವುಗಳನ್ನೂ ಮೀರಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುವುದನ್ನೂ, ಯುದ್ಧಭೂಮಿಯಲ್ಲಿ ನಿಂತು ಹೋರಾಡುವುದನ್ನೂ, ನಮ್ಮ ವೀರ ಸೈನಿಕ ಪರಂಪರೆ ಹೇಳಿಕೊಟ್ಟಿದೆ. ಇತಿಹಾಸದ ಪುಟಗಳು ಭಾರತೀಯ ಸೈನಿಕರಿಗೆ ಎಂದೆಂದೂ ಹೋರಾಡಲು ಸ್ಪೂರ್ತಿಯಾಗಿಯೇ ಇವೆ. ಅಂತಹ ವೀರ ಸೈನಿಕರ ಭೂಮಿ ನಮ್ಮ ಭಾರತ. ಹೀಗಿದ್ದರೂ ಕೂಡ ಎಲ್ಲಾ ಸೈನಿಕರ ಒಳಗೂ ಒಬ್ಬ ಸಾಮಾನ್ಯ ಮನುಷ್ಯನೇ ಇರುತ್ತಾನೆ! ಅವನೂ ಕೂಡ ಹಿಡಿ ಪ್ರೀತಿಗಾಗಿ, ತನ್ನದೇ ಸಹೋದ್ಯೋಗಿಗಳ ಸ್ನೇಹಕ್ಕಾಗಿ, ಮೇಲಧಿಕಾರಿಗಳ ಸಣ್ಣ ಶಹಬ್ಬಾಸ್ ಗಿರಿ, ವಿಶ್ವಾಸ ನಂಬಿಕೆಗಾಗಿ ಸಣ್ಣ ನಿರೀಕ್ಷೆ ಇಟ್ಟುಕೊಂಡಿರುವುದೇನೂ ಅಪರಾಧವಲ್ಲ. ಅಂತಹ ಮಾನಸಿಕ ಒಬ್ಬಂಟಿತನದ ಹೊತ್ತಲ್ಲಿ, ಒಂಟಿಸೈನಿಕನ ಕತ್ತಲ ರಾತ್ರಿಗೆ ಹೆಗಲಾಗಬೇಕಾದದ್ದೂ ನಮ್ಮದೇ ಸರ್ಕಾರ ಮತ್ತು ಹಿರಿಯ ಮಿಲಿಟರಿ ಅಧಿಕಾರಿಗಳು. ಆತನ ಮಾನಸಿಕ ಖಿನ್ನತೆಯನ್ನು ಒಂದು ಕಾಯಿಲೆ ಎಂದು ಪರಿಗಣಿಸದೆ ಒಂದು ಸಣ್ಣ ಭರವಸೆ, ನಂಬಿಕಯ ಮೂಲಕ ಆತನೊಳಗೇ ಆತ್ಮವಿಶ್ವಾಸವನ್ನು, ಹೊಸ ಚೈತನ್ಯವನ್ನು ತುಂಬಿಸಬೇಕಾದುದ್ದು ನಮ್ಮದೇ ಕರ್ತವ್ಯವಾಗಿದೆ.

## ಆಪ್ತ ಸಮಾಲೋಚನೆ ಅಗತ್ಯ

ಆಪ್ತ ಸಮಾಲೋಚನೆಯ ಮೂಲಕ ಸೈನಿಕರಲ್ಲಿ ದೇಶಪ್ರೇಮವನ್ನು, ಗಟ್ಟಿಗೊಳಿಸುತ್ತಾ, ಅವರ ವೈಯಕ್ತಿಕ ಜೀವನದ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು, ಕರ್ತವ್ಯ ಪಾಲನೆಯನ್ನು ನೆನಪಿಸಿ ಮಾರ್ಗದರ್ಶನ ನೀಡುವಂತಹ ಕೆಲಸ ಮಾಡಬೇಕು. ಇಲ್ಲದಿದ್ದರೆ ದೇಶದ ಅತಿದೊಡ್ಡ ಅರೆಸೇನಾ ಪಡೆಯಾದ ನಮ್ಮ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಬೆಟಾಲಿಯನ್

ಗಳಲ್ಲಿರುವ ಸೈನಿಕರು ದಿನ
ಮಾನಸಿಕ ಖಿನ್ನತೆಗೆ ತುತ
ಶರಣಾಗತಿಯಾಗುವುದು
ಇದೇ ವರ್ಷದ ಮಾರ್ಚ್
ದಿನ ಕೇವಲ 24ಗಂಟೆಗ
ಕಾಶ್ಮೀರದ ಗಡಿಯಲ್ಲಿ ಬ
ಕಾವಲಿಗಿದ್ದ ನಮ್ಮ ಮೂ
ಸಾಮೂಹಿಕ ಸನ್ನಿಯ ರಿ
ಮಾಡಿಕೊಂಡಿದ್ದರು! ಈ
ಇಡೀ ಇಂಡಿಯನ್ ಆವಿ
ಬೀಳಿಸಿತ್ತು. ಒಬ್ಬ ಸೈನಿಕ
ನೇಣಿಬಿಗಿದುಕೊಂಡಿದ್ದ.
ಗುಂಡಿಕ್ಕಿಕೊಂಡು ಆತ್ಮಹ
ಸತ್ತವರೆಲ್ಲಾ 24,28,30
ಭಾರತೀಯ ಆರ್ಮಿಯ
ಸೈಕಿಯಾಟ್ರಿಕ್ ಸೆಂಟರ್
ಮೆಂಟ್ ಕೋರ್ಸ್ ಗಳು
ಹೆಸರಿನ ಕ್ಯಾಂಪೇನ್ ಸ
ಕಾಡುಹರಟೆಗಳು ಸೈನಿಕರ
ಯಾವ ಪ್ರಯೋಜನಕ್ಕೂ
ಹೆಲ್ತ್ ಸೆಂಟರ್ ಗಳೂ,
ಗಳಿಂದಲೂ ಈಗ ಪರಿಹ
ಇನ್ಸ್ಟಿಟ್ಯೂಟ್ ಆಫ್ ಸೈಕ
ಸಂಸ್ಥೆಯ ಅಧ್ಯಯನಗಳಿ
,ವಾಲೆಂಟರಿ ರಿಟೈರ್ಡ್
ಸಂಬಂಧಿಸಿದಂತೆ ನಿಖರ
ಇಂಡಿಯನ್ ಏರ್ ಫೋ
ನೇವಿಗಳಲ್ಲೂ ಸೈನಿಕರ
ಮರುಕಳಿಸುತ್ತಿವೆ. ಎಷ್ಟೋ
ತನ್ನದೇ ಮೊಬೈಲ್ ಬಳ

# ತ್ಮಹತ್ಯೆ ಸೂತಕ
# ು ಸೇನೆಯಲ್ಲಿ
# ಂಕ..!!




ೇ ದಿನೇ ಮತ್ತಷ್ಟು
ತ್ತಾಗಿ ಆತ್ಮಹತ್ಯೆಗೆ
ನಡೆಯುತ್ತಲೆ ಇರುತ್ತದೆ.
ತಿಂಗಳಲ್ಲಿ ಒಂದೇ
ಳ ಅವಧಿಯಲ್ಲಿ ಜಮ್ಮು
ೇರೆ ಬೇರೆ ಕಡೆ ಗಡಿ
ರು ಜನ ಸೈನಿಕರು
ೀತಿಯಲ್ಲಿ ಆತ್ಮಹತ್ಯೆ
ಸರಣಿ ಸೈನಿಕರ ಆತ್ಮಹತ್ಯೆ
ರ್ವ ಯನ್ನೇ ಬೆಚ್ಚಿ
ಫ್ಯಾನಿಗೆ ಕೊರಳೊಡ್ಡಿ
ಮತ್ತಿಬ್ಬರು ತಲೆಗೇ
ತ್ಯೆಗೆ ಶರಣಾಗಿದ್ದರು.
ವಯಸ್ಸಿನ ಯುವಕರೇ!
ಲ್ಲಿ ಈಗಿರುವ 23
ಗಳು, ಸ್ಟ್ರೆಸ್ ಮ್ಯಾನೇಜ್
, 'ಮಿಷನ್ ಜಿಂದಗಿ'
ಮಿನಾರುಗಳು, ಕಾಟಾಚಾರದ
ರ ಆತ್ಮಹತ್ಯೆ ತಡೆಯುವಲ್ಲಿ
ಬರುತ್ತಿಲ್ಲ. ಮೆಂಟಲಿ
ಫ್ಯಾಮಿಲಿ ಕೌನ್ಸೆಲಿಂಗ್
ಾರ ದೊರಕುತ್ತಿಲ್ಲ. ಡಿಫೆನ್ಸ್
ಕಾಲಜಿಕಲ್ ರೀಸರ್ಚ್
ಂದಲೂ ಈ ಆತ್ಮಹತ್ಯೆ
ಮೆಂಟ್ ಹೆಚ್ಚಳಕ್ಕೆ
ವಾದ ಉತ್ತರ ಸಿಕ್ಕೇ ಇಲ್ಲ.
ರ್ಸ್, ಇಂಡಿಯನ್
ಆತ್ಮಹತ್ಯಾ ಪ್ರಕರಣಗಳು
ೇ ಬಾರಿ ಕೇವಲ ಸೈನಿಕ
ಸಿದ ವಿಚಾರಕ್ಕೆ ತನ್ನ









ಹಿರಿಯ ಸೈನ್ಯಾಧಿಕಾರಿಯೊಡನೆ ಜಗಳ ಮಾಡಿಕೊಂಡು ತಾನು ತನ್ನದೆ ಸರ್ವಿಸ್ ರೈಫಲ್ ನಿಂದ ಮೇಲಾಧಿಕಾರಿಗೇ ಹೊಡೆದು ತಾನು ಹೊಡೆದುಕೊಂಡು ಸತ್ತ ಉದಾಹರಣೆ ಗಹಷ್ಟೋ ಇವೆ. ಸೈನಿಕರು ತಮ್ಮ ಕುಟುಂಬದಿಂದ ವರ್ಷಾನುಗಟ್ಟಲೆ ದೂರವಿರುವುದರಿಂದ, ಇತ್ತೀಚೆಗೆ ಸೋಷಿಯಲ್ ಮೀಡಿಯಾಗಳಿಂದ, ಮೊಬೈಲ್ ಗಳಲ್ಲಿಯೇ ಎಲ್ಲಾ ಹಳ್ಳಿ, ರಾಜ್ಯಗಳ ವಿಚಾರಗಳೂ ಎಲ್ಲರಿಗೂ ಸಿಗುವುದರಿಂದ ಸಹಜವಾಗಿ ಸೈನಿಕರು ಮನೆಯ ವಿಚಾರ ವಾಗಿ, ತಮ್ಮ ಹುಟ್ಟಿದ ಊರಿನ ವಿಷಯಗಳ ಬಗ್ಗೆ, ಸಹಜ ಕುತೂಹಲ ಆಕರ್ಷಣೆ ಗಳಿಂದ ಮೊಬೈಲ್ ಗಳ ಮೂಲಕ ಸಂವಹನ ನಡೆಸುತ್ತಿರುವುದರಿಂದ ಅವರಲ್ಲಿ ಹಲವಾರು ರೀತಿಯ ಬದಲಾವಣೆಗಳು ಇತ್ತೀಚೆಗೆ ಬಂದಿರುವ ಸಾದ್ಯತೆಯೂ ಇದೆ

## ಖಾಸಗೀತನಕ್ಕೆ ಅವಕಾಶ ನೀಡಬೇಕು

ಆದ ಕಾರಣದಿಂದ ಸೈನಿಕರಿಗೂ ಆಗಾಗ್ಗೆ ತಮ್ಮ ಖಾಸಗಿ ಸಮಸ್ಯೆ ಗಳನ್ನು ಪರಿಹರಿಸಿಕೊಳ್ಳಲು ರಜಾನೀಡಿ ಊರಿಗೆ ಕಳುಹಿಸುವುದು ಕೂಡ ನಮ್ಮ ಸೈನ್ಯದ ಕಾನೂನು,ನೀತಿ ನಿಯಮಗಳ ಪರಿಧಿಯಲ್ಲಿ ಪರಿಶೀಲನೆಗೆ ಒಳಪಡಬೇಕು. 2016ರಿಂದ 2018 ರ ವರೆಗೆ 320ಕ್ಕೂ ಹೆಚ್ಚು ಸೈನಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆಂದರೆ ಅದರ ಪ್ರಭಾವ ಉಳಿದ ಸೈನಿಕರ ಮೇಲೆ ಹೇಗೆ ಬೀರಿರಬೇಕೆಂಬುದನ್ನು ಊಹಿಸಿಕೊಳ್ಳಿ. ಈ ಎಲ್ಲಾ ಕಾರಣ ಗಳಿಗಾಗಿಯೇ ಏನೋ ಇತ್ತೀಚೆಗಂತೂ ಭಾರತೀಯ ಸೇನೆಯಿಂದ ಸ್ವಯಂ ನಿವೃತ್ತಿ ಗೊಳ್ಳುವವರ ಸಂಖ್ಯೆ ಪ್ರತೀ ವರ್ಷ ದಿಡೀರ್ ಏರಿಕೆ ಯಾಗುತ್ತಿದೆ. ಬಿ.ಎಸ್.ಎಫ್.ಮತ್ತು ಸಿ.ಆರ್.ಪಿ.ಎಫ್. ಎರಡನ್ನೂ ಸೇರಿ ಇದುವರೆಗೂ 81000 ಸೇನಾ ಸಿಬ್ಬಂದಿಗಳು  ಸ್ವಯಂ ನಿವೃತ್ತಿ ಪಡೆದ ಕೊಂಡಿದ್ದಾರೆ! 2011ರಿಂದ 2020ರ ವರೆಗೂ 15904,ಜನರು 2012ರಲ್ಲಿ 11000ಜನರು, 2013ರಲ್ಲಿ ಅತಿ ಹೆಚ್ಚು 2332 ಜನರು ಸ್ವಯಂ ನಿವೃತ್ತಿ ಹೋಗಿದ್ದಾರೆ. ಬಿ.ಎಸ್.ಎಫ್ ನಲ್ಲೇ ಅತಿ ಹೆಚ್ಚು 36768 ಮತ್ತು ಸಿ.ಆರ್.ಪಿ.ಎಫ್.26164,ಸಿ.ಐ.ಎಸ್.ಎಫ್.6705, ಅಸ್ಸಾಂ ರೈಫಲ್ಸ್ 4947 ಎಸ್.. ಎಸ್.ಬಿ.3230,ಐ.ಟಿ.ಬಿಪಿ.3193 ಇನ್ನುಳಿದಂತೆ ಈ ಸೈನಿಕ ವೃತ್ತಿಯಿಂದಲೇ ಈ ಹತ್ತು ವರ್ಷಗಳಲ್ಲಿ ಬೇಸತ್ತು ರಾಜೀನಾಮೆ ಬೀಸಾಡಿ ಸೈನ್ಯದಿಂದಲೇ ಹೊರ ಹೋದವರ ಸಂಖ್ಯೆ ಹತ್ತಿರತ್ತಿರ 16000! ದೇಶಕ್ಕೆ ಬೆನ್ನೆಲುಬಾಗಿ, ಆಸರೆಯಾಗಿ ನಿಲ್ಲಬೇಕಿದ್ದ, ಗಡಿಯಲ್ಲಿ ಅತ್ಯವಶ್ಯಕತೆಯಿದ್ದ ಸೈನಿಕರು ಸೇನಾಧಿಕಾರಿಗಳು, ಕೇವಲ ಮನೆಯ ಕಾರಣ, ವೈಯಕ್ತಿಕ ಸಮಸ್ಯೆಗಳ ನೆಪದಲ್ಲಿ ಹೀಗೆ ಸಾವಿರಾರು ಜನ ನಿವೃತ್ತಿ ಘೋಷಿಸಿಕೊಂಡು ಹೋಗಿ ಮನೆಸೇರಿಕೊಂಡರೇ, ದೇಶದ ಭದ್ರತೆಯ–ರಕ್ಷಣೆಯ ಗತಿಯೇನೂ? ಏನಾಗುತ್ತಿದೆ ನಮ್ಮ ದೇಶದ ಸೈನ್ಯದೊಳಗೇ? ಇಷ್ಟೆಲ್ಲಾ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ದೇಶದ ರಕ್ಷಣಾ ವ್ಯವಸ್ಥೆಯನ್ನು ಕಟ್ಟಿ, ಉನ್ನತಾಧಿಕಾರಿಗಳಿಗೆ ಸಕಲ ಸೌಲಭ್ಯಗಳನ್ನು ನೀಡಿ ನಮ್ಮ ಕೇಂದ್ರ ಸರ್ಕಾರ ಸಲಹುತ್ತಿದ್ದರೂ, ಕೂಡ ಈ ರೀತಿ ಆತ್ಮಹತ್ಯೆ ಗಳೂ, ವಾಲೆಂಟರಿ ರಿಟೈರ್ಡ್ ಮೆಂಟ್, ರಾಜೀನಾಮೆಗಳು ನಡೆಯುತ್ತಿರಲು ಕಾರಣವೇನೆಂಬುದೇ ತಿಳಿಯುತ್ತಿಲ್ಲ. ಸಕಲ ಮಿಲಿಟರಿ ಇಂಟಲಿಜನ್ಸ್ ವಿದ್ಯೆಯನ್ನು ಕಲಿತು ದೇಶಕ್ಕೆ ಆಸ್ತಿಯಾಗುವ ಸೈನಿಕರು ಕ್ಷುಲ್ಲಕ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗತರಾಗುವುದು, ನಿವೃತ್ತಿ ಯಾಗಿ ಮನೆ ಸೇರುತ್ತಿರುವುದು, ನಮ್ಮ ದೇಶಕ್ಕಾಗುತ್ತಿರುವ ಬಹುದೊಡ್ಡ ನಷ್ಟವಲ್ಲವೇ? ಇಂತಹ ಘಟನೆಗಳಿಗೆ, ಪರಿಸ್ಥಿತಿಗೆ ಯಾರು ಹೊಣೆ? ಇದು ಹೀಗೆಯೇ ಆದರೇ ದೇಶ ಕಾಯಲು ರೋಬೋಟ್ ಗಳನ್ನು ನೇಮಿಸಿಕೊಂಡು ಬದುಕಬೇಕಾದ ಕಾಲ ಬರುತ್ತದೆಯೇನೋ ಅಥವಾ ನಮ್ಮ ನೆಲದಲ್ಲಿ ಈಗಾಗಲೇ ಪ್ರಾರಂಭವಾಗಿರುವ ಹಳೆಯ ಬ್ರಿಟಿಷ್ ಕಾಲದ ಸಹಾಯಕ ಸೈನಿಕ ಪದ್ದತಿ ಎಂಬ ವಿದೇಶಿ ಬಾಡಿಗೆ ಸೈನಿಕರ ಸಹಾಯ–ಸಹಕಾರ ಪಡೆದುಕೊಂಡು, (ಬೇರೆ ಮಿತ್ರದೇಶದ ಸೈನಿಕರಿಗೆ ) ನಮ್ಮ ನೆಲದಲ್ಲಿ ಭದ್ರನಲೆಯೊದಗಿಸಿಕೊಟ್ಟು, ಭಂಕರ್ ನಿರ್ಮಿಸಿ ಕೊಟ್ಟು ಅವರೇಳಿದಂಗೇ ಕೇಳುವ ಕಾಲ ಮತ್ತೇ ಪುನರಾವರ್ತನೆ ಆದರೇನು ಗತಿ? ಹಾಗಾಗುವುದು ಬೇಡ ಎನ್ನುವುದಾದರೇ ನಮ್ಮ ಸೈನಿಕರು ನಮ್ಮ ಹೆಮ್ಮೆ. ಜೈ ಜವಾನ್ ಜೈ ಕಿಸಾನ್ ನಮ್ಮದೇ ಧ್ಯೇಯವಾಕ್ಯ ನಮ್ಮ ಸೈನಿಕರ ನೋವು, ಕಷ್ಟ, ಖಿನ್ನತೆ ನಮ್ಮದೇ ಎಂದು ತಿಳಿದು ಎದೆಗೆ ಎದೆ ಕೊಟ್ಟು ಸೈನಿಕರ ನೋವನ್ನು ಆಲಿಸಬೇಕಿದೆ. ಸೈನ್ಯದಲ್ಲಿರುವ ಮೇಲಿನ ಎಲ್ಲಾ ಅಧಿಕಾರಿವರ್ಗ ತಮ್ಮ ದರ್ಪ–ದೌರ್ಜನ್ಯಗಳನ್ನು ಕೆಳಗಿನ ಸೈನಿಕರ ಮೇಲೆ ಹೇರುವುದನ್ನು ಬಿಡಬೇಕಾಗುತ್ತದೆ. ನಾವೆಲ್ಲಾ ಭಾರತೀಯರು ನಮ್ಮ ಭಾರತೀಯ ಮಿಲಿಟರಿ ನಮ್ಮ ಉಸಿರು .ಅದರೊಳಗೆ ಎಂದಿಗೂ ಬಿರುಕು ಬರಬಾರದು. ಒಳಜಗಳ ಮನಸ್ತಾಪ ಸಲ್ಲದು. ವೀರಸೈನಿಕರೆಂದಿಗೂ ಹೇಡಿಗಳಂತೆ ಆತ್ಮಹತ್ಯೆಗೆ ಕೊರಳೊಡ್ಡುವ ದುಸ್ಥಿತಿ ಉಂಟಾಗಬಾರದು. ಯುದ್ಧಭೂಮಿಯಿಂದ ಕಾಲ್ತೆಗೆದು ನಿವ್ರತ್ತಿ ಹೆಸರಲ್ಲಿ ಮನೆಸೇರಿಕೊಳ್ಳುವುದು ದೇಶಪ್ರೇಮಿ ಸೈನಿಕನಿಗೆ ಶೋಭೆಯಲ್ಲ. ಪ್ರತಿ ಭಾರತೀಯನ ಬೆಂಬಲ–ಸಹಕಾರ ನಮ್ಮ ಸೈನಿಕರಿಗಿದೆ ಎಂಬುದು ಸಾಬೀತಾಗಬೇಕು. ಕೇಂದ್ರಸರ್ಕಾರ ಸೈನಿಕರನ್ನುಈ ಆತ್ಮಹತ್ಯೆಯ ಕೂಪದಿಂದ  ಮೇಲೆತ್ತಲು ಕಾರ್ಯಪ್ರವೃತ್ತರಾಗಬೇಕು. ಅನ್ನ ಕೊಡುವ ರೈತ ಮತ್ತು ಪ್ರಾಣಕೊಡುವ ಸೈನಿಕರು ಆತ್ಮಹತ್ಯೆ ಹಾದಿ ಹಿಡಿದ ದೇಶಕ್ಕೆ ಭವಿಷ್ಯವಿಲ್ಲ. ನಮ್ಮ ಭಾರತವನ್ನು ಆ ಸ್ಥಿತಿಗೆ ನಾವು ಕೊಂಡೊಯ್ಯುವುದಿಲ್ಲವೆಂದು ಶಪತಮಾಡೋಣ. ನಮ್ಮ ಸೈನಿಕರ ಹ್ರದಯದ ಮಾತುಗಳನ್ನೂ ಕೇಳಿಸಿಕೊಳ್ಳೋಣ.



ಮೋದಿ ಮತ್ತು ಶಾ ಟೀಂ 2023 ರ ಚುನಾವಣೆಗೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ತಗೆದುಕೊಂಡಿರುವ ಅವರು ಕರ್ನಾಟಕದಲ್ಲಿ ಸಿಎಂ ಮತ್ತು ಅವರ ತಂಡದ ಸಾಮರ್ಥ್ಯಧದ ಕುರಿತು ಗುಪ್ತ ಮಾಹಿತಿಯನ್ನು ಕಲೆ ಹಾಕುತ್ತಿದೆ ಆ ಬಗ್ಗೆ ಸರ್ವೆಯನ್ನು ನಡೆಸುತ್ತಿದೆ. ಮೋದಿ ಮತ್ತು ಶಾ ಅವರೆ ಗುಪ್ತವಾಗಿ ಈ ತಂಡವನ್ನು ರಾಜ್ಯಕ್ಕೆ  ಕಳಿಸಿದೆ ಆ ತಂಡ ಗೌಪ್ಯವಾಗಿ ಮಾಹಿತಿಗಳನ್ನು ಕಲೆಹಾಕುತ್ತಿದೆ .ಕೇವಲ ಸಿಎಂ ಮಾತ್ರವಲ್ಲ ಸಚಿವರ ಮೇಲೂ ಈ ತಂಡ ನಿಗಾ ಇಟ್ಟಿದೆ ಸಚಿವ ಕಾರ್ಯ ವೈಖರಿ ಗೆಲ್ಲುವ ಮತ್ತು ಗೆಲ್ಲಿಸುವ ವರ್ಚಸ್ಸಿನ ಬಗ್ಗೆಯೂ ಸರ್ವೆ ನಡೆಸಲಾಗುತ್ತಿದೆ. ಸಚವರ ಶಕ್ತಿ ಸಾಮರ್ಥ್ಯವನ್ನು ಆ ಮೂಲಕ ಅಳೆದು 2023 ಕ್ಕೆ ರಣ ತಂತ್ರ ಎಣೆಯಲಾಗುತ್ತಿದೆ. ಈ ಮಾಹಿತಿಯ ಪ್ರಕಾರ.

# ಸಂಕ್ರಾಂತಿ ನಂತರ ಬದಲಾವಣೆ ಪರ್ವ

● ತುರುವನೂರು ಮಂಜುನಾಥ

ಬೊಮ್ಮಾಯಿ ಸರ್ಕಾರ ಹಳಿ ತಪ್ಪಿದೆ ಎನ್ನುವುದಕ್ಕೆ ಹಲವು ಸಾಕ್ಷಿಗಳು ಸಿಗುತ್ತವೆ.ಸಿಎಂ ಎನ್ನುವ ಈ ಹುದ್ದೆಗೆ ಇರಬೇಕಾದ ಸಲ್ಲಿಸಬೇಕಾದ ಗೌರವಗಳನ್ನು ಕೆಲವರು ಸಲ್ಲಿಸುತ್ತಿಲ್ಲ ಎನ್ನುವುದು ಈಗೀಗ ಬಹಿರಂಗವಾಗುತ್ತಿದೆ. ಅವರ ಮಾತಿಗೆ ಬೆಲೆ ಇಲ್ಲದೆ ಕೆಲವರು ಸುಖಾ ಸುಮ್ಮನೆ ಮಖ ತಿರುವಿಸಿಕೊಂಡು ಹೋಗುತ್ತಿದ್ದಾರೆ.



ಆರಂಭದಲ್ಲಿ ಶೂರತ್ವ ತೋರಿಸಿದ ಬಸವರಾಜ್‌ಮೊಮ್ಮಾಯಿ ನಂತರದ ದಿನಗಳಲ್ಲಿ ಅದೇಕೋ ಆ ಶೂರತ್ವ ಬರಲಿಲ್ಲ .ಅದರಲ್ಲೂ ಬಿಟ್‌ಕಾಯಿನ್ ಹಗರಣದ ನಂತರ ಅವರ ಸಂಪೂರ್ಣ ಚಿತ್ರಣವೇ ಬದಲಾಗಿ ಹೋಯಿತು. ಅಲ್ಲಿಂದ ಅವರು ಮೇಲೆಳಲೇ ಇಲ್ಲ ಕುಂಟುತ್ತಲೇ ಅಧಿಕಾರವನ್ನು ಅನುಭವಿಸುತ್ತಿರುವ ಅವರನ್ನು ಕೆಳಗಿಳಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಮೊನ್ನೆನಡೆದ ಅಧಿವೇಶದನಲ್ಲಿ ಒಂದಿಷ್ಟು ವೀರಾವೇಶದ ಮಾತುಗಳಾಡುವಮೂಲಕ ತಮ್ಮ ತನವನ್ನು ಉಳಿಸಿಕೊಂಡಿದ್ದೇನೋ ನಿಜ ಆದರೆ ಅದು ಬಹಳಷ್ಟು ಹೊತ್ತು ಇರಲಿಲ್ಲ ಕೆಳಮನೆಯಲ್ಲಿ ಗುಡುಗಿ ಅಬ್ಬರಿಸಿದ ಬೊಮ್ಮಾಯಿ ಮೇಲ್ಮನೆಯಲ್ಲಿ ಸಂಪೂರ್ಣ ಪೇಲವವಾಗಿದ್ದರು. ಮತಾಂತರ ಕಾಯಿದೆಯನ್ನು ಅಬ್ಬರಿಸಿ ತಂದು ಮೇಲ್ಮನೆಯಲ್ಲಿ ಪಾಸ್ ಮಾಡಲು ಮಾಡಿದ ಕಸರತ್ತಿಗೆ ಅವರನ್ನು ಹೇಳದೆ ಕೇಳದೆ ಶಾಸಕರು ಸಚಿವರು ನಾಪತ್ತೆಯಾಗಿದ್ದರು ಸಾಕಷ್ಟು ಸಂಖ್ಯಾಬಲವಿಲ್ಲದೆ ಪೆಚ್ಚೆ ಮೋರೆ ಹಾಕಿದ್ದ ಅವರು ದೂರವಾಣಿ ಕರೆ ಮೂಲಕ ಕರೆ ಮಾಡಿ ಕರೆಸಿಕೊಂಡು ಆ ಪರಿ ನೋಡಿದರೆ ಅವರ ಸರ್ಕಾರ ಹಳಿಯ ಮೇಲೆ ನಡೆಯುತ್ತಲೇ ಇಲ್ಲ ಎನಿಸುತ್ತದೆ.



ಮುಖ್ಯಮಂತ್ರಿ ಹುದ್ದೆಯ ಮೇಲೆ ಬಂದು ಕುಳಿತು ಐದು ತಿಂಗಳಾದರೂ ಬಸವರಾಜ ಬೊಮ್ಮಾಯಿ ಸರ್ವ ಶಕ್ತ ನಾಯಕರಾಗಿ ಹೊರಹೊಮ್ಮಿಯೇ ಇಲ್ಲ. ಬದಲಿಗೆ ಕಾಮನ್ ಮ್ಯಾನ್ ಇಮೇಜು ತಮ್ಮನ್ನು ರಕ್ಷಿಸುತ್ತದೆ ಎಂಬ ಭ್ರಮೆಯನ್ನು ಬಿತ್ತಿಕೊಂಡು ಈಗ ಕಂಗಾಲಾಗುವ ಸ್ಥಿತಿಗೆ ಬಂದಿದ್ದಾರೆ. ಅಂದ ಹಾಗೆ ಜಲಸಂಪನ್ಮೂಲ, ಲೋಕೋಪಯೋಗಿ, ಕಂದಾಯ ಸೇರಿದಂತೆ ಹಲವು ಪ್ರಮುಖ ಖಾತೆಗಳೇನಿವೆ? ಅಲ್ಲಿ ನಡೆಯುವ ವ್ಯವಹಾರಗಳ ಮೇಲೆ ಅವರಿಗೆ ನಿಯಂತ್ರಣವೇ ಇಲ್ಲ

ಹೀಗಿದ್ದಾಗ ಬಸವರಾಜ ಬೊಮ್ಮಾಯಿ ಅವರಿಗೆ ತುಂಬ ಜವಾಬ್ದಾರಿಗಳೇನಿಲ್ಲ. ಹೀಗಾಗಿ ಅವಕಾಶ ಸಿಕ್ಕಾಗ ತಮಗಿರುವ ದಿವ್ಯಜ್ಞಾನವನ್ನು ಪ್ರದರ್ಶಿಸುತ್ತಾ, ಉಳಿದಂತೆ ಯಾರು ಕರೆದರೂ ತಪ್ಪಿಸದೆ ರೆಗ್ಯುಲರ್ ಆಗಿ ಮದುವೆ, ಮುಂಜಿಯಂತಹ ಕಾರ್ಯಕ್ರಮಗಳಿಗೆ ಹೋಗುತ್ತಿದ್ದಾರೆ.

## ಕಾರ್ಯಕಾರಣಿಗೆ ಪ್ರಮುಖರೆ ಇಲ್ಲ

ಒಬ್ಬ ಮುಖ್ಯಮಂತ್ರಿ ಪ್ರಭಲವಾಗಿದ್ದರೆ ಅವರ ಮಾತನ್ನು ಎಲ್ಲರೂ ಕೇಳುತ್ತಾರೆ ಹೇಳಿದ್ದನ್ನು ಪಾಲಿಸುತ್ತಾರೆ ಆದರೆ ಅವರೇ ವಿಫಲವಾದರೆ ಇನ್ನೂ ಹಿಂದಿನ ಬಂಡಿ ಹೇಗೆ? ಈಗ ಆಗಿರುವುದೇ ಹಾಗೆಯೇ.. ಬಿಜೆಪಿ ಕರ್ಯಕಾರಣಿ ಸಭೆಗೆ ಬರಬೇಕಾದ ಪ್ರಮುಖರೆ ಇಲ್ಲ ಅಲ್ಲಿ ಗೈರಾದವರೇ ಹೆಚ್ಚು ಯಾಕೆಂದರೆ ಅಧಿವೇಶನ, ಚುನಾವಣೆಯಲ್ಲಿ ವೈಫಲ್ಯಗಳ ಕುರಿತು ಸಮಾಲೋಚನೆ ಮಾಡುವ ಸಭೆಯಲ್ಲೇ ಬೇಕಾದವರು ಇಲ್ಲದಿದ್ದರೇ ಹೇಗೆ? ಅವರನ್ನು ನಿಯಂತ್ರಿಸಬೇಕಾದ್ದದ್ದು ಒಬ್ಬ ಮುಖ್ಯಮಂತ್ರಿಯಾದವರ ಜವಾಬ್ದಾರಿಯಾಗಿರಬೇಕು ಆದರೆ ಆ ಜವಾಬ್ದಾರಿಯನ್ನು ಅವರು ನಿಭಾಯಿಸುತ್ತಿಲ್ಲ ಅವರ ಮಾತಿಗೆ ಬೆಲೆ ಇಲ್ಲದಂತೆ ನಾಯಕರು ಕೈ ಕೊಟ್ಟಿದ್ದಾರೆ ಹೀಗಾದರೆ ಹೈಕಮಾಂಡ್‌ಗೆ ಹೋಗುವ ಸಂದೇಶವಾದರೂ ಏನು ? ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ.



ಹೌದು ಇಂತ ಸಂದೇಶಗಳನ್ನು ಈಗಾಗಲೇ ಹೈಕಮಾಂಡ್‌ಗೆ ತಲುಪಿದೆ. ಹೀಗಾಗಿಯೇ ಅವರನ್ನು ಬದಲಿಸುವ ಯತ್ನಗಳು ನಡೆಯುತ್ತಿವೆ.

ಬಿ.ಎಸ್.ಯಡಿಯೂರಪ್ಪ ಕುಡ ಈ ಕಾರ್ಯಕಾರಣಿ ಸಭೆಗೆ ಹೋಗಿಲ್ಲ ಇದೇ ವೇಳೆ ಅವರು ಪ್ರವಾಸ ತೆರಳಿದ್ದಾರೆ ಇನ್ನೂ ಪುತ್ರ ವಿಜಯೇಂದ್ರ ಹುಬ್ಬಳ್ಳಿಗೆ ತೆರಳಿದ್ದರು ಮಂಗಳವಾರ ಸಂಜೆಯಾದರೂ ಕಾರ್ಯಕಾರಣಿ ಸಭೆಯತ್ತ ಸುಳಿಯಲಿಲ್ಲ ಆ ನಂತರ ಅವರು ಬಂದಿದ್ದಾರೆ ಇನ್ನೂಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಬಿಜೆಪಿ ರಾಜ್ಯ ಕಾರ್ಯಕಾರಿಣಿಗೆ ಗೈರಾಗಿ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ವಿಶೇಷ ವಿಮಾನದಲ್ಲಿ ನವದೆಹಲಿಗೆ ತೆರಳಿದ್ದಾರೆ. ಸಭೆಯಲ್ಲಿ ಬೆಳಗಾವಿ ಪರಿಷತ್ ಸೋಲಿನ ಬಗ್ಗೆ ಚರ್ಚೆ ಸಾಧ್ಯತೆ ಹಿನ್ನೆಲೆ ಏಕಾಂಗಿಯಾಗಿ ದೆಹಲಿಗೆ ತೆರಳಿದ್ದಾರೆ. ಸೋಲಿನ ಪರಾಮರ್ಶೆಯ ಬಗ್ಗೆ ಸಮಿತಿ ರಚಿಸುವುದಾಗಿ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹೇಳ್ತಿದ್ದಂತೆ ರಾಜ್ಯ ಉಸ್ತುವಾರಿ ಆಗಮಿಸಿದ್ರೂ ಭೇಟಿ ಆಗದ ಶಾಸಕ ರಮೇಶ್ ನವದೆಹಲಿಗೆ ತೆರಳಿದ್ದಾರೆ. ನವದೆಹಲಿಯಲ್ಲಿ ಬಿಜೆಪಿ ವರಿಷ್ಠರನ್ನ ಭೇಟಿಯಾಗುವ ಸಾಧ್ಯತೆ ಇದೆ .ಕಳೆದ ಬಾರಿಯೂ ರಮೇಶ್ ಜಾರಕಿಹೊಳಿ ಇದೇ ಕೆಲಸವನ್ನು ಮಾಡಿದ್ದರು. ಇದೇ ಹೊತ್ತಿಗೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಮುಖ್ಯಮಂತ್ರಿ ಬದಲಾವಣೆಯೇ ಇಲ್ಲ ಎಂದಿದ್ದಾರೆ. .ಜೊತಗೆ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹಾಡಿ ಹೊಗಳಿದ್ದಾರೆ . ಇದರ ಅರ್ಥ ಅನರ್ಥವೇ ಹೊರೆತು ಸಿಎಂ ಉಳಿಸುವ ಯತ್ನವಂತೂ ಅಲ್ಲ ಎನ್ನುವುದು ಮೇಲ್ನೋಟಕ್ಕೆತಿಳಿಯುತ್ತದೆ.

ಹಿಂದೆ ಬಿ.ಎಸ್.ಯಡಿಯೂರಪ್ಪ ಅವರನ್ನು ಇದೇ ಅರ್ಥದಲ್ಲೇ ಅರುಣ್ ಸಿಂಗ್ ಹೇಳಿದ್ದರು ಯಾವುದೇ ಕಾರಣಕ್ಕೂ ಸಿಎಂ ಬದಲಾವಣೆ ಇಲ್ಲ ಅವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದು ಹಾಡಿ ಹೊಗಳಿದ್ದರು. ಆಗೆ ಹಾಡಿ ಹೊಗಳಿದೆ 15 ದಿನಗಳಲ್ಲಿಯೇ ಬಿ.ಎಸ್.ಯಡಿಯೂರಪ್ಪ ಅವರನ್ನು ಕೆಳಗಿಳಿಸಿ ಆ ಸ್ಥಾನಕ್ಕೆ ಬಸವರಾಜ್ ಬೊಮ್ಮಾಯಿ ಅವರನ್ನು ತಂದು ಕೂರಿಸಲಾಯಿತು. ಈಗ ಮತ್ತೇ ಅದೇ ರಾಗ ಹಾಡಿದ್ದಾರೆ ಈ ರಾಗದ ನಂತರ ಯಾರು ಆ ಸ್ಥಾನಕ್ಕೆ ಬರುತ್ತಾರೆ ಎನ್ನುವುದಕ್ಕೆ ಹಲವು ಹೆಸರುಗಳು ಮುಂಚೂಣೆಯಲ್ಲಿವೆ.

## ನಿರಾಣಿಗೆ ಕೊಕ್



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬದಲಾವಣೆ ಆಗುತ್ತಾರೆ ಎಂಬ ಸುದ್ದಿ ಹಬ್ಬಿದೆ. ಸಿಎಂ ಸ್ಥಾನಕ್ಕೆ ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಆಯ್ಕೆಯಾಗುವ ಸಾಧ್ಯತೆಯಿದೆ ಎಂದೇ ದೊಡ್ಡ ಸುದ್ದಿಯಾಗಿತ್ತು. ಇತ್ತೀಚೆಗೆ ಬಿಜೆಪಿ ಪಾಳಯದಲ್ಲಿ ಮಹತ್ವದ ಬೆಳವಣಿಗೆ ಆಗಿವೆ. ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಬಿಂಬಿಸಿಕೊಂಡಿದ್ದ ಮುರುಗೇಶ್ ನಿರಾಣಿಗೆ ಸಚಿವ ಸ್ಥಾನದಿಂದ ಕೋಕ್ ಕೊಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಪಂಚಮಸಾಲಿ ಹೋರಾಟದ ಬೆನ್ನಲ್ಲಿ ಮರುಗೇಶ್ ನಿರಾಣಿ ಸಚಿವ ಸ್ಥಾನ ಅಲಂಕರಿಸಿದ್ದರು. ಸಚಿವರಾದ ಬಳಿಕ ಪಂಚಮಸಾಲಿ ಹೋರಾಟಕ್ಕೆ ಕವಡೆ ಕಾಸಿನ ಕಿಮ್ಮತ್ತು ನೀಡಿರಲಿಲ್ಲ. ಹೀಗಾಗಿ ಹೋರಾಟಗಾರರು ಮುನಿಸಿಕೊಂಡಿದ್ದರು. ದಿಢೀರ್ ಬೆಳವಣಿಗೆ ಹಿನ್ನೆಲೆಯಲ್ಲಿ ಮುರುಗೇಶ್ ನಿರಾಣಿ ಸಿಎಂ ಅಭ್ಯರ್ಥಿಯಾಗಲಿದ್ದಾರೆ ಎಂಬ ಸಂಗತಿ ಹೊರ ಬಿದ್ದ ಬೆನ್ನಲ್ಲೇ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಪಂಚಮಸಾಲಿ ಹೋರಾಟ ನೇತೃತ್ವ ವಹಿಸಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಬಳಿ ಸಂಧಾನಕ್ಕೆ ತೆರಳಿದ್ದಾರೆ. ನಿರಾಣಿ ಸಿಎಂ ಆದರೆ ನೀವು ಕ್ಯಾಬಿನೆಟ್‌ಗೆ ಸೇರ್ಪಡೆ ಆಗಿ ಎಂಬ ಮನವೊಲಿಕೆ ಮಾಡುವ ಪ್ರಯತ್ನ ಮಾಡಿದ್ದಾರೆ ಎನ್ನಲಾಗಿದೆ. ಸಂಧಾನದ ಬಗ್ಗೆ ಬಸನಗೌಡ ಪಾಟೀಲ್ ಯತ್ನಾಳ್ ಬಹಿರಂಗವಾಗಿಯೇ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. ಈ ಬೆಳವಣಿಗೆಯಿಂದ ಬಿಜೆಪಿ ಕೇಂದ್ರ ನಾಯಕರು ಕೆಂಡಾಮಂಡಲವಾಗಿದ್ದಾರೆ.

ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಪಕ್ಷದ ಸಂಘಟನೆ ಮತ್ತ ಚುನಾವಣೆ ಗೆಲುವಿನ ಬಗ್ಗೆ ಆಲೋಚಿಸದೇ ಅಧಿಕಾರಕ್ಕಾಗಿ ಬಡಿದಾಡಿಕೊಳ್ಳುತ್ತಿರುವ ಆಂತರಿಕ ಬೆಳವಣಿಗೆಗಳು ಕೇಂದ್ರ ನಾಯಕರನ್ನು ಮುಜುಗರಕ್ಕೀಡು ಮಾಡಿದೆ. ಈ ಬೆಳವಣಿಗೆ ಬೆನ್ನಲ್ಲೇ ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮತ್ತು ಕೆ.ಎಸ್. ಈಶ್ವರಪ್ಪ ಅವರಿಗೆ ಸಚಿವ ಸ್ಥಾನದಿಂದ ಕೋಕ್ ನೀಡುವ ಸಾಧ್ಯತೆಳಿವೆ



ಪಕ್ಷದಲ್ಲಿ ನಿಷ್ಠಾವಂತರು ಇದ್ದು, ಮುಂದಿನ ಒಂದು ವರ್ಷದಲ್ಲಿ ಅವರಿಗೂ ಸಚಿವ ಸ್ಥಾನ ನೀಡಬೇಕಾದ ಸಂದಿಗ್ಧತೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೆಲವು ಸಚಿವರಿಗೆ ಕೋಕ್ ನೀಡಲಿದ್ದು, ಇನ್ನೂ ಕೆಲವರ ಸಚಿವ ಸ್ಥಾನ ಬದಲಾಗಲಿದೆ. ಬಿಜೆಪಿ ಕಾರ್ಯಕಾರಣಿ

# ವಿಜಯನಗರ ಸಾಮ್ರಾಜ್ಯದ ಪ್ರಥಮ ರಾಜಧಾನಿ ಆನೆಗೊಂದಿ



ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ತುಂಗಭದ್ರಾ ನದಿಯ ಬಲದಂಡೆಯು ಹಂಪೆಗೆ ಆಶ್ರಯ ನೀಡಿದ್ದರೆ, ಎಡದಂಡೆಯು ಪ್ರಾಚೀನ ಆನೆಗೊಂದಿಗೆ ನೆಲೆಯಾಗಿದೆ. ಈ ಎರಡೂ ಚಾರಿತ್ರಿಕ ಸ್ಥಳಗಳು ಆದಿಮ ಕಾಲದಿಂದಲೂ ಮಾನವನ ಪ್ರಮುಖ ಪ್ರಸಿದ್ಧ ವಸತಿತಾಣಗಳು. ಭೌಗೋಳಿಕವಾಗಿಯೂ ಈ ಪ್ರದೇಶವು ಕಣಶಿಲೆಯ ಬೆಟ್ಟಗುಡ್ಡ, ಗುಹೆಗಹ್ವರ, ನದಿ, ಕಣಿವೆಗಳಿಂದ ಕೂಡಿದ ಅತ್ಯಂತ ಸುಂದರ ತಾಣ. ಆನೆಗೊಂದಿ ಪರಿಸರವು ಇತ್ತೀಚೆಗೆ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಇದಕ್ಕೆ ಕಾರಣ ಇಲ್ಲಿನ ಹತ್ತಾರು ಪ್ರವಾಸಿ ಸ್ಥಳಗಳು. ಇಲ್ಲಿರುವ ಪ್ರಸಿದ್ಧ ಪ್ರಾಗೈತಿಹಾಸಿಕ, ಚಾರಿತ್ರಿಕ ಮತ್ತು ಪೌರಾಣಿಕ ಎಡೆಗಳು ಪ್ರವಾಸಿಗರನ್ನು ಕೈಬೀಸಿ ಕರೆಯುವಂತಿವೆ. ಆನೆಗೊಂದಿ ಕರ್ನಾಟಕದ ಪ್ರಸಿದ್ಧ ಪ್ರಾಗೈತಿಹಾಸಿಕ ತಾಣವೆಂದರೆ ಅತಿಶಯೋಕ್ತಿಯಾಗಲಾರದು. ನದಿಯ ಎಡದಂಡೆಯುದ್ದಕ್ಕೂ ಹುಲಿಗಿಯಿಂದ ಕಂಪ್ಲಿಯವರೆಗೆ ಹರಡಿರುವ ಕಣಶಿಲೆಯ ಬೆಟ್ಟಶ್ರೇಣಿಗಳು ಶಿಲಾಯುಗದ ನೆಚ್ಚಿನ ತಾಣಗಳೇ ಆಗಿವೆ. ಇದಕ್ಕೆ ವರ್ಣಚಿತ್ರ, ಗೀರುಚಿತ್ರಗಳಿರುವ ಮಲ್ಲಾಪುರ, ಇಂದುರ್ಗಿ, ಅಂಜನಹಳ್ಳಿ, ಬಂಡಿಹರ್ಲಾಪುರಗಳು ಗಮನಿಸಬೇಕಾದ ಸ್ಥಳಗಳಾಗಿವೆ. ನವಶಿಲಾಯುಗದ ಬೂದಿದಿಬ್ಬವಾದ ವಾಲಿಭಂಡಾರ, ಶಿಲಾಗೋರಿಗಳಿರುವ ಹಿರೇಬೆಣಕಲ್‌ಗಳು ಈ ಪರಿಸರದ ಪ್ರಸಿದ್ಧ ಆದಿಮ ನೆಲೆಗಳು. ಪೌರಾಣಿಕವಾಗಿಯೂ ಕಿಷ್ಕಿಂಧೆ, ಅಯೋಧ್ಯೆ, ಅಂಜನಾದ್ರಿ, ಶಬರಿಗುಹೆ, ಸೀತಾಸೆರಗು, ಸುಗ್ರೀವ ಗುಹೆ, ಪಂಪಾಸರಸ್ಸುಗಳಿದ್ದು, ಇವು ರಾಮಾಯಣ ಕಾಲದ ಘಟನಾವಳಿಗಳನ್ನು ನೆನಪಿಸುತ್ತವೆ. ಚಾರಿತ್ರಿಕತೆಯನ್ನು ಸಾರುವ ಈ ಪರಿಸರದ ಕುಮ್ಮಟದುರ್ಗ, ಹೇಮಗುಡ್ಡ, ಅಂಜನಾದ್ರಿ, ಪಂಪಾಸರೋವರ, ದೇವಿಘಾಟ, ಹಿರೇಜಂತಕಲ್ಲು, ಕಂಪ್ಲಿ ಮತ್ತು ಆನೆಗೊಂದಿಗಳು ಹೆಸರಾಗಿವೆ.

ಆನೆಗೊಂದಿಯು ವಿಜಯನಗರ ಅರಸರ ಮೊಟ್ಟಮೊದಲ ರಾಜಧಾನಿಯಾಗಿ ಮೆರೆದ ಸ್ಥಳ. ಇದನ್ನು ಶಾಸನಗಳಲ್ಲಿ ಕುಂಜರಕೋಣವೆಂದೇ ಕರೆಯಲಾಗಿದೆ. ಆನೆ ಅಥವಾ ಕುಂಜರಗಳನ್ನು ಪಳಗಿಸುತ್ತಿದ್ದ ಸ್ಥಳವೆಂತಲೂ ಕರೆಯುವರು. ಇಲ್ಲಿನ ಅಂಜನಾದ್ರಿ ಇಂದು ಎಲ್ಲಕ್ಕಿಂತಲೂ ಒಂದು ಕೈ ಮೇಲೆಂಬಂತೆ ಪ್ರಸಿದ್ಧಿಗೊಳ್ಳುತ್ತಿದೆ. ಇದು ಉತ್ತರ ಭಾರತೀಯರನ್ನೂ ಆಕರ್ಷಿಸುತ್ತಿದೆ. ಇದಕ್ಕೆ ಪೂರಕವೆನ್ನುವಂತೆ ಸಮೀಪದಲ್ಲಿರುವ ಪಂಪಾ ಸರೋವರವು ನೈಸರ್ಗಿಕವಾಗಿಯೂ ಸೊಗಸಾದ ಸ್ಥಳ. ಇದು ಪಂಪಾದೇವಿಯ ಮೂಲನೆಲೆ, ತಪಸ್ಸುಗೈದ ಸ್ಥಳವೆಂತಲೂ ಕರೆಯುವರು. ಪಂಪಾ ದೇಗುಲ ಕ್ರಿ.ಶ. 12ನೆಯ ಶತಮಾನಕ್ಕೂ ಪೂರ್ವದ್ದಾಗಿದೆ. ಇಲ್ಲಿನ ವಿಶೇಷತೆಯೆಂದರೆ ಈಶ್ವರ ದೇವಾಲಯ ಪಂಪಾದೇವಿಯ ಎಡಕ್ಕಿರುವುದು. ಇದು ವಿವಾಹಪೂರ್ವದ ಆಚರಣೆಗಳನ್ನು ನೆನಪಿಸುವಂತಿದೆ. ಇಲ್ಲಿನ ವಿಶಾಲವಾದ ಪಂಪಾ ಸರೋವರವು ಬೆಟ್ಟದ ತಪ್ಪಲಿನಲ್ಲಿ ಕಂಗೊಳಿಸುತ್ತಿದ್ದು, ಇಂದು ಜೀರ್ಣೋದ್ಧಾರಗೊಳ್ಳುತ್ತಿದೆ. ಅಂಜನಾದ್ರಿಯಿಂದ ಆನೆಗೊಂದಿಗೆ ಹೋಗುವ ರಸ್ತೆಯ ಬಲಬದಿಯ ಗುಡ್ಡದಲ್ಲಿ ವಿಜಯನಗರ ಶೈಲಿಯಲ್ಲಿರುವ ಗವಿರಂಗನಾಥ ದೇವಾಲಯವಿದೆ. ಇಂದು ನಿರ್ಲಕ್ಷ್ಯಕ್ಕೆ ಒಳಗಾದ ಸ್ಮಾರಕವಿದು. ಆನೆಗೊಂದಿಯಲ್ಲಿ ಅನೇಕ ಸ್ಮಾರಕದೇಗುಲಗಳಿವೆ. ಆನೆಗೊಂದಿ ಅರಸರ ಆರಾಧ್ಯ ದೈವ ರಂಗನಾಥ, ಅವರ ಅರಮನೆಯಾದ ಗಗನಮಹಲ್, ಸುಂದರವಾದ ಒಳಕೋಟೆ, ದುರ್ಗಾ ದೇಗುಲದ ಬೆಟ್ಟದ ಮೇಲಿನ ಗಿರಿದುರ್ಗಗಳು ಇಂದಿಗೂ ನೋಡುಗರ ಕಣ್ಮನವನ್ನು ಸೆಳೆಯುತ್ತಿವೆ. ಹಾಗೆಯೇ ಕೃಷ್ಣದೇವರಾಯನ ಸಮಾಧಿ ಸ್ಥಳವೆಂದು ಕರೆಯುವ ವಿಶಾಲ ಮಂಟಪವು ನದಿಯ ಮಧ್ಯದಲ್ಲಿದೆ. ಇದಕ್ಕೆ ಹತ್ತಿರವೆನ್ನುವಂತೆ ನವವೃಂದಾವನವು ಪ್ರಮುಖ ಧಾರ್ಮಿಕ ಎಡೆಯಾಗಿದೆ. ಆನೆಗೊಂದಿ ಪರಿಸರವು ತುಂಗಭದ್ರಾ ನದಿಯ ದಂಡೆಯುದ್ದಕ್ಕೂ ಹರಡಿದ್ದು ಹಲವು ವೈಶಿಷ್ಟ್ಯತೆಗಳಿಂದ ಕೂಡಿರುವ ಪ್ರದೇಶವಾಗಿದೆ. ಸ್ಮಾರಕ ದೇಗುಲಗಳಲ್ಲದೆ ಕಣಶಿಲೆಯ ಬೆಟ್ಟಗಳ ಕಣಿವೆಗಳ ಮಧ್ಯೆ ಆಳವಾಗಿ, ಕೆಲವೆಡೆ ಕಿರಿದಾಗಿ, ಮತ್ತೆ ಅಲ್ಲಲ್ಲಿ ವಿಸ್ತಾರವಾಗಿ ವಿಭಿನ್ನ ಆಯಾಮಗಳಲ್ಲಿ ಹರಿಯುವ ತುಂಗಭದ್ರೆಯ ಹರಹನ್ನು ನೋಡುವುದೇ ಒಂದು ಸೊಗಸು. ನದಿಯ ಈ ಭಾಗವು ವಿಶೇಷವಾಗಿ ನೀರುನಾಯಿಗಳ ಆವಾಸಸ್ಥಾನವೂ ಹೌದು. ವಿಜಯನಗರ ಕಾಲದಲ್ಲಿ ಹರಿಹರನ ದಂಡನಾಯಕನಾದ ಬೈಚಪ್ಪ ದಂಡನಾಯಕನ ಮಗನಾದ ಇರುಗಪ್ಪ ದಂಡನಾಯಕನು ಕ್ರಿ.ಶ.1342ರಲ್ಲಿ  ಶಿಲಾ ಚಾರು ಚೈತ್ಯಾಲಯವನ್ನು ಇಲ್ಲಿ ನಿರ್ಮಿಸಿದ್ದು, ಅದು ಇಂದಿನ ತ್ರಿಕೂಟ ಜಿನಾಲಯವೇ ಆಗಿದೆ. ಇಲ್ಲಿನ ಶಾಸನದಲ್ಲಿ ಕರ್ಣ್ನಾಟ ಮತ್ತು ಕುಂತಲ ನಾಡಿನ ಉಲ್ಲೇಖಗಳಿವೆ. ಇಲ್ಲಿನ ಹುಚ್ಚಪ್ಪಯ್ಯ ಮಠ ವಿಜಯನಗರ ಕಾಲದ ಬಹುದೊಡ್ಡ ಮಠವೇ ಆಗಿದ್ದಿತು. ಇದರ ಕಂಬಗಳನ್ನು ನೋಡಿದರೆ ಅವು ಹೊಯ್ಸಳ ಕಾಲವನ್ನು ನೆನಪಿಸುತ್ತವೆ. ಅಲ್ಲಿಯೇ ಇದ್ದ ಪ್ರಾಚೀನ ದೇವಾಲಯವೊಂದರ ಕಂಬಗಳನ್ನು ಬಳಸಿ ಮಠವನ್ನು ವಿಸ್ತರಿಸಿದಂತೆ ಗೋಚರಿಸುತ್ತದೆ. ಆನೆಗೊಂದಿಯ ಶ್ರೀರಂಗನಾಥ ದೇವಾಲಯವು ಅಲ್ಲಿನ ಆಕರ್ಷಣೆಗಳಲ್ಲೊಂದು. ಇಂದು ಜೀರ್ಣೋದ್ಧಾರಗೊಂಡು ಹೊಳಪನ್ನು ಪಡೆದುಕೊಂಡಿದೆ. ಇಲ್ಲಿ ಅನೇಕ ಸ್ಮಾರಕಗಳಿದ್ದು ಅವುಗಳಲ್ಲಿ ಕೋಟೆ, ಮಂಟಪಗಳು, ಮಹಾದ್ವಾರಗಳು, ನದಿ ದಂಡೆಯಲ್ಲಿರುವ ತಳವಾರಘಟ್ಟದ ಬಳಿಯ ಕೋಟೆಗೋಡೆಗೆ ಹೊಂದಿಕೊಂಡಿರುವ ಎರಡು ವೀರಗಲ್ಲುಗಳು ಅಪರೂಪದವು. ಇವುಗಳ ಶಿಲ್ಪಲಕ್ಷಣದ ಹಿನ್ನೆಲೆಯಲ್ಲಿ ವಿಜಯನಗರ ಕಾಲಕ್ಕೆ ಸೇರುತ್ತವೆ. ಇವುಗಳ ವಿಶೇಷತೆಯೆಂದರೆ ನದಿಯನ್ನು ದಾಟಿಸುವ ಅಂಬಿಗರಿಗಾಗಿ ಹಾಕಿದ ವಿಶಿಷ್ಟ ಸ್ಮಾರಕ ಶಿಲ್ಪಗಳಿವು. ತುಂಗಭದ್ರಾ ನದಿಯನ್ನು ದಾಟಲು ಇಲ್ಲಿ ಸೇತುವೆಯಿಲ್ಲ. ವಿಜಯನಗರವಲ್ಲದೆ ಇಂದಿಗೂ ಹಂಪೆ ಆನೆಗೊಂದಿಯ ಪ್ರಮುಖ ಕೊಂಡಿ ಹರಿಗೋಲಿನ ತಳವಾರಘಟ್ಟವೇ ಆಗಿದೆ. ಹರಿಗೋಲಿನ ಮೂಲಕವಾದರೆ ಆನೆಗೊಂದಿಯು ಕೇವಲ ಎರಡೇ ಕಿ.ಮೀ. ಅಂತರ. ಆದರೆ ಇತ್ತೀಚೆಗೆ ನಿರ್ಮಿಸಲಾದ ಬುಕ್ಕಸಾಗರ ಮಾರ್ಗದ ಸೇತುವೆಯ ಮೂಲಕವಾದರೆ ಇಪ್ಪತ್ತು ಕಿ.ಮೀ. ಕ್ರಮಿಸಬೇಕಾಗುತ್ತದೆ.

ವಿಜಯನಗರ ಕಾಲಕ್ಕೆ ಆನೆಗೊಂದಿಯಲ್ಲಿದ್ದ ಸೆರೆಮನೆಯಿತ್ತೆಂದೂ, ಈ ಸೆರೆಮನೆಯಲ್ಲಿಯೇ ಕೃಷ್ಣದೇವರಾಯನ ಮಂತ್ರಿ ಸಾಳ್ವತಿಮ್ಮ ಮತ್ತು ಅವನ ಮಕ್ಕಳನ್ನು ಕೂಡಿಹಾಕಲಾಗಿತ್ತೆಂದೂ, ಬೆಂಗಳೂರಿನ ಕೆಂಪೇಗೌಡನನ್ನೂ ಕೆಲಕಾಲ ಇಲ್ಲಿ ಬಂಧಿಸಿ ಇಡಲಾಗಿತ್ತೆಂದೂ ಹೇಳಲಾಗುತ್ತದೆ. ಆನೆಗೊಂದಿ ವಿಶ್ವಕರ್ಮ ಸಮುದಾಯದ ಮೂಲಪೀಠವಾದ ಸರಸ್ವತಿ ಮಠವಿರುವ ಸ್ಥಳವಿದು. ಇಲ್ಲಿ ವಿಶ್ವಕರ್ಮರ ವ್ಯಾಜ್ಯವನ್ನು ನೆನಪಿಸುವ ತಾಮ್ರಪಟವೊಂದು ಕಂಡುಬಂದಿದ್ದು, ಸಮುದಾಯದ ಮೂಲ ಕುರಿತಂತೆ ಸ್ಪಷ್ಟಪಡಿಸುತ್ತದೆ. ಗಂಗಾವತಿಗೆ ಅಂಟಿಕೊಂಡಂತಿರುವ ಹಿರೇಜಂತಕಲ್ಲಿನಲ್ಲಿ ಪಂಪಾವಿರೂಪಾಕ್ಷ ದೇವಾಲಯವಿದೆ. ಇದು ವಿಜಯನಗರ ಶೈಲಿಯಲ್ಲಿರುವ ವಿಶಾಲವಾದ ದೇವಾಲಯವಾಗಿದೆ.  ಇಲ್ಲಿನ ಕುಮ್ಮಟದುರ್ಗವು ಕಂಪಿಲರಾಯ ಮತ್ತು ಕುಮಾರರಾಮರ ನೆಲೆವೀಡು. ಅಲ್ಲಿರುವ ಕೋಟೆಕೊತ್ತಲ, ಕುದುರೆಕಲ್ಲು ಪ್ರಾಚೀನರ ರಕ್ಷಣಾ ತಂತ್ರಗಳೇ ಆಗಿವೆ. ಅಲ್ಲಿರುವ ವೀರಗಲ್ಲುಗಳು ಅಂದಿನವರ ಹೋರಾಟದ ಪ್ರತೀಕಗಳಾದರೆ, ದೇಗುಲ, ಜಿನಾಲಯಗಳು ಅಂದಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕುರುಹುಗಳಾಗಿವೆ. ಇಲ್ಲಿಗೆ ಹತ್ತಿರವಿರುವ ಹೇಮಗುಡ್ಡ ವಿಜಯನಗರ ಕಾಲದ ಪ್ರಮುಖ ದೇವಾಲಯಗಳನ್ನು ಹೊಂದಿದ ಮಹತ್ವದ ಸ್ಥಳವಾಗಿದೆ. ಇದನ್ನು ಎಮ್ಮಿಗುಡ್ಡವೆಂದೇ ಕರೆಯುತ್ತಾರೆ. ಇದು ಎರಡು ಬೆಟ್ಟಗಳ ತಪ್ಪಲಿನ ಸುಂದರ ತಾಣ. ಇಲ್ಲಿನ ಕನಕರಾಯ ಮತ್ತು ಈಶ್ವರ ದೇವಾಲಯಗಳು ವಿಜಯನಗರ ಶೈಲಿಯಲ್ಲಿ ಮೈದಳೆದಿವೆ. ಕನಕರಾಯನ ದೇವಾಲಯವೋ ನಿಧಿಗಳ್ಳರ ಧಾಳಿಗೆ ಸಿಕ್ಕು ನಲುಗಿದೆ. ಗರ್ಭಗೃಹವಿರಲಿ, ಇಡೀ ದೇವಾಲಯದ ಆವರಣವನ್ನೂ ಬಿಡದೆ ಅಗೆದು ಹಾಕಿರುವುದು ವಿಷಾದನೀಯ. ಇಲ್ಲಿನ ದುರ್ಗಾ ದೇವಾಲಯದಲ್ಲಿ ದಸರಾ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಹಂಪೆ ಪರಿಸರಕ್ಕೆ ಸರ್ಕಾರದ ವಿವಿಧ ಇಲಾಖೆಗಳಿಂದ ರಕ್ಷಣೆಯಿದ್ದರೆ, ಎಡದಂಡೆಯ ಮೇಲಿನ ಚಾರಿತ್ರಿಕ ಸ್ಮಾರಕಗಳಿಗೆ ಯಾವುದೇ ರಕ್ಷಣೆಯಿಲ್ಲ. ಇದರಿಂದ ದೇವಿಘಾಟದಲ್ಲಿರುವ ದೇವಾಲಯಗಳ ಸ್ಥಿತಿ ಹೇಮಗುಡ್ಡಕ್ಕಿಂತ ಭಿನ್ನವೇನೂ ಆಗಿಲ್ಲ. ಒಟ್ಟಿನಲ್ಲಿ ಆನೆಗೊಂದಿ ಪರಿಸರವು ಆದಿಮ ಕಾಲದಿಂದ ಹಿಡಿದು ಇಂದಿನವರೆಗೂ ಸಾಂಸ್ಕೃತಿಕ ಸಂಗತಿಗಳನ್ನು ಮೈದಳೆದುಕೊಂಡ ಪ್ರಸಿದ್ಧ ತಾಣವೆಂದರೆ ಅತಿಶಯೋಕ್ತಿಯಾಗಲಾರದು.

---

ಸಭೆ ಬಳಿಕ ಸಚಿವ ಸಂಪುಟಕ್ಕೆ ಹೊಸಬರು ಸೇರ್ಪಡೆಯಾಗಲಿದ್ದಾರೆ. ಅದೇ ರೀತಿ ಹಳಬರಿಗೆ ಕೋಕ್ ಕೊಡಲಿದ್ದಾರೆ. ಮುಂದಿನ ಸಂಕ್ರಾಂತಿ ವೇಳೆಗೆ ಸಚಿವ ಸಂಪುಟದಲ್ಲಿ ಬದಲಾವಣೆ ಆಗಲಿದೆ. ಈ ವಿಚಾರವಾಗಿಯೇ ಜ. 8 ರ ಬಳಿಕ ಅಮಿತ್ ಶಾ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ ಎನ್ನುತ್ತಿವೆ ಪಕ್ಷದ ಮೂಲಗಳು.



## ಮತ್ತೊಬ್ಬ ಸಚಿವರಿಗೆ ಗೇಟ್ ಪಾಸ್?

ಇನ್ನು ಬಿಜೆಪಿ ಪಕ್ಷದಲ್ಲಿದ್ದುಕೊಂಡು, ಸಚಿವ ಸ್ಥಾನ ಅಲಂಕರಿಸಿದರೂ, ವಿಧಾನ ಪರಿಷತ್ ಚುನಾವಣೆಯಲ್ಲಿ ಎದುರಾಳಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿದ ಕಾರಣಕ್ಕೆ ಕ್ರೀಡಾ ಸಚಿವ ನಾರಾಯಣಗೌಡ ಅವರ ಬಗ್ಗೆ ಕೇಂದ್ರ ವರಿಷ್ಠರಿಗೆ ದೂರು ಸಲ್ಲಿಕೆಯಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ವರಿಷ್ಠರು ನಾರಾಯಣಗೌಡ ಅವರನ್ನು ಈ ಕಾರಣ ಕೊಟ್ಟು ಸಚಿವ ಸ್ಥಾನದಿಂದ ಇಳಿಸಲಾಗುತ್ತಿದೆ ಎಂಬ ಮಾತುಗಳು ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿದೆ.

## ಹಲವರ ಖಾತೆ ಬದಲಾವಣೆ

ಕೆಲ ಸಚಿವರಿಗೆ ಕೋಕ್ ಕೊಡಲಿರುವ ಬೆನ್ನಲ್ಲೇ ಕೆಲವು ಸಚಿವರ ಖಾತೆಗಳಲ್ಲಿ ಬದಲಾವಣೆಯಾಗಲಿವೆ. ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವರ ಖಾತೆ ಬದಲಾವಣೆಯಾಗುವ ಸಾಧ್ಯತೆಯಿದೆ ಎಂದೇ ಹೇಳಲಾಗುತ್ತಿದೆ. ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿದ ಮೂಲ ಬಿಜೆಪಿಗರಿಗೆ ಸಚಿವ ಸ್ಥಾನ ಕೊಡಲು ಕೇಂದ್ರ ವರಿಷ್ಠರು ಚಿಂತನೆ ಮಾಡಿದ್ದಾರೆ ಎನ್ನಲಾಗುತ್ತಿದೆ. ಸಿಎಂ ಬದಲಾವಣೆ ಸುದ್ದಿ ಪಕ್ಕಕ್ಕೆ ಸರಿದ ಬೆನ್ನಲ್ಲೇ ಇದೀಗ ಸಚಿವ ಸಂಪುಟ ಬದಲಾವಣೆ ಮಾತು ಚರ್ಚೆಯ ಮುನ್ನೆಲೆಗೆ ಬಂದಿದೆ. ಮೂಲಗಳ ಪ್ರಕಾರ ಬಿಜೆಪಿ ಸಚಿವ ಸಂಪುಟದಲ್ಲಿ ಐವರಿಗೆ ಕೋಕ್ ಕೊಡಲಾಗುತ್ತಿದೆ. ಪಕ್ಷದ ನಿಷ್ಠರಿಗೆ ಆದ್ಯತೆ ನೀಡಲಾಗುತ್ತಿದೆ. ಇದರ ಜತೆಗೆ ಹಲವು ಸಚಿವರ ಖಾತೆಗಳು ಬದಲಾವಣೆಯಾಗಲಿವೆ ಎಂದೇ ಹೇಳಲಾಗುತ್ತಿದೆ. ಅಂತೂ ಬಿ.ಎಸ್. ಯಡಿಯೂರಪ್ಪ ಅವರು ಸಿಎಂ ಸ್ಥಾನದಿಂದ ನಿರ್ಗಮಿಸಿದ ಬಳಿಕ ಕೇಂದ್ರ ವರಿಷ್ಠರ ಉತ್ತಮ ಆಡಳಿತ ನಿರೀಕ್ಷಿಸಿದ್ದರು. ಆದರೆ, ರಾಜ್ಯದ ಪ್ರಗತಿ ಹಾಗೂ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೇಂದ್ರ ವರಿಷ್ಠರು ಮುನಿಸಿಕೊಂಡಿದ್ದಾರೆ. ಹೀಗಾಗಿ ನಾನಾ ಕಾರಣ ಕೊಟ್ಟು ಕೆಲವು ಸಚಿವರ ಸ್ಥಾನಕ್ಕೆ ಕೋಕ್ ಕೊಡಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗುತ್ತಿದೆ.

## ಗುಪ್ತ ಮಾಹಿತಿ ಕಲೆಹಾಕುತ್ತಿರುವ ಹೈಕಮಾಂಡ್

ಇದೇ ಹೊತ್ತಿಗೆ ಮೋದಿ ಮತ್ತು ಶಾ ಟೀಂ 2023 ರ ಚುನಾವಣೆಗೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ತಗೆದುಕೊಂಡಿರುವ ಅವರು ಕರ್ನಾಟಕದಲ್ಲಿ ಸಿಎಂ ಮತ್ತು ಅವರ ತಂಡದ ಸಾಮಥ್ಯಧದ ಕುರಿತು ಗುಪ್ತ ಮಾಹಿತಿಯನ್ನು ಕಲೆ ಹಾಕುತ್ತಿದೆ ಆ ಬಗ್ಗೆ ಸರ್ವೆಯನ್ನು ನಡೆಸುತ್ತಿದೆ.

ಮೋದಿ ಮತ್ತು ಶಾ ಅವರೆ ಗುಪ್ತವಾಗಿ ಈ ತಂಡವನ್ನು ರಾಜ್ಯಕ್ಕೆ  ಕಳಿಸಿದೆ ಆ ತಂಡ ಗೌಪ್ಯವಾಗಿ ಮಾಹಿತಿಗಳನ್ನು ಕಲೆಹಾಕುತ್ತಿದೆ .ಕೇವಲ ಸಿಎಂ ಮಾತ್ರವಲ್ಲ ಸಚಿವರ ಮೇಲೂ ಈ ತಂಡ ನಿಗಾ ಇಟ್ಟಿದೆ ಸಚಿವ ಕಾರ್ಯ ವೈಖರಿ ಗೆಲ್ಲುವ ಮತ್ತು ಗೆಲ್ಲಿಸುವ ವರ್ಚಸ್ಸಿನ ಬಗ್ಗೆಯೂ ಸರ್ವೆ ನಡೆಸಲಾಗುತ್ತಿದೆ. ಸಚವರ ಶಕ್ತಿ ಸಾಮರ್ಥ್ಯವನ್ನು ಆ ಮೂಲಕ ಅಳೆದು 2023 ಕ್ಕೆ ರಣ ತಂತ್ರ ಎಣೆಯಲಾಗುತ್ತಿದೆ. ಈ ಮಾಹಿತಿಯ ಪ್ರಕಾರ.

# ಜೆಡಿಎಸ್ ಮಣಿಸಲು ಕೈ ತಂತ್ರ..!

● ವತಿಮ

ರಾಜ್ಯದಲ್ಲಿ ಜೆಡಿಎಸ್ ಪ್ರಭಲವಾದಷ್ಟು ಅದು ಕಾಂಗ್ರೆಸ್‌ಗೆ ದೊಡ್ಡ ಹೊಡೆತಗಳು ಬೀಳಲಿವೆ ಹಾಗಾಗಿ ಜೆಡಿಎಸ್ ಪಕ್ಷವನ್ನು ಮಣಿಸಿದರೆ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಲು ಸಾಧ್ಯ ಎನ್ನುವುದು ಕಾಂಗ್ರೆಸ್ ಪಕ್ಷದ ನಾಯಕರ ತಿರುಳು. ಹಾಗಾಗಿಯೇ ಜೆಡಿಎಸ್ ಬೆಲ್ಟ್ ಇರುವ ಕಡೆ ಡಿಕೆಶಿ ಒಂಟಿಯಾಗಿ ಪ್ರಬಲ ಹೋರಾಟವನ್ನು ಮಾಡುತ್ತಿದ್ದಾರೆ.

ಇದರ ಪರಿಣಾಮವಾಗಿಯೇ ಹಳೆ ಮೈಸೂರು ಭಾಗದ ಬಹುತೇಕ ಜೆಡಿಎಸ್ ಕಾರ್ಯಕರ್ತರನ್ನು ನಾಯಕರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಬಗ್ಗು ಬಡೆಯುವ ಯತ್ನಕ್ಕೆ ಮುಂದಾಗಿದ್ದಾರೆ ..ಇದರ ಮೊದಲ ಪ್ರಯತ್ನವಾಗಿ ಹಾಸನದಲ್ಲಿ ನಾಯಕರ ಸಭೆ ನಡೆಸಿ ಅಲ್ಲಿ ಕೈ ಮೊಳಗಿಸುವ ತಂತ್ರಕ್ಕೆ ಮುನ್ನಡಿ ಬರೆದಿದ್ದಾರೆ.

ಹಾಸನದಲ್ಲಿ ಜೆಡಿಎಸ್ ನಾಯಕರು ಸೇರಿದಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬವನ್ನು ಪರೋಕ್ಷವಾಗಿ ಹೀಯಾಳಿಸಿದ್ದಲ್ಲದೆ, ಒಂದಷ್ಟು ಟೀಕೆಗಳನ್ನು ನೇರವಾಗಿ ದೇವೇಗೌಡರ ಕುಟುಂಬಕ್ಕೆ ತಾಕುವಂತೆಯೇ ಆಡಿದ್ದಾರೆ. ಆ ಮೂಲಕ ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನ್ನು ಟಾರ್ಗೆಟ್ ಮಾಡಿದ್ದೇವೆ ಎಂಬ ಸಂದೇಶವನ್ನು ಸಾರಿದ್ದಾರೆ. ಡಿಕೆಶಿ ಕೊಡಗಿಗೆ ತೆರಳಿದ್ದರಿಂದ ಲಾಭವಾಗಿಲ್ಲ ಡಿಕೆಶಿ ಕೊಡಗಿಗೆ ತೆರಳಿದ್ದರಿಂದ ಲಾಭವಾಗಿಲ್ಲ ಇದೆಲ್ಲದರ ನಡುವೆ ಕೊಡಗಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತೆರಳಿದ್ದರಿಂದ ಅಲ್ಲಿ ಅಂತಹ ಲಾಭವೇನು ಕಂಡು ಬಂದಿಲ್ಲ. ಬದಲಿಗೆ ಪಕ್ಷದೊಳಗಿನ ಒಡಕು, ಭಿನ್ನಾಭಿಪ್ರಾಯಗಳು ತುಸು ಹೆಚ್ಚಾದಂತಾಗಿದೆ. ಈಗಾಗಲೇ ಕೊಡಗು ಜಿಲ್ಲೆಯಲ್ಲಿ ನಾಯಕತ್ವದ ಕೊರತೆಯನ್ನು ಪಕ್ಷ ಎದುರಿಸುತ್ತಿದ್ದು, ಜತೆಗೆ ಅರೆಗೌಡ ಸಮುದಾಯವನ್ನು





ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ ಎಂಬ ಆಕ್ರೋಶಗಳು ಭುಗಿಲೆದ್ದಿವೆ. ಇದನ್ನು ಒಂದಷ್ಟು ಅರೆಗೌಡ ಸಮುದಾದಯದ ಮುಖಂಡರು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ. ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಹೊರಗಿನ ಅಭ್ಯರ್ಥಿಗೆ ಟಿಕೆಟ್ ಕೊಟ್ಟರೆಂಬ ಅಸಮಾಧಾನ ಪಕ್ಷದ ನಾಯಕರಲ್ಲಿತ್ತು. ಜಿಲ್ಲೆಯಲ್ಲಿ ಸಮರ್ಥನಾದ ವ್ಯಕ್ತಿ ಇರಲಿಲ್ಲವೇ? ಎಂಬ ಮಾತುಗಳು ಕೇಳಿ ಬಂದಿದ್ದವು. ಇದೀಗ ಪಕ್ಷದಲ್ಲಿ ಜಿಲ್ಲೆಯಲ್ಲಿ ಇತರೆ ಜನಾಂಗದ ನಡುವೆ ಪ್ರಾಬಲ್ಯ ಸಾಧಿಸಿರುವ ಅರೆಗೌಡ ಸಮುದಾಯವನ್ನು ಕಾಂಗ್ರೆಸ್‌ನಲ್ಲಿ ಕಡೆಗಣಿಸಲಾಗಿದೆ. ಯಾವುದೇ ಸ್ಥಾನಮಾನ ನೀಡಿಲ್ಲ ಎಂಬ ಅಸಮಾಧಾನ ಹೊರಬಂದಿದೆ. ಇದು ಮುಂದಿನ ಚುನಾವಣೆ ವೇಳೆಯಲ್ಲಿ ಹೊಸ ರೂಪ ಪಡೆದುಕೊಂಡರೂ ಅಚ್ಚರಿಯಿಲ್ಲ. ಚುನಾವಣೆಗೂ ಮುನ್ನ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳ ಘೋಷಣೆ ಚುನಾವಣೆಗೂ ಮುನ್ನ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳ ಘೋಷಣೆ ಜೆಡಿಎಸ್ ಹಣಿಯಲು ಕಾಂಗ್ರೆಸ್ ತಂತ್ರ ಜೆಡಿಎಸ್ ಹಣಿಯಲು ಕಾಂಗ್ರೆಸ್ ತಂತ್ರ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಹೆಚ್ಚಿನ ಸ್ಥಾನ ಪಡೆದು ಮತ್ತೆ ಅತಂತ್ರ ಪರಿಸ್ಥಿತಿ ನಿರ್ಮಾಣವಾದರೆ ಹಿಂದೆ ಕಹಿ ಅನುಭವ ಅನುಭವಿಸಿರುವ ಎಚ್.ಡಿ.



ಕುಮಾರಸ್ವಾಮಿ ಮತ್ತೆ ಕಾಂಗ್ರೆಸ್‌ನತ್ತ ಮುಖ ಮಾಡದೆ ಬಿಜೆಪಿಯತ್ತ ಒಲವು ತೋರಿದರೆ ನಮಗೆ ಕಷ್ಟವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಂಡಿರುವ ಕಾಂಗ್ರೆಸ್, ಇದೀಗ ಜೆಡಿಎಸ್‌ನ್ನು ಹಣಿಯಲು ಸರ್ವ ಪ್ರಯತ್ನ ಮಾಡುತ್ತಿದೆ. ವಿಪಕ್ಷ ನಾಯಕ ಸಿದ್ದರಾಮಯ್ಯನವರು ದೇವೇಗೌಡರ ಕುಟುಂಬವನ್ನು ಸಮಯ ಸಿಕ್ಕಾಗಲೆಲ್ಲ ಟೀಕಿಸುತ್ತಲೇ ಇದ್ದಾರೆ. ಇದೀಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸರದಿಯಾಗಿದ್ದು, ಪರೋಕ್ಷವಾಗಿ ದೇವೇಗೌಡರ ಕುಟುಂಬದ ಮೇಲೆ ವಾಗ್ದಾಳಿ ನಡೆಸಲು ಆರಂಭಿಸಿದ್ದಾರೆ. ಅಷ್ಟೇ ಅಲ್ಲದೆ, ಮೇಕೆದಾಟು ಪಾದಯಾತ್ರೆಯನ್ನು ನಡೆಸುವ ಮೂಲಕ ಟಾಂಗ್ ಕೊಟ್ಟಿದ್ದಾರೆ. ಬಾಂಬ್ ತಯಾರಿಕೆ ವೃತ್ತಿ ಹಾಗೂ ಜೀವನಾಧಾರವಾದರೆ!!ಬಾಂಬ್ ತಯಾರಿಕೆ ವೃತ್ತಿ ಹಾಗೂ ಜೀವನಾಧಾರವಾದರೆ!! ಜೋಡೆತ್ತುಗಳ ನಡುವೆ ಮಾತಿನ ಸಮರ ಜೋಡೆತ್ತುಗಳ ನಡುವೆ ಮಾತಿನ ಸಮರ ಹಿಂದೆ ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದ್ದ ವೇಳೆ ಜೋಡೆತ್ತುಗಳಂತೆ ರಾಜ್ಯದ ಜನರ ಮುಂದೆ ಫೋಸ್ ಕೊಟ್ಟಿದ್ದ ಎಚ್‌ಡಿಕೆ ಮತ್ತು ಡಿಕೆಶಿ ಇವತ್ತು ರಾಜಕೀಯ ಅಸ್ತಿತ್ವಕ್ಕಾಗಿ ಬದ್ಧ ವೈರಿಗಳಾಗಿ ಹೋರಾಟಕ್ಕಿಳಿದಿರುವುದು ಅಚ್ಚರಿ ತಂದಿದೆ. ಈಗಿನಿಂದಲೇ ಇಬ್ಬರ ನಡುವೆ ಮಾತಿನ ಸಮರ ಶುರುವಾಗಿದೆ. ಮೇಕೆದಾಟು ಯೋಜನೆ ವಿಚಾರವನ್ನು ಮುಂದಿಟ್ಟು ಹೋರಾಟ ಹಮ್ಮಿಕೊಂಡಿದ್ದರೆ, ಅದರಿಂದ ಈ ರಾಮನಗರ ವ್ಯಾಪ್ತಿಯ ಜನರ ಒಲವು ಮತ್ತು ರಾಜ್ಯದ ಜನರ ಗಮನ ತಮ್ಮೆಡೆಗೆ ಸೆಳೆಯಬಹುದು ಎನ್ನುವುದು ಡಿ.ಕೆ. ಶಿವಕುಮಾರ್ ಆಲೋಚನೆಯಾಗಿದೆ. ಆದರೆ ಇದು ಒಂದು ವೇಳೆ ಸಕ್ಸಸ್ ಆದರೆ ಬಿಜೆಪಿ ಮೇಲೆ ರಾಜಕೀಯವಾಗಿ ಪರಿಣಾಮ ಬೀರುತ್ತೋ, ಇಲ್ಲವೋ ಗೊತ್ತಿಲ್ಲ. ಆದರೆ ಜೆಡಿಎಸ್‌ಗೆ ಅದರಲ್ಲೂ ಎಚ್.ಡಿ. ಕುಮಾರಸ್ವಾಮಿಗೆ ಒಂದಷ್ಟು ನಷ್ಟಗಳಾಗುವುದು ಖಚಿತ. ಪ್ರಾಂತೀಯ ಭಾಷಾ ಇಂಟರ್ನೆಟ್ ಬಳಕೆದಾರರಲ್ಲಿ ಹೆಚ್ಚಳಪ್ರಾಂತೀಯ ಭಾಷಾ ಇಂಟರ್ನೆಟ್ ಬಳಕೆದಾರರಲ್ಲಿ ಹೆಚ್ಚಳ ಕಾಂಗ್ರೆಸ್‌ನದು ಪಾದಯಾತ್ರೆಯಲ್ಲ ಮತಯಾತ್ರೆ ಕಾಂಗ್ರೆಸ್‌ನದು ಪಾದಯಾತ್ರೆಯಲ್ಲ ಮತಯಾತ್ರೆ ಹೀಗಾಗಿಯೇ ಎಚ್ಚೆತ್ತುಕೊಂಡಿರುವ ಎಚ್.ಡಿ. ಕುಮಾರಸ್ವಾಮಿಯವರು ಡಿ.ಕೆ. ಶಿವಕುಮಾರ್ ವಿರುದ್ಧ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ. ಆ ಮೂಲಕ ಕಾಂಗ್ರೆಸ್ ಮತಕ್ಕಾಗಿ ಮಾಡುತ್ತಿರುವ ಪಾದಯಾತ್ರೆ ಎಂಬುದಾಗಿ ಬಹಿರಂಗವಾಗಿ ಹೇಳಿದ್ದಾರೆ. ಕಾಂಗ್ರೆಸ್ ಪಾದಯಾತ್ರೆ ಬಗ್ಗೆ ಬಿಜೆಪಿ ನಾಯಕರು ಯಾವುದೇ ರೀತಿಯ ಮಾತುಗಳನ್ನಾಡುತ್ತಿಲ್ಲ. ಬದಲಿಗೆ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಮಾತಿನ ಬಾಣಗಳನ್ನು ಎಸೆದಿದ್ದು ಅದು ನಾಟಿದರೂ ನಾಟಬಹುದು. ಇಷ್ಟಕ್ಕೂ ಕುಮಾರಸ್ವಾಮಿ ಅವರು ಹೇಳಿದ್ದೇನು? ಎನ್ನುವುದನ್ನು ನೋಡುವುದಾದರೆ, ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ ಎಂಬ ಹೋರಾಟ ಮಾಡಿ ಕೃಷ್ಣೆಯ ನೀರನ್ನು ಹೇಗೆ ಉಳಿಸಿದರು ಅನ್ನುವುದನ್ನು ನೋಡಿದ್ದೇವೆ. ಈಗ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮೂಲಕ ಮತಯಾತ್ರೆ ಮಾಡುತ್ತಿದ್ದಾರೆ. ಜನರ ಬಗ್ಗೆ ನಿಜವಾದ



ಕಾಳಜಿ ಮತ್ತು ಶಕ್ತಿ ಇದ್ದರೆ ದೆಹಲಿಗೆ ಹೋಗಿ, ಕೇಂದ್ರ ಸರಕಾರದ ಮುಂದೆ ಕುಳಿತು ಹೋರಾಟ ಮಾಡಲಿ. ಅದು ಬಿಟ್ಟು ಮತಕ್ಕಾಗಿ ಪಾದಯಾತ್ರೆ ಮಾಡಿ ಜನರನ್ನು ಯಾಮಾರಿಸಲು ಎಲ್ಲ ಸಂದರ್ಭದಲ್ಲಿಯೂ ಸಾಧ್ಯವಿಲ್ಲ ಎಂದಿದ್ದಾರೆ. ರಾಜಕೀಯ ಲಾಭಕ್ಕೆ ಕಾಯುತ್ತಿರುವ ಬಿಜೆಪಿ ರಾಜಕೀಯ ಲಾಭಕ್ಕೆ ಕಾಯುತ್ತಿರುವ ಬಿಜೆಪಿ ಎಚ್.ಡಿ. ಕುಮಾರಸ್ವಾಮಿಯವರ ಈ ಹೇಳಿಕೆ ಕಾಂಗ್ರೆಸ್‌ಗೆ ಈ ಸಮಯದಲ್ಲಿ ಇರಿಸುಮುರಿಸು ತಂದಿದ್ದಂತು ನಿಜ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಆರೋಪ ಮತ್ತು ಪ್ರತ್ಯಾರೋಪಗಳು ಹೆಚ್ಚಾಗುವ ಸಾಧ್ಯತೆಯಿದ್ದು, ಇದರ ಲಾಭ ಪಡೆಯಲು ಬಿಜೆಪಿ ಕಾಯುತ್ತಿದೆ.

# ಸಿಸಿಬಿ ಕಳ್ಳಾಟ..?!



● 5ನೇ ಪುಟದಿಂದ

ಹಾಗೂ ಯಾವುದೇ ವಿದೇಶಿ ಸಮಸ್ಥೆ ಇಂಟರ್ ಪೋಲ್ ಮೂಲಕವಲ್ಲದೆ ನೇರವಾಗಿ ಒಂದು ರಾಜ್ಯದ ಪೊಲೀಸರಿಂದ ಯಾವುದೇ ಅಂತಾರಾಷ್ಟ್ರೀಯ ಅಪರಾಧ ಪ್ರಕರಣಗಳಲ್ಲಿ ಮಾಹಿತಿ ಪಡೆಯುವುದು ಸಾಧ್ಯವೇ ಎಂಬುದು ಕಮೀಷನರ್ ಮಾತುಗಳು ಸ್ಪಷ್ಟಪಡಿಸದೇ ಬಿಟ್ಟ ಪ್ರಶ್ನೆಗಳು.

ಈ ನಡುವೆ ಶ್ರೀಕಿಯಿಂದ ವಶಪಡಿಸಿಕೊಂಡಿರುವುದಾಗಿ ಹೇಳಿದ್ದ ಬರೋಬ್ಬರಿ ಒಂಭತ್ತು ಕೋಟಿ ರೂಪಾಯಿ ಮೌಲ್ಯದ 31 ಬಿಟ್ ಕಾಯಿನ್ ಗಳನ್ನು ಸಂಗ್ರಹಿಸಲು ತಮ್ಮದೇ ಆದ ಬಿಟ್ ಕಾಯಿನ್ ವ್ಯಾಲೆಟ್ ತೆರೆಯಲು ಸರ್ಕಾರದ ಅನುಮತಿ ಪಡೆದುಕೊಂಡಿದ್ದ ಸಿಸಿಬಿ ಪೊಲೀಸರು, ಆ ಬಳಿಕ ಆ ಕಾಯಿನ್ ಗಳನ್ನು ಏನು ಮಾಡಿದರು? ಆ ಬಿಟ್ ಕಾಯಿನ್ ವ್ಯಾಲೆಟ್ ಈಗಲೂ ಅಸ್ತಿತ್ವದಲ್ಲಿದೆಯೇ? ಆ ವ್ಯಾಲೆಟ್ ನ ವಹಿವಾಟು ನಡೆಸಲು ಯಾವ ಬ್ಯಾಂಕ್ ಖಾತೆಯನ್ನು ಅದಕ್ಕೆ ಜೋಡಿಸಿದ್ದರು? ಆ ವ್ಯಾಲೆಟ್ ಮತ್ತು ಬ್ಯಾಂಕ್ ಖಾತೆಯ ಮಾಹಿತಯನ್ನು ಸಿಸಿಬಿ ಪೊಲೀಸರು ಯಾಕೆ ಕಾಲಕಾಲಕ್ಕೆ ಬಹಿರಂಗಪಡಿಸಿಲ್ಲ? ಕನಿಷ್ಟ ಇಡೀ ಹಗರಣದಲ್ಲಿ ಸಿಸಿಬಿ ಮುಖ್ಯಸ್ಥರು ಮತ್ತು ಇತರೆ ಪೊಲೀಸ್ ಉನ್ನತಾಧಿಕಾರಿಗಳು ಮತ್ತು ಅಧಿಕಾರರೂಢ ರಾಜಕಾರಣಿಗಳ ವಿರುದ್ಧವೇ ಗಂಭೀರ ಆರೋಪ ಕೇಳಿಬರುತ್ತಿರುವಾಗಲಾದರೂ ಆ ಮಾಹಿತಿಯನ್ನು ಬಹಿರಂಗಪಡಿಸಬೇಕಿತ್ತಲ್ಲವೇ? ಎಂಬ ಪ್ರಶ್ನೆಗಳೂ ಇವೆ.

ಹಾಗೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಕರಣದ ಕುರಿತು ಕಾಂಗ್ರೆಸ್ ಆರೋಪಗಳಿಗೆ ಕಿಡಿಕಾರುತ್ತಾ, ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದೇ ತಮ್ಮ ಬಿಜೆಪಿ ಸರ್ಕಾರ. ಇದೀಗ ಪ್ರಕರಣವನ್ನು ಇಡಿ ತನಿಖೆಗೆ ವಹಿಸಿದ್ದೇವೆ. ಇಡಿ ತನಿಖೆ ಆರಂಭಿಸಿದೆ ಎಂದಿದ್ದಾರೆ. ಆದರೆ, ಪ್ರಕರಣದ ಪ್ರಮುಖ ಆರೋಪಿ, ತನ್ನ ಸ್ವಯಂಪ್ರೇರಿತ ಹೇಳಿಕೆಯಲ್ಲೇ ತಾನು ನಡೆಸಿದ ಬಿಟ್ ಫೀನಿಕ್ಸ್ ನ ಸುಮಾರು ಐದು ಸಾವಿರ ಕೋಟಿ ಮೊತ್ತದ ಬಿಟ್ ಕಾಯಿನ್ ಹ್ಯಾಕ್ ಸೇರಿದಂತೆ ಹತ್ತಾರು ಸಾವಿರ ಕೋಟಿ ಮೊತ್ತದ ಹ್ಯಾಕ್ ಬಗ್ಗೆ ನ್ಯಾಯಾಧೀಶರ ಮುಂದೆಯೇ ಒಪ್ಪಿಕೊಂಡಿದ್ದರೂ ಆತ ಬಿಡುಗಡೆಯಾಗಿ ಆರು ತಿಂಗಳು ಕಳೆದಿದ್ದರೂ ಈವರೆಗೂ ತಮ್ಮ ಸರ್ಕಾರ ಆತನ ಜಾಮೀನನ್ನು ಪ್ರಶ್ನಿಸಿ, ಮೇಲ್ಮನಿಯನ್ನು ಯಾಕೆ ಸಲ್ಲಿಸಿಲ್ಲ? ಹತ್ತಾರು ಸಾವಿರ ಕೋಟಿ ಹ್ಯಾಕ್ ವಂಚನೆ ಮತ್ತು ನೂರಾರು ಕೋಟಿ ಸ್ವತಃ ಸರ್ಕಾರಿ ಇಪ್ರೊಕ್ಯೂರ್ ಮೆಂಟ್ ಮತ್ತು ಜನ್ ಧನ್ ಖಾತೆಗಳನ್ನು ಹ್ಯಾಕ್ ಮಾಡಿ ವಂಚನೆ ಎಸಗಿರುವ ವ್ಯಕ್ತಿಯನ್ನು ಮುಕ್ತವಾಗಿ ಓಡಾಡಿಕೊಂಡಿರಲು ಬಿಟ್ಟಿರುವುದು ಯಾಕೆ ಎಂಬ ಬಗ್ಗೆಯೂ ತನಿಖೆ ನಡೆಸಿದ ಸಿಸಿಬಿಯಾಗಲೀ, ಗೃಹ ಸಚಿವರಾಗಲೂ ಸ್ಪಷ್ಟಪಡಿಸಿಲ್ಲ.

## ತನಿಖೆ ದಿಕ್ಕು ತಪ್ಪಿಸಿದ ಪೊಲೀಸರು

ಹಾಗೇ ಹಾಲಿ ಆರಾಮವಾಗಿ ಮುಕ್ತವಾಗಿ ಓಡಾಡಿಕೊಂಡಿರುವ ಅಂತಾರಾಷ್ಟ್ರೀಯ ಹ್ಯಾಕರ್ ಶ್ರೀಕಿಯ ಹೇಳಿಕೆಯಲ್ಲಿ ಉಲ್ಲೇಖಿಸಿರುವ ಬಹುತೇಕ ಹ್ಯಾಕ್ ಗಳಿಗೆ ಆಧಾರವಿಲ್ಲ. ಅವುಗಳಲ್ಲ ವಹಿವಾಟು ನಡೆದಿರುವುದು ಪತ್ತೆಯಾಗಿಲ್ಲ ಎಂದಿದ್ದಾರೆ ಕಮೀಷನ್ ಕಮಲ್ ಪಂಥ್. ಆದರೆ, ಹಾಗೆ ನ್ಯಾಯಾಲಯದ ಮುಂದೆ ಸುಳ್ಳು ಹೇಳಿಕೆ ನೀಡಿದ ಸಂಬಂಧ ಆ ಆರೋಪಿಯ ವಿರುದ್ಧ ಯಾವ ಕ್ರಮಜರುಗಿಸಲಾಗಿದೆ? ತನಿಖೆಯನ್ನು ದಿಕ್ಕು ತಪ್ಪಿಸಿದ ಬಗ್ಗೆ ಪೊಲೀಸರು ಏನು ಮಾಡಿದ್ದಾರೆ? ಅಥವಾ ಆತ ಮಾದಕ ಪದಾರ್ಥ ಸೇವಿಸಿ ಅಂತಹ ಹೇಳಿಕೆ ನೀಡಿದ್ದನೇ? ಹಾಗೆ ನೀಡಿದ್ದರೆ ಆ ಬಗ್ಗೆ ಪೊಲೀಸರು ಏನು ಮಾಡಿದರು? ಎಂಬ ಕುರಿತ ವಿವರಗಳೂ ಹೊರಬರಬೇಕಿದೆ.

ಸಿಸಿಬಿ ಪೊಲೀಸರು ಎಲ್ಲಾ ಮಾಹಿತಿಗಳನ್ನು ಶ್ರೀಕಿಯಿಂದ ಪಡೆದಿದ್ದಾರೆ ಯಾವಾಗ ಕೈ ರುಚಿ ಹತ್ತಿತೋ ಆಗಲೇ ಅವರು ಕೈ ಚಾಚಿಕೊಂಡು ಮುಂದೋಗಿದ್ದಾರೆ ಇದರಿಂದ ಹಲವಾರು ಸತ್ಯಗಳು ಸಿಸಿಬಿಯಲ್ಲಿಯೇ ಇವೆ ಆದರೆ ಅದರಲ್ಲಿ ಭಾಗಿಯಾದ ಪೊಲೀಸರು ಯಾರ್‍ಯಾರು ಎನ್ನುವುದು ಈಗ ಗೊತ್ತಾಗಿದೆ ಶೀಘ್ರದಲ್ಲೇ ಈ ಕಳ್ಳಾಟವಾಡಿದ ಪೊಲೀಸರ ಮೇಲೆ ಗಂಭೀರ ಕ್ರಮ ಕೈಗೊಳ್ಳುವ ಸಾದ್ಯತೆಗಳೂ ಇವೆ.

# ತಾಂತ್ರಿಕ, ಸಾತ್ವಿಕ ಶಕ್ತಿಗಳ ಕಿರು ಹಾಗೂ ಹಿರಿ ತೆರೆಗಳು

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಭಾರತದ ಆತ್ಮ ಹಳ್ಳಿಗಳಲ್ಲಿದೆ ಎನ್ನುವಂತೆಯೇ ಹಳ್ಳಿಗಳ ನೈತಿಕ ಆತ್ಮ ಅತೀಂದ್ರಿಯ ಶಕ್ತಿಗಳ ಕೇಂದ್ರದಲ್ಲಿದೆ ಎನ್ನಬಹುದು. ಹಳ್ಳಿಗಳಲ್ಲಿ ನಾಸ್ತಿಕರ ಪ್ರಮಾಣ ಕಡಿಮೆ ಭಕ್ತರೇ ಅಧಿಕ.ಭಕ್ತಿಯ ಹತ್ತಾರು ರೀತಿಗಳು ಅತಿರೇಕಗಳು ಇಂದಿಗೂ ಹಳ್ಳಿಗಳನ್ನ ಬಿಟ್ಟಿಲ್ಲ.ವಿಚಾರ ಪರಂಪರೆಯ ನಗರಕ್ಕೆ ಯಾವುದು ಅಲಕ್ಷವೋ ಆ ಅಲಕ್ಷ ದೇಗುಲಗಳೇ ಹಳ್ಳಿಯ ಜನರ ಜೀವನಾಡಿ.ವಾರ ಬಂತೆಂದರೆ ಊರ ಹನುಮಪ್ಪನ ಎದುರು ಎಷ್ಟೋ ಜನ ಶ್ರಮಿಕರು ಲಿಂಗಾತೀತವಾಗಿ ಬಂದು ಹೂ ಕೇಳಲು ಹನುಮಪ್ಪನ ಎದರು ಕೂಡುತ್ತಾರೆ ಮತ್ತು ಶ್ರೇಷ್ಟ ಭಾಗಗಳಾದ ಬಲ ಮತ್ತು ತಲೆ ಮೇಲಿನ ಹೂಗಳನ್ನೇ ಕೊಡಬೇಕೆಂಬುದು ಅವರ ಹಠ ಈ ವಿನಂತಿಯನ್ನ ಮೊದಲು ಅಕ್ಕರೆಯಿಂದಲೇ ಸಲ್ಲಿಸುವ ಅವರು ಅದು ಬೇಗನೆ ದಕ್ಕದಿದ್ದಾಗ ಅಲ್ಲಿನ ಸಂಭಾಷಣೆ ಭೈಗುಳಕ್ಕೆ ತಿರುಗುತ್ತದೆ."ಯಪ್ಪಾ ಕೊಡೋ ಮಾರಾಯ ಯಾಕ್ ಕಾಡ್ತೀಯೋ ನನ್ನ ತಂದೆ" ಎಂದು ಒಬ್ಬರು ಹೇಳಿದರೆ ಮತ್ತೊಬ್ಬರು " ಐ ಕೊಟ್ಟ ಕಳಿಸೋ ಮಾರಾಯಾ ನಮ್ಮದೂ ಕೇಳದೈತೆ ಗೊತ್ತಿಲ್ಲೇನೂ ನಿನಗ.. ಹೇ ನಿನ್ನ ಬಿಡು ಅತ್ಲಾಗ ನೀನ್ ಯಾಸೀಮೆ ದೇವರೋ ಮಾರಾಯಾ ಇಂಗ ಮನಷ್ಯರನ್ನ ಕಾಡಬಾರದು ಬಿಡಪ್ಪಾ.." ಇವರಿಗೆ ದೈವ ಕಲ್ಲಲ್ಲ. ದೊಡ್ಡ ತಪಸ್ಸಲ್ಲ,ದೂರದ ಯಾವುದೋ ಅಪರೂಪದ ಅಸಾಧ್ಯ ಸವಾಲಲ್ಲ.ತುಂಬಾ ಸರಳ ಕರುಳುಬಳ್ಳಿಯಂತಹ ವಾತ್ಸಲ್ಯ.ಅವರ ಸಂಭ್ರಮ ಕಣ್ಣೀರು,ಸಿಟ್ಟು,ಸೆಡವುಗಳಿಗೆಲ್ಲಾ ಆತನೇ ಆಧಾರ.ಜನರ ಭಾಷೆ ಎಂಬುದು ಬದುಕು ಎನ್ನುವುದಾದರೆ ಹಳ್ಳಿಗಳ ಸಂಸ್ಕೃತಿ ನಗರಕ್ಕಿಂತ ಭಿನ್ನ ರೂಪದ್ದು. ಮಾರುಕಟ್ಟೆಯ ಲಾಭ ನಷ್ಟಗಳು ಇಲ್ಲಿ ತೂಗದೆ ಪ್ರೀತಿ ವಾತ್ಸಲ್ಯಗಳು ತ್ಯಾಗ ರೂಪಗಳೇ ಇಲ್ಲಿನ ಆಚರಣೆಗಳಾಗುತ್ತವೆ. ಹೊರರೂಪದಲ್ಲಿ ಭಿನ್ನತೆಗಳನ್ನ ಹೊತ್ತ ಇಲ್ಲಿನ ಆಚರಣೆಗಳು ಹಬ್ಬ,ಜಾತ್ರೆ,ತೇರಿನಂತಹ ಸಂಭ್ರಮಗಳಲ್ಲಿ ಎಲ್ಲವನ್ನೂ ಬಹುಬಗೆಯಲ್ಲಿ ಬೆಸೆಯುವ ಒಗ್ಗೂಡಿಸಿ ನಡೆವ ಸಂಪ್ರದಾಯ ಅನುಸರಿಸುತ್ತವೆ. ಇಲ್ಲಿ ದಾಸೋಹಕ್ಕೆ ತಟ್ಟಿದ ರೊಟ್ಟಿ ಬೇರೆ ಬೇರೆ ವರ್ಣವಾಗಿ ಕಾಣಬಹುದು.ಆದರೆ ಜಾತ್ರೆಯ ವೇಳೆಗೆ ಅದೇ ರೊಟ್ಟಿ ಎಲ್ಲರ ರೊಟ್ಟಿಗಳೊಂದಿಗೇ ಕಲೆತು ಪ್ರಸಾದವಾಗಿ ಮಾರ್ಪಡುತ್ತದೆ. ಜಾತಿಯ ತಾರತಮ್ಯವನ್ನ ದಾಟಿ ಎಲ್ಲರ ಕರುಳೊಳಗೆ ಸಲ್ಲುವ ಆಹಾರವಾಗುತ್ತದೆ. ಹಳ್ಳಿಯ ದೈವಗಳೂ ಈ ನೆಲೆಯಲ್ಲಿ ವೈರ್ಯದ ಕೊಂಡ ಸೃಷ್ಟಿಸದೇ ಬೆಳದಿಂಗಳ ಬೆಸುಗೆಯಂತೆ ಕಾಣುತ್ತವೆ.



ಹಳ್ಳಿಗಳಲ್ಲಿ ಸಾತ್ವಿಕ ದಾರಿಯವರು ಸಾವಿನಲ್ಲೂ ಆನಂದ ಪಡೆದರೆ ತಾಮಸ ದಾರಿಯವರು ಕೊನೆಗಾಲದಲ್ಲಿ ಪಡಬಾರದ ಕಷ್ಟ ನೋವು,ಜಾಡ್ಯಗಳನ್ನ ಅನುಭವಿಸಿಯೇ ತೆರಳುವ ಕ್ರಮವನ್ನೇ ನೋಡಿ ಬಹುಶಃ " ಶರಣರ ಜೀವನವನ್ನ ಮರಣದಲ್ಲಿ ಕಾಣು" ಎಂಬ ಮಾತು ಬಂದಿರಬೇಕು.

ಕನ್ನಡ ಕಾವ್ಯಗಳೂ ತಾಮಸ ಶಕ್ತಿಗಳ ಸೋಲನ್ನ ತೋರುತ್ತಲೇ ಸಾತ್ವಿಕ ಬದುಕಿನ ಶ್ರೇಷ್ಟತೆಯನ್ನ ಬಹುಬಗೆಯಲ್ಲಿ ತೋರುತ್ತಾ ಬಂದಿವೆ.

ಧಾರ್ಮಿಕ ಕಾವ್ಯದ ಎದರು ಪ್ರದಾಶಿಕ ಇತಿಹಾಸ ಕಾವ್ಯ ಸೃಷ್ಟಿಸಿದ ಪಂಪ ಇಂತಹ ತಾಮಸ ನಡೆಯ ಕಥನವನ್ನೇ ಯಕ್ಷ ಪ್ರಶ್ನೆಯ ಪ್ರಸಂಗಕ್ಕೆ ಸಂವಾದಿಯಾಗಿ ಬಳಸಿದ್ದಾನೆ. ದರ್ಯೋಧನನ ಅಣತಿಯ ಮೇರೆಗೆ ಕನಕಸ್ವಾಮಿಯು ತನ್ನ ಕೀರ್ತಿಗೆ ಎಂಬ ಭೂತವನ್ನ ಪಾಂಡವರನ್ನ ಕೊಲ್ಲಲು ಕಳಿಸುತ್ತಾನೆ ಆದರೆ ಆತ ಬರುದರೊಳಗೇ ಪಾಂಡವರು ಕೊಳದ ನೀರು ಕುಡಿದು ಮೂರ್ಚಿತರಾಗಿ ಬಿದ್ದಿದ್ದರು.ಅವರೆಲ್ಲರೂ ಸತ್ತಿದ್ದಾರೆಂದು ಭಾವಿಸಿದ ಭೂತ ಹಿಂತಿರುಗಿ ಕೆಲಸ ಆಗದಿದ್ದಕ್ಕಾಗಿ ಕೆಲಸ ನೀಡಿದ ಕನಕಸ್ವಾಮಿಯನ್ನೇ ತಿಂದು ಬಿಟ್ಟಿತು.

ಹಳ್ಳಿಗಳಲ್ಲಿ ಭೂತನ ಬೆನ್ನಟ್ಟಿದವರು ಆ ಕ್ಷಣಕ್ಕೆ ಗೆದ್ದರೂ ಅದು ಸೇಡಿನ,ಕೇಡಿನ,ಸ್ವಾರ್ಥದ ಹಾದಿಯಾದ್ದರಿಂದ ಕೊನೆಗೆ ಅವರೇ ಅದಕ್ಕೆ ಬಲಿಯಾಗಿ ಹೋಗುತ್ತಾರೆ."ಹಾಲುಕುಡಿದ ಮಕ್ಕಳೇ ಬದುಕೋದು ಕಷ್ಟ ವಿಷ ಕುಡಿದವರು ಉಳಿತಾರೆಯೇ" ಎಂಬ ಜನರ ಮಾರ್ಮಿಕ ಮಾತುಗಳಿಲ್ಲಿ ವಿಶೇಷ.

ಯೋಗ ವಿದ್ಯೆ ಮತ್ತು ತಾಂತ್ರಿಕ ವಿದ್ಯೆಗಳಲ್ಲಿ ಯಾವುದು ಶ್ರೇಷ್ಟ ಯಾವುದು ಕನಿಷ್ಟ ಎಂದು ಯೋಗ ದಾರಿ ತೋರುವ ಅಲ್ಲಮ " ನಾನು ಘನ,ತಾನು ಘನವೆಂಬ ಹಿರಿಯರುಂಟೆ?" ಎಂಬ ಪ್ರಶ್ನೆಯ ಮೂಲಕವೇ ತೋರಿಕೆಯ ವ್ಯಕ್ತಿ ವಿಜೃಂಭಣೆಯ ಅಹಂಕಾರ ಮೂಲವಾದ ಸ್ವಾರ್ಥ ಶಕ್ತಿಗಿಂತಲೂ ಶೂನ್ಯ ಗೊಳ್ಳುವ ಬಯಲಾಗುವ ಸಮಾಜ ಉದ್ಧಾರದ ಸಾತ್ವಿಕ ಶಕ್ತಿಯೇ ಮಹತ್ವದ್ದು ಎಂಬುದನ್ನ ಗೋರಕ್ಷನ ವಜ್ರದೇಹದ ಸಾಧನೆಯನ್ನ ಮಣಿಸಿ ಯೋಗದ ಬಯಲ ಕ್ರಿಯೆಯನ್ನ ಶೂನ್ಯತನವನ್ನ ಬೆಂಕಿ ಕಿಡಿ ಹೊಮ್ಮುವಂತಹ ಗೋರಕ್ಷನ ಎದರು ಗಾಳಿಗೆ ಹೊಡೆದಂತೆ ಬಯಲಾಗುವ ಅಲ್ಲಮನ ಸಾತ್ವಿಕ ಶಕ್ತಿಯಿಂದಲೇ ಅಚ್ಚರಿ ಹುಟ್ಟಿಸುತ್ತಾನೆ.


ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಪ್ರೇಮದ ಸುತ್ತ ಬರುವ ತಾಮಸ ಶಕ್ತಿಗಳೂ ಗಮನಾರ್ಹ.ಬೆಟ್ಟಳ್ಳಿಯ ತಿಮ್ಮಿಯನ್ನ ಗೆಲ್ಲಲು ಗುತ್ತಿ ಮಲೆಯಾಳಿ ಯಂತ್ರದ ಮೊರೆ ಹೋಗುವುದು,ಮುಕುಂದಯ್ಯನನ್ನ ದೂರ ಮಾಡಲೆಂದೇ ಚಿನ್ನಮ್ಮನಿಗೆ ಪಡಬಾರದ ಯಾಂತ್ರಿಕ ಮಾಂತ್ರಿಕ ಶಕ್ತಿಗೆ ಒಳಗುಮಾಡುವುದು.ಮುಕುಂದಯ್ಯನ ಸಾತ್ವಿಕ ಶಕ್ತಿಯ ಎದರು ಜನರ ಕಂದಾಚಾರಗಳು ಪಶುಬಲಿಗಳು ಸಾಂಕೇತಿಕವಾಗಿ ಅವರೊಳಗಿನ ಪಶುತ್ವವನ್ನೇ ತೋರುವಂತೆ ಕಾಣುತ್ತವೆ. ಚಿಂಕ್ರ,ನಾಗತ್ತೆ ತಕ್ಷಣದ ಉದಾಹರಣೆಗಳಂತೆ ಕಾಣುತ್ತಾರೆ.ಈ ನೆಲೆಯಲ್ಲಿ ಈ ಕಾದಂಬರಿಯು ಧಾರ್ಮಿಕ ನೈತಿಕ ಪುರುಷಾಧಿಕಾರಗಳ ನಡುವೆ ಹೆಣ್ಣು ಮಕ್ಕಳ ಹಲವು ಬಗೆಯ ತಲ್ಲಣಗಳನ್ನ ತಾಮಸಗಳ ತೆರೆಯಲ್ಲಿ ತೋರಿದಂತೆಯೇ ಕಾಣುತ್ತದೆ.

ಹೆಚ್.ಎಸ್. ಶಿವಪ್ರಕಾಶರ ಕವಿತೆ ಮಿಲರೇಪ ತಾಮಸ ಮತ್ತು ಸಾತ್ವಿಕ ಶಕ್ತಿಗಳ ನಡುವಿನ ತಾಕಲಾಟದ ಆಯ್ಕೆಯನ್ನೇ ಕುರಿತದ್ದಾಗಿದೆ. ಮಿಲರೇಪ ಟಿಬೇಟಿಯನ್ ಮಹಾ ಸಂತ. ಈತ ಬಾಲ್ಯದಲ್ಲಿದ್ದಾಗ ಅಪ್ಪನ ದುಡಿಮೆ ಅಮ್ಮನ ಪ್ರೀತಿಯಲ್ಲಿ ಆನಂದವಾಗಿದ್ದ.ಸುಖವಾಗಿದ್ದ ಆದರೆ ಅಪ್ಪನ ಅಕಾಲಿಕ ಸಾವು ಆತನ ಆನಂದದ ಬಾಳಿಗೆ ತೆ ಎಳೆದು ಆತ ತನ್ನ ಅಮ್ಮನೊಂದಿಗೆ ಚಿಕ್ಕಪ್ಪನ ಹಿಂಸೆ,ನೋವುಗಳನ್ನ ಅನುಭವಿಸಬೇಕಾಗುತ್ತದೆ. ಯೌವನದ ತನಕವೂ ಅನುಭವಿಸಿದ ನೋವಿನಿಂದ ಬಿಡುಗಳಡೆ ಪಡೆಯಲು ಅಮ್ಮ ಆತನನ್ನ ಸಾಧನೆಯ ಮಾರ್ಗದ ಕಡೆ ಕಳಿಸುತ್ತಾಳೆ. ಹಳ್ಳಿಗಳಲ್ಲಿ ಹಿಂಸೆಯ ಬಳಸುವಂತೆಯೇ ಮಿಲರೇಪ ಚಿಕ್ಕಪ್ಪನ ಹಿಂಸೆಯನ್ನ ಕೊನೆಗಾಣಿಸಲು ಸಾಧನೆಯ ಮಾರ್ಗದತ್ತ ಹೊರಡುತ್ತಾನೆ. ಹನ್ನೆರಡು ವರ್ಷಗಳ ಕಾಲ ಪಡಬಾರದ ಕಷ್ಟ ಪಟ್ಟು ಕೊನೆಗೂ ವಿದ್ಯೆ ಸಿಗದಾಗ ಗುರುವಿನ ಪತ್ನಿ ಅಂದರೆ ಲೋತ್ಸ ಮಾರ್ಪನ ಹೆಂಡತಿಯ ಬಳಿ ಸಾಧನೆಯ ಶಕ್ತಿ ದೊರಕಿಸಿ ಕೊಡುವಂತೆ ಹೇಳಿ ಎಂದು ವಿನಂತಿಸಿಕೊಳ್ಳುತ್ತಾನೆ.ಅಲ್ಲೂ ಭರವಸೆ ಸಿಗದೆ ಕೊನೆಗೆ ಆತ್ಮ ಹತ್ಯೆಯತ್ತ ಮುಖಮಾಡುತ್ತಾನೆ. ಆಗ ಅಲ್ಲಿಗೆ ಬಂದ ಮಾರ್ಪ ಸಾವಿನ ಅಂಚಿನಿಂದ ಮಾತ್ರ ಹೊಸ ಜ್ಞಾನ ಸಾಧ್ಯ ಇಷ್ಟು ದಿನ ನೀನು ಕೇವಲ ಸೇಡಿಗೆ ಬಿದ್ದು ಜ್ಞಾನದ ಮಹಾದಾರಿಗಿಂತಲೂ ಸೇಡಿಗಾಗಿ ತಾಮಸದ ಕಿರು ಜ್ಞಾನಗಳತ್ತಲೇ ವಾಲುತಿದ್ದೆ ಆದ್ದರಿಂದ ನಿನಗೆ ಕಲಿಸಲು ತಡವಾಯಿತೆಂದು ಹೇಳಿ ಆತನಿಗೆ ಜ್ಞಾನ ದೀಕ್ಷೆ ನೀಡುತ್ತಾನೆ.

ಮಹಾನ್ ತಾಂತ್ರಿಕ ವಿದ್ಯೆ ಪಡೆದು ವಾಪಾಸು ಬರುವಾಗ ದಾರಿಯ ವಿಶ್ರಾಂತಿಯಲ್ಲಿ ಅಮ್ಮನೂ ಮಡಿದ ತನ್ನ ಮನೆಯೂ ಹಾಳಾಗಿ ಹೋದ ಕನಸು ಕಾಣುತ್ತಾನೆ. ಮರುದಿನ ಊರಿಗೆ ಬಂದು ನೋಡಲು ಕನಸು ನಿಜವಾಗಿರುತ್ತದೆ.ಮಗನ ಮದುವೆ ಮಾಡುತಿದ್ದ ಚಿಕ್ಕಪ್ಪನ ಆದಿಯಾಗಿ ಎಂಬತ್ತೈದು ಜನರನ್ನ ಹಿಮಕಲ್ಲುಗಳ ಮಳೆಗೆರೆದು ಸಾಯಿಸುತ್ತಾನೆ. ಮುಂದೆ ಆತನ ಎದರು ಡಾಕಿಣಿಯರು ಬಂದು ನೀನು ಹೂ ಅನ್ನು ಚಿಟಿಕೆ ಹೊಡೆಯುವುದರೊಳಗೇ ನಿನ್ನ ಅಪ್ಪ ಅಮ್ಮನನ್ನ ಬದುಕಿಸುತ್ತೇವೆ.ಮರಳಿ ನಿನ್ನ ಮನೆಯನ್ನ ಮೊದಲಿನಂತೆಯೇ ಮಾಡುತ್ತೇನೆ ಎನ್ನಲು ಮಿಲರೇಪ ಲೋಕದ ಆಸೆಗೆ ಮತ್ತೆ ವಾಲದೇ ಬುದ್ಧನಂತೆಯೇ ಸಂಬಂಧಗಳ ಹಂಗು ತೊರೆದು ವಿರಾಗಿಯಾ ದಾರಿ ಹಿಡಿದು ಲೋಕದ ಆಸೆಗೆ ಮತ್ತೆ ಮರಳದೇ ಪ್ರಕೃತಿಯ ಸಾವೆಂಬ ಚಕ್ರವನ್ನ ಹಿಂದಕ್ಕೆ ತಿರುಗಿಸುವ ಆಸೆ ಪಡದೇ ಮೋಹಕ್ಕೆ ತನ್ನ ಸಾಧನೆಯನ್ನ ಬಲಿ ನೀಡದೇ ತ್ಯಾಗಕ್ಕೆ ಒಲಿದು ವಿರಾಗ ಕಳೆದು ಕೊಳ್ಳದೇ ತಾಮಸ ಶಕ್ತಿಗಳ ತಾತ್ಕಾಲಿಕ ಆನಂದ ನೀಡುವ ಶಕ್ತಿಯ ಹಿಂದೆ ಬಿದ್ದು ಸ್ವಾರ್ಥಕ್ಕಾಗಿ ನಿಲ್ಲದೇ ಲೋಕೋದ್ದಾರದ ಕಡೆ ಹೊರಡುತ್ತಾನೆ.ಟಿಬೇಟ್ ಎಂಬ ಕತ್ತಲ ನಾಡಿಗೆ ಬೆಳಕಾಗಿ ನಿಲ್ಲುತ್ತಾನೆ!

ಸಾಧನೆಯಲ್ಲಿ ವ್ಯಕ್ತಿ ಪ್ರದರ್ಶನಕ್ಕಿಂತ ಸ್ವಾರ್ಥ ಮರೆಯುವ ವಿದ್ಯೆಗಿಂತಲೂ ಲೋಕೋದ್ದಾರದ ಸ್ವಾರ್ಥ ದೂರವಾದ ವಿದ್ಯೆಯೇ ಶ್ರೇಷ್ಟವೆಂದು ಹಳ್ಳಿಗಳಲ್ಲೂ ತಾಮಸ ದೇವರ ಎದರು ಹನುಮಪ್ಪ ಸಾತ್ವಿಕ ಶಕ್ತಿಯಾಗಿ ಊರ ಉದ್ದಾರಕನಂತೆಯೇ ಈಗಲೂ ಜನರೊಳಗೆ ಬೇರೂರಿದ್ದಾನೆ.ಇದಕ್ಕೆ ಉದಾಹರಣೆಯಂತೆ ಏಟು ಎದರೇಟು ಎಂಬ ಕನ್ನಡ ಸಿನಿಮಾವನ್ನೂ ನೋಡಬಹುದಾಗಿದೆ.

## ನನ್ನೆದೆಯೇ ನಿನ್ನ ಪಾದದ ನೆಲವಾಗಿ



ಈ ಮೃಗಾಲಯದ
ರತ್ನಪಕ್ಷಿಯನ್ನು ನೋಡಿ
ಏನು ಕಿಲಕಿಲವೇ!
ಒಂದಿನಿತಾದರೂ ಇಣುಕು
ನನ್ನೆದೆಯೊಳಗೆ
ಕಂಡೀತು ನಿನಗೆ ದಾವಾನಲವೇ!

ನಿರಿಗೆಯೆತ್ತಿ ಕಾಲು
ತಾಗಸಬೇಡವೇ ನೆಲಕ್ಕೆ
ನನ್ನೆದೆಯೇ ನಿನ್ನ ಪಾದದ ನೆಲವಾಗಿ
ನಿನ್ನ ಹೆಜ್ಜೆಯ ಹೂ ಹೊರಲು ಸಿದ್ಧ
ನನ್ನ ಜೀವಹಂಸ ಹಾರಿಬಿಡಲೇ ಹೊರಕ್ಕೆ

ಕಣ್ಣು ಚಂಚಲಿಸಬೇಡವೇ ನಲ್ಲೇ
ಎದುರಿಗಿದೆ ಹುಲ್ಲೆ!
ಅದಕಿಂತ ನಿನ್ನ ಸ್ವಭಾವ
ಚಲ್ಲು-ಚಲ್ಲೇ!

ಇದು ಮೃಗಾಲಯವೇ ಮುಗುದೆ
ಬಳಿಯೇ ಇರುವೆನೇ ಭ್ರಮರೇ
ಅರೆಗಳಿಗೆಯಿತ್ತ ಹೊರಳಿಸೇ ಅಕ್ಷಿಪಟಲ
ನನ್ನೆದೆಯೊಳಗಿದೆ ಪ್ರೀತಿ ಬಾನಗಲ

ವಿಜಯಪುರದ ವೈಭವದಗೋಳಗುಮ್ಮಟ
ಮೈಸೂರು ಬೀದಿಗಳ ವಿಶಾಲತೆ
ಅರಮನೆಯ ಕೃತಕ ಬೆಳಕೆಲ್ಲ
ಮರೆತು ಇರು ಇಲ್ಲೇ
ನನ್ನ ಪ್ರೀತಿಯ ಹುಲ್ಲೆ.

ನಾನು ಕೊಡಲಾರದ ಗುಟುಕು
ಕೊಡುತ್ತದೆ
ಈ ರತ್ನ ಪಕ್ಷಿ ನಿನಗೆ,
ನಾನಿಡಲಾಗದ ಕಾವಲಿಡುತ್ತದೆ
ಈ ಜಿರಾಫೆ, ನೊಡದರ ಕುತ್ತಿಗೆ

ನೀನಿಲ್ಲಿಯೇ ಇರೆ ನನ್ನ "ಪರಿ"
ಪ್ರಾಣಿಗಳೆಂದು ಕರೆಸಿಕೊಳ್ಳುವ
"ಫರಿಸ್ತೆ"ಗಳೊಂದಿಗೆ
ನಾನಿರುವೆನಲ್ಲಿ
ಮನುಷ್ಯರೆಂಬ"ಸೈತಾನ"ರೊಂದಿಗೆ

•ಡಿ.ಎಮ್. ನದಾಫ್

ಚಿತ್ರದುರ್ಗ

# ಖೋಟಾನೋಟು ಚಂದ್ರನ ಬಂಧನದ ಬೆನ್ನಲ್ಲೇ ಪೋಲೀಸ್ ಪರಾರಿ..!

● ಹೆಚ್.ಲಕ್ಷ್ಮಣ್.

ಮಧ್ಯಕರ್ನಾಟಕದಚಿತ್ರದುರ್ಗ ಮತ್ತುಆಂಧ್ರ ಪ್ರದೇಶಗಳಲ್ಲಿ ತನ್ನ ಕೈಚಳಕದಿಂದ ಖೋಟಾ ನೋಟ್ ಮತ್ತುಡಬ್ಲಿಂಗ್‌ದಂಧೆ ನಡೆಸಿಕೊಂಡು ಬಂದಿರುವಖೋಟಾನೋಟ್‌ಚಂದ್ರಅಲಿಯಾಸ್‌ಚಂದ್ರಶೇಖರ ಕಳೆದ ಮೂವತ್ತು ವರ್ಷಗಳಿಂದಲೂ ಪೊಲೀಸ್ ಇಲಾಖೆ ಸೇರಿ ರಾಜಕಾರಣಿಗಳು, ಪತ್ರಕರ್ತರಿಗೆ ಮೇವು ಹಾಕಿಕೊಂಡು ಬಂದವನು.

ಡಬ್ಲಿಂಗ್‌ದಂಧೆ ಮಾಡಿ, ಹಣ ದ್ವಿಗುಣ ಮಾಡಿಕೊಡುವುದಾಗಿ ಸಾಮಾನ್ಯಜನರಿಗೆ ಭರವಸೆ ನೀಡಿ, ಅವರಿಂದ ಲಕ್ಷ ಲಕ್ಷ ವಸೂಲಿ ಮಾಡುವ ಖೋಟಾನೋಟ್‌ಚಂದ್ರ ಅಲಿಯಾಸ್ ಚಂದ್ರಶೇಖರ ಹಣ ವಾಪಾಸ್ಸು ಕೇಳಲು ಬಂದಜನರಿಗೆ ಪೊಲೀಸರನ್ನು ತೋರಿಸಿ, ಬೆದರಿಕೆವೊಡ್ಡಿ ಓಡಿಸುವುದನ್ನು ರಕ್ತಗತ ಮಾಡಿಕೊಂಡಿದ್ದಾನೆ.

ಚಿತ್ರದುರ್ಗ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ಪೊಲೀಸ್‌ಡ್ರೆಸ್ ತೊಡಿಸಿ ತನ್ನ ಸಹಚರರನ್ನು ಇಟ್ಟುಕೊಂಡು ದಂಧೆ ನಡೆಸುವ ಚಂದ್ರ ಕೇಸು, ರೌಡಿಗಳ ದಬ್ಬಾಳಿಕೆ, ನೈಜ ಪತ್ರಕರ್ತರು ಪೇಪರ್‌ಗಳಲ್ಲಿ ವರದಿಮಾಡದಂತೆ ತಡೆಗಟ್ಟುವುದಕ್ಕಾಗಿಯೇ ತಂಡವೊಂದನ್ನು ರಚಿಸಿಕೊಂಡಿರುವ ಚಂದ್ರ ಖೋಟಾನೋಟು ದಂಧೆಯನ್ನು ಮೂರು ದಶಕಗಳಿಂದಲೂ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾನೆ.

ಕಳೆದವಾರ ಚಂದ್ರ @ ಚಂದ್ರಶೇಖರ ಬಂಧನವಾಗುತ್ತಿದ್ದಂತೆ ನಗರ ಪೊಲೀಸ್‌ಠಾಣೆಯ ಪೊಲೀಸ್ ಪೇದೆಇಮಾಮ್, ಪರಾರಿಯಾಗುವ ಮೂಲಕ ಇಡೀ ಪೊಲೀಸ್‌ಇಲಾಖೆಯೇತ 'ಲೆತಗ್ಗಿಸುವಂತೆ ಮಾಡಿದ್ದಾನೆ. ಇಮಾಮ್ ಎಂಬ ವ್ಯಕ್ತಿ ಪೊಲೀಸ್‌ಇಲಾಖೆಯಲ್ಲಿದ್ದುಕೊಂಡು ಕಳ್ಳ ದಂಧೆಕೋರರಿಗೆ ಡಬ್ಲಿಂಗ್ ಮಾಡುವವರಿಗೆ ಡ್ರಗ್ಸ್ ಮಾಫಿಯಾಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾಅವರಿಂದ ಹಣ ವಸೂಲಿಮಾಡಿ, ಕೆಲ ಅಧಿಕಾರಿಗಳಿಗೂ ಹಂಚಿ, ತಾನೂತಿಂದೂ ಹಾಯಾಗಿ



ಕಾಲ ಕಳೆಯುತ್ತಿದ್ದ. ಆದರೆಖೋಟಾನೋಟ್‌ಚಂದ್ರ ಬಂಧನವಾಗುತ್ತಿದ್ದಂತೆ ಇಮಾಮ್ ಪರಾರಿಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.



ಚಿತ್ರದುರ್ಗದ ಪ್ರಭಾವಿ ರಾಜಕಾರಣಿಗಳು, ಸಣ್ಣಪುಟ್ಟ ಗೂಂಡಾಗಳು, ಕೆಲ ದಂಧೆಕೋರರು ಖೋಟಾನೋಟ್ ಚಂದ್ರನಿಂದ ಪದೇ ಪದೇ ವಸೂಲಿ ಮಾಡಿಕೊಂಡುಜೀವನ ಮಾಡುತ್ತಿರುವವರ ಬಗ್ಗೆ ಇಲ್ಲಿಗಲ್ಲಿಗಲ್ಲಿಯಲ್ಲೂ ಸುದ್ಧಿ. ಚಂದ್ರ ಸ್ವತಃ ನಗರಸಭಾ ಸದಸ್ಯನಾಗಿದ್ದು, ಕೆಲವು ಸಂದರ್ಭಗಳಲ್ಲಿ ರಾಜಕೀಯ ಪುಡಾರಿಗಳ ಜೊತೆ, ಪ್ರಭಾವಿ ರಾಜಕಾರಣಿಗಳ ಜೊತೆ ಫೋಜು ಕೊಟ್ಟು ಓಡಾಡುವುದನ್ನುಕೂಡ ನೋಡಬಹುದು. ಆದರೆ ಈತನ ನೈಜ ಕಸಬು ಡಬ್ಲಿಂಗ್‌ದಂಧೆ ಮಾಡುವುದೇ.

ತನ್ನ ಸ್ವಂತಜಾತಿ ಸವಿತಾ ಸಮಾಜದ ಜಿಲ್ಲಾಧ್ಯಕ್ಷನಾಗಿರುವ ಖೋಟಾನೋಟ್ ಚಂದ್ರ ಆ ಜಾತಿಗೆ ಅನುಕೂಲ ಮಾಡಿದ್ದಾನೋಇಲ್ಲವೋ ಬೇರೆ ಮಾತು. ಆದರೆಜಾತಿಯ ಹೆಸರನ್ನಂತೂ ದುರ್ಬಳಕೆ ಮಾಡಿಕೊಂಡಿದ್ದಾನೆ. ಕಡಿಮೆ ಸಂಖ್ಯೆಯಲ್ಲಿರುವ ಜನಾಂಗವೊಂದು ಘನತೆಯಿಂದ ಬದುಕುವುದನ್ನು ರೂಢಿಸಿಕೊಂಡಿರುತ್ತದೆ.ಆದರೆಚಂದ್ರನಂತಹ ನಟೋರಿಯಸ್‌ಗಳು ತನ್ನದಂಧೆಗಾಗಿಯೇಜಾತಿಯನ್ನು, ಧರ್ಮವನ್ನು, ಪತ್ರಕರ್ತರನ್ನು, ಪೊಲೀಸರನ್ನು ಬಳಿಸಿಕೊಂಡು ದುಡ್ಡುಮಾಡುವುದನ್ನುಚಂದ್ರ ರೂಢಿಸಿಕೊಂಡಿದ್ದಾನೆ.

ಪೊಲೀಸರ ಮತ್ತು ಕೆಲ ಪೊಲೀಸ ಅಧಿಕಾರಿಗಳಿಗೆ ಮಾಮೂಲು ಫಿಕ್ಸ್ ಮಾಡಿಕೊಂಡಿರುವ ಖೋಟಾನೋಟ್ ಚಂದ್ರ ತನಗೆ ಯಾವುದೇ ಅಪಾಯವಿಲ್ಲ ಎಂಬ ಅಹಂನಲ್ಲಿ ಬದುಕುತ್ತಿದ್ದ.ಆದರೆ ಪೊಲೀಸರ ಮತ್ತೊಂದು ಗುಂಪು ಖೋಟಾನೋಟ್‌ಚಂದ್ರನನ್ನು ಬಂಧಿಸುವ ಮೂಲಕ ಹೆಡೆಮುರಿಕಟ್ಟಿದ್ದಾರೆ.

ಚಂದ್ರ ಬಂಧನವಾಗುತ್ತಿದ್ದಂತೆ ಇಮಾಮ್ ನಂತಹ ಕಳ್ಳ ಪೊಲೀಸ್‌ಊರು ಬಿಟ್ಟಿದ್ದು, ಕೆಲವರಿಗೆ ತಲೆಬಿಸಿ ಉಂಟಾಗಿದೆ.ಒಟ್ಟಾರೆಯಾಗಿ ದಂಧೆಕೋರರು, ಕೆಲ ರಾಜಕಾರಣಿಗಳು ಕೆಲ ಪೊಲೀಸರು, ಚಂದ್ರನ ಬಂಧನದಿಂದಾಗಿತೀವ್ರಟೆನ್ಷನ್‌ಗೆ ಒಳಗಾಗಿದ್ದಾರೆ.

ಖೋಟಾನೋಟ್, ಡಬ್ಲಿಂಗ್, ಡ್ರಗ್ಸ್ ಮಾಫಿಯಾ, ಗ್ರಾಮೀಣ ಪ್ರದೇಶಗಳಲ್ಲಿ ಅವ್ಯಾಹತವಾಗಿ ಮದ್ಯ ಸಪ್ಲೇಆಗುತ್ತಿದ್ದು, ಕೆಲ ಪೊಲೀಸ್ ಅಧಿಕಾರಿಗಳಂತೂ ತಮಗೆ ಸಂಬಂಧವೇ ಇಲ್ಲವೆಂಬಂತೆ ಒಂದಷ್ಟು ಹಣ ಪೀಕಿಸಿಕೊಂಡು ದಂಧೆಕೋರರಿಗೆ ಸಪೋರ್ಟ್ ಮಾಡಿ, ಎಲ್ಲಾ ವಹಿವಾಟು ನಡೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಜಿಲ್ಲೆಯಲ್ಲಿಅಕ್ರಮ ಮದ್ಯ ಮಾರಾಟ ಹಳ್ಳಿ, ಹಳ್ಳಿಯಲ್ಲೂ ನಡೆಯುತ್ತಿದ್ದರೂ ಪೊಲೀಸರಾಗಲೀ, ಅಬಕಾರಿ ಇಲಾಖೆ ಅಧಿಕಾರಿಗಳಾಗಲಿ ಅಕ್ರಮ ಮದ್ಯ ಮಾರಾಟಗಾರರನ್ನು ಬಂಧಿಸಿ, ಒಂದೇಒಂದು ಕೇಸು ದಾಖಲಿಸಿರುವ ಉದಾಹರಣೆ ಜಿಲ್ಲೆಯ ಯಾವ ಪೊಲೀಸ್ ಠಾಣೆಗಳಲ್ಲೂ ಮತ್ತು ಅಬಕಾರಿ ಇಲಾಖೆಗಳಲ್ಲೂ ಕಂಡು ಬರುವುದಿಲ್ಲ.

ಸ್ವತಃ ಅಬಕಾರಿ ಇಲಾಖೆ ಅಧಿಕಾರಿಯೇ ಲಂಚ ಪಡೆದುಕೊಳ್ಳುವ ಸಮಯದಲ್ಲಿ ಎ.ಸಿ.ಬಿ. ಅಧಿಕಾರಿಗಳ ಕೈಗೆ ಸಿಕ್ಕು ಕೇಸು ದಾಖಲಿಸಿಕೊಂಡಿರುವ ಉದಾಹರಣೆಯೂ ಇದೆ. ಅಬಕಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿಯೇ ಮದ್ಯ ಮಾರಾಟದಂತಹದಂಧೆಗೆ ಕುಮ್ಮಕ್ಕು ನೀಡುತ್ತಿರುವಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಒಬ್ಬಖೋಟಾನೋಟ್ ಚಂದ್ರ ಅಲಿಯಾಸ್ ಚಂದ್ರಶೇಖರನನ್ನು ಬಂಧಿಸಿದರೆ, ಡಬ್ಲಿಂಗ್, ದೋನಂಬರ್ ದಂಧೆಗಳನ್ನು ನಿಯಂತ್ರಿಸಿದಂತೆ ಆಗಲ್ಲ. ಖೋಟಾನೋಟ್‌ಚಂದ್ರನಂತೆ ನೂರಾರುಜನದಂಧೆಕೋರರಿದ್ದು, ಅವರಕ್ರಿಮಿನಲ್ ಕೆಲಸಗಳಿಗೆ ಪರೋಕ್ಷವಾಗಿ ಬೆಂಬಲಿಸುತ್ತಿರುವವನ್ನುಕೂಡ ಹಾಗೆಯೇ ಪೊಲೀಸ್ ಅಧಿಕಾರಿಗಳನ್ನು ಬಂಧಿಸಿ ಎಡೆಮುರಿಕಟ್ಟಬೇಕಾಗಿದೆ. ಪೊಲೀಸ್ ಇಲಾಖೆ ಅಧಿಕಾರಿಗಳು ರಾಜರೋಷವಾಗಿಅಕ್ರಮ ದಂಧೆಗಳಿಗೆ ಕುಮ್ಮಕ್ಕು ನೀಡಿ, ಮಾಮೂಲಿ ವಸೂಲಿಮಾಡುತ್ತಿದ್ದು, ಚಿತ್ರದುರ್ಗಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಅದಪತನಕ್ಕೆ ಹೋಗಿರುವುದಕ್ಕೆ ಮೇಲಿನ ಇವೆಲ್ಲಾ ಘಟನೆಗಳೇ ಸಾಕ್ಷಿ ಇವುಗಳನ್ನು ಸರಿಪಡಿಸಬೇಕಾದರೆ ಕಳೆದ ಕೆಲವು ವರ್ಷಗಳಿಂದ ಜಾಂಡಾ ಹೂಡಿರುವ ಅಧಿಕಾರಿಗಳನ್ನು ಎತ್ತಂಗಡಿಮಾಡಬೇಕಾಗಿದೆ.

# ಟೀಂ ಇಂಡಿಯಾದ ನಾಯಕತ್ವ ಬದಲಾಗಿದ್ದು ಏಕೆ..?

● ಮಲ್ಲಿಕಾರ್ಜುನ ಹಿರೇಮಠ್

ಆಟ ಮುನ್ನಡೆಸುವಾಗ ಅದರ ನಾಯಕತ್ವ ಕೂಡ ಅಷ್ಟೆ ಮುಖ್ಯವಾಗುತ್ತದೆ. ಕೆಲವೊಮ್ಮೆ ನಾಯಕತ್ವದ ಗುಣ ಇಲ್ಲದಿದ್ದರೆ ಆಟದಲ್ಲಿ ಹಲವಾರು ಎಡವಟ್ಟುಗಳು,ಅನಾವಶ್ಯಕ ಸೋಲುಕೂಡ ಕಾಣಬಹುದು ಹಾಗಾಗಿಯೇ ನಾಯಕತ್ವದ ಗುಣ ಅಷ್ಟೆ ಮುಖ್ಯವಾಗುತ್ತದೆ. ಈ ನಾಯಕತ್ವ ಮತ್ತು ನಾಯಕ ಕುರಿತಾದ ಮಾತು ಯಾಕೆಂದರೆ ಇತ್ತಿಚೆಗೆ ಕ್ರಿಕೆಟ್ ಆಟದಲ್ಲಿ ಇದೊಂದು ರೀತಿಯ ವಿವಾದಗಳು ಕೂಡ ಆಗಿವೆ.ಒಳ್ಳೆಯ ನಾಯಕತ್ವ ಇದ್ದರೂ ಆಟದಲ್ಲಿ ಕೆಲವೊಂದು ಬಾರಿ ವಿಫಲ ಕಾಣುತ್ತಿದ್ದ ಕಾರಣ ಅದಕ್ಕೊಂದು ಪರಿಹಾರ ಕಂಡುಕೊಳ್ಳುವಂತೆ ನಾಯಕತ್ವ ಬದಲಾವಣೆಯಾಯಿತು. ಇದು ಹಲವಾರು ವಿವಾದಗಳಿಗೂ ಕಾರಣವಾಯಿತು. ದಕ್ಷಿಣ ಆಫ್ರಿಕಾದ ವಿರುದ್ಧ ಆಟಕ್ಕೆ ಪ್ರವಾಸಕ್ಕೂ ತೆರಳುವ ಮುನ್ನ ವಿರಾಟ್ ಕೊಯ್ಲಿ ಅವರನ್ನು ಏಕದಿನ ಕ್ರಿಕಟ್ ತಂಡದ ನಾಯಕತ್ವದಿಂದ ಕೆಳಗಿಳಿಸಲಾಯಿತು ಆ ಜಾಗಕ್ಕೆ ರೋಹಿತ್ ಶರ್ಮಾ ಅವರನ್ನು ನೇಮಕ ಮಾಡಲಾಯಿತು. ಇದು ಹಲವಾರು ಪ್ರಶ್ನೆಗಳಿಗೆ ಕಾರಣವಾಯಿತು ಕೊನೆಗೂ ವಿವಾದಗಳು ಶುರುವಾದವು . ಇದಕ್ಕೆ ಆಟಗಾರರ ಮಧ್ಯೆ ಇದ್ದ ಕಮ್ಯೂನಿಕೇಷನ್ ಕೂಡ ಎನ್ನಲಾಗಿತ್ತು , ನಾಯಕ ಮತ್ತು ಆಟಗಾರರ ನಡುವೆ ಇದ್ದ ಆಂತರಿಕ ಸಂಘರ್ಷವೂ ಇದಕ್ಕೆ ಕಾರಣ ಎನ್ನಲಾಗಿದೆ ಇಂತ ವಿವಾದಗಳ ಮಧ್ಯೇಯೇ ಟೀಂ ಇಂಡಿಯಾ ಮಾಜಿ ಕೋಚ್ ರವಿಶಾಸ್ತ್ರಿ ಇದೇ ಮೊದಲ ಬಾರಿಗೆ ಈ ಬೆಳವಣಿಗೆಯ ಕುರಿತಂತೆ ತುಟಿಬಿಚ್ಚಿದ್ದಾರೆ. ಭಾರತ ಏಕದಿನ ತಂಡದ ನಾಯಕತ್ವವನ್ನು ಕಳೆದುಕೊಂಡಿದ್ದರಿಂದ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಇಬ್ಬರಿಗೂ ಒಳ್ಳೆದಾಗಲಿದೆ ಎಂದು ಭಾರತದ ಮಾಜಿ ಕೋಚ್ ರವಿಶಾಸ್ತ್ರಿ ಹೇಳಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್‌ಗೂ ಮುನ್ನ ಸ್ಟಾರ್ ಸ್ಪೋರ್ಟ್ಸ್‌ನೊಂದಿಗೆ ಮಾತನಾಡಿದ ಅವರು, 'ಕೋವಿಡ್ ಬಯೋಬಬಲ್‌ನಲ್ಲಿದ್ದುಕೊಂಡು ಆಡುವಾಗ ಒಬ್ಬನೇ ಆಟಗಾರ ಮೂರೂ ತಂಡಗಳನ್ನು ಮುನ್ನಡೆಸುವುದು ಕಷ್ಟ. ಹೀಗಾಗಿ ಕೊಹ್ಲಿ ಟಿ20, ಏಕದಿನ ತಂಡದ ನಾಯಕತ್ವ ಬಿಟ್ಟಿದ್ದು ಒಳ್ಳೆಯದ್ದೆ ಆಯಿತು. ಇನ್ನು ರೋಹಿತ್‌ಗೆ ಟಿ20, ಏಕದಿನ ವಿಶ್ವಕಪ್‌ಗಳಿಗೆ ಸಿದ್ಧತೆ ನಡೆಸಲು ಸಮಯ ಸಿಗಲಿದೆ' ಎಂದಿದ್ದಾರೆ. ಯುಎಇನಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯು ಮುಕ್ತಾಯವಾಗುತ್ತಿದ್ದಂತೆಯೇ ವಿರಾಟ್ ಕೊಹ್ಲಿ, ಈ ಮೊದಲೇ ಘೋಷಿಸಿದಂತೆ ಭಾರತ ಟಿ20 ನಾಯಕತ್ವದಿಂದ ಕೆಳಗಿಳಿದಿದ್ದರು. ಆದರೆ ಈ ಮೊದಲೇ ಘೋಷಿಸಿದಂತೆ ಟೆಸ್ಟ್ ಹಾಗೂ ಏಕದಿನ ತಂಡದ ನಾಯಕರಾಗಿ ಮುಂದುವರೆಯುವುದಾಗಿ ಸ್ಪಷ್ಟಪಡಿಸಿದ್ದರು. ಇದೆಲ್ಲದರ ನಡುವೆ ಅಚ್ಚರಿಯ ಬೆಳವಣಿಗೆ ಎನ್ನುವಂತೆ ಭಾರತೀಯ ಆಯ್ಕೆ ಸಮಿತಿಯು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತಂಡವನ್ನು ಆಯ್ಕೆ ಮಾಡುವಾಗ, ವಿರಾಟ್ ಕೊಹ್ಲಿಯನ್ನು ಏಕದಿನ ನಾಯಕತ್ವದಿಂದ ಕೆಳಗಿಳಿಸಿ ರೋಹಿತ್ ಶರ್ಮಾಗೆ ಸೀಮಿತ ಓವರ್‌ಗಳ ತಂಡದ ನಾಯಕ ಪಟ್ಟ ಕಟ್ಟಲಾಯಿತು. ಸೀಮಿತ ಓವರ್‌ಗಳ ಕ್ರಿಕೆಟ್‌ನ ಎರಡು ಮಾದರಿಗೆ ಇಬ್ಬರು ನಾಯಕರು ಇರುವುದು ಸೂಕ್ತವಲ್ಲ ಎನ್ನುವ ನಿರ್ಧಾರಕ್ಕೆ ಬಂದು ಕೊಹ್ಲಿಯನ್ನು ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಇದೀಗ ಈ ಬೆಳವಣಿಯ ಬಗ್ಗೆ ಮಾತನಾಡಿರುವ ರವಿಶಾಸ್ತ್ರಿ, ವಿರಾಟ್ ಕೊಹ್ಲಿ ಇದೀಗ ರೆಡ್ ಬಾಲ್ ಕ್ರಿಕೆಟ್‌ನತ್ತ ಮತ್ತಷ್ಟು ಗಮನ ಹರಿಸಲು ಸಮಯಾವಕಾಶ ಸಿಗಲಿದೆ. ಇದರ ಜತೆಗೆ ಅವರಿಂದ ಎಷ್ಟು ವರ್ಷ ಸಾಧ್ಯವೋ ಅಷ್ಟು ವರ್ಷಗಳ ಕಾಲ ಟೆಸ್ಟ್ ಕ್ರಿಕೆಟ್‌ನಲ್ಲಿ ತಂಡವನ್ನು ಮುಂದುವರೆಸಲು ಅವಕಾಶ ಸಿಗಲಿದೆ. ಇನ್ನೂ ವಿರಾಟ್ ಕೊಹ್ಲಿ ಅವರಲ್ಲಿ ಐದರಿಂದ ಆರು ವರ್ಷಗಳ ಕ್ರಿಕೆಟ್ ಬಾಕಿ ಇದೆ ಎಂದು ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

### 2 ನಾಯಕರನ್ನು ಹೆಸರಿಸಿದ ರವಿಶಾಸ್ತ್ರಿ

ಈ ಮೊದಲು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ , ತಾವು ವಿರಾಟ್ ಕೊಹ್ಲಿ ಅವರನ್ನು ಟಿ20 ನಾಯಕತ್ವದಿಂದ ಕೆಳಗಿಳಿಯದಂತೆ ಮನವೊಲಿಸಿದ್ದಾಗಿ ತಿಳಿಸಿದ್ದರು. ಇದಾದ ಬಳಿಕ ಬಳಿಕ ದಕ್ಷಿಣ ಆಫ್ರಿಕಾ ಪ್ರವಾಸಕ್ಕೂ ಮುನ್ನ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ್ದ ಕೊಹ್ಲಿ, ಟಿ20 ನಾಯಕತ್ವದಿಂದ ಕೆಳಗಿಳಿಯುವುದು ನನ್ನ ಸ್ವಂತ ನಿರ್ಧಾರವಾಗಿತ್ತು. ಇದಾದ ಬಳಿಕ ಯಾರೂ ನನ್ನ ಬಳಿ ಮಾತುಕತೆ ನಡೆಸಿರಲಿಲ್ಲ ಎಂದು ಕೊಹ್ಲಿ ಸ್ಪಷ್ಟನೆ ನೀಡಿದ್ದರು.




ಈ ಬಗ್ಗೆ ಮಾತನಾಡಿರುವ ಶಾಸ್ತ್ರಿ, ಉತ್ತಮ ಕಮ್ಯುನಿಕೇಷನ್ ಇದ್ದರೆ ಹೀಗಾಗುತ್ತಿರಲಿಲ್ಲ ಎಂದಿದ್ದಾರೆ. ವಿರಾಟ್ ಕೊಹ್ಲಿ ಕೊಹ್ಲಿ ತಮಗನಿಸಿದ್ದನ್ನು ಹೇಳಿದ್ದಾರೆ. ಇದರ ಬಗ್ಗೆ ಬಿಸಿಸಿಐ ಅಧ್ಯಕ್ಷರು ತಮ್ಮ ಸ್ಟೋರಿ ಹೇಳಬೇಕಿತ್ತು. ಒಳ್ಳೆಯ ಕಮ್ಯುನಿಕೇಷನ್ ಇದ್ದಿದ್ದರೆ, ಈ ವಿಚಾರವನ್ನು ಇನ್ನೂ ಉತ್ತಮವಾಗಿ ನಿಭಾಯಿಸಬಹುದಾಗಿತ್ತು ಎಂದು ಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

### ಕನ್ನಡಿಗ ರೋಹಿತ್ ನಾಯಕತ್ವ?

ಭಾರತದ ಏಕದಿನ ಕ್ರಿಕೆಟ್ ಟಿ 20 ತಂಡಗಳ ನಾಯಕ ಬದಲಾವಣೆ ಬಗ್ಗೆ ಇತ್ತೀಚೆಗೆ ಭಾರಿ ಸುದ್ದಿ ಮಾಡಿದ್ದವಲ್ಲದೆ ವಿವಾದವನ್ನು ಸೃಷ್ಟಿಸಿದ್ದವು .ರೋಹಿತ್ ಶರ್ಮಾ ನೇಮಕ ಬಗ್ಗೆ ಕೆಲವರು ಅಸಮಾಧಾನವನ್ನು ವ್ಯಕ್ತಪಡಿಸಿದ್ದರು,. ಆದರೆ ಈಗ ಶರ್ಮಾ ಆಟದಲ್ಲಿ ಗಾಯಗೊಂಡ ಕಾರಣ ಟೆಸ್ಟ್ ಸರಣಿಯಲಿ ಹೊರಗುಳಿದಿದ್ದಾರೆ 3 ಪಂದ್ಯಗಳ ಏಕದಿನ ಸರಣಿಗೂ ಅವರು ಅಲಭ್ಯವಾಗುವ ಸಾಧ್ಯತೆ ಇದ್ದು, ಉಪನಾಯಕ ಕೆ.ಎಲ್. ರಾಹುಲ್ ನಾಯಕತ್ವ ವಹಿಸಲಿದ್ದಾರೆ ಮಂಡಿರಜ್ಜು ನೋವಿನಿಂದ ಬಳಲುತ್ತಿರುವ ರೋಹಿತ್, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ (ಎನ್‌ಸಿಎ) ಚಿಕಿತ್ಸೆ ಪಡೆಯುತ್ತಿದ್ದಾರೆ. ಕ್ರಿಕೆಟ್‌ನ ಮೂರು ಮಾದರಿಯಲ್ಲಿ ಭಾರತ ತಂಡವನ್ನು ಮುನ್ನಡೆಸುತ್ತಿದ್ದ ವಿರಾಟ್ ಕೊಹ್ಲಿ ಅವರು ಇತ್ತೀಚೆಗೆ ದುಬೈನಲ್ಲಿ ಮುಕ್ತಾಯವಾದ ಟಿ20 ವಿಶ್ವಕಪ್ ಬಳಿಕ ಚುಟುಕು ಕ್ರಿಕೆಟ್ ತಂಡದ ನಾಯಕತ್ವ ತೊರೆದಿದ್ದರು. ಅದಾದ ಬಳಿಕ, ನಿಗದಿತ ಓವರ್‌ಗಳ ತಂಡಕ್ಕೆ ಒಬ್ಬರೇ ನಾಯಕರನ್ನು ಹೊಂದುವ ಉದ್ದೇಶದಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಏಕದಿನ ತಂಡದ ನಾಯಕತ್ವದಿಂದಲೂ ಅವರನ್ನು ಕೆಳಗಿಳಿಸಿ, ರೋಹಿತ್‌ಗೆ ಜವಾಬ್ದಾರಿ ನೀಡಿತ್ತು. ಇದೇ ವೇಳೆ ರಾಹುಲ್ ಅವರನ್ನು ಏಕದಿನ ಮತ್ತು ಟಿ20 ತಂಡಗಳಿಗೆ ಉಪನಾಯಕರನ್ನಾಗಿಯೂ ನೇಮಿಸಲಾಗಿತ್ತು.

# ನೋಡುಗರನ್ನು ರಂಜಿಸಿದ ಹಳೆಯ ಮೂರು ವಿಭಿನ್ನ ಚಿತ್ರಗಳು

ತೆರೆಮರೆ

ಕನ್ನಡ ಚಿತ್ರ ಇತಿಹಾಸ

ಭಾಗ–59



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ರಾಜಕುಮಾರ್ ಅಭಿನಯದಕೈವಾರ ಮಹಾತ್ಮೆ: ಕೈವಾರ ಫಿಲಂಸ್ ಲಾಂಛನದಲ್ಲಿ ಕಪ್ಪುಬಿಳುಪು ಭಕ್ತಿಪ್ರಧಾನಚಿತ್ರ ಕೈವಾರ ಮಹಾತ್ಮೆ ಚಿತ್ರ 1961ರಲ್ಲಿ ಬಿಡುಗಡೆಗೊಂಡಿತು. ಬಿ.ಕೆ.ನಾರಾಯಣಸಿಂಗ್ ನಿರ್ಮಾಣ ಮಾಡಿದ ಚಿತ್ರವನ್ನು ಟಿ.ವಿ.ಸಿಂಗ್ ಠಾಕೂರ್ ನಿರ್ದೇಶಿಸಿದರು. ಮುಂದೆ ಪ್ರಖ್ಯಾತ ನಿರ್ದೇಶಕರಾದ ಜಿ.ವಿ.ಅಯ್ಯರ್ ಹಾಗೂ ಎಸ್.ಕೆ. ಭಗವಾನ್ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ನರಸಿಂಹರಾಜು, ಜಿ.ವಿ.ಅಯ್ಯರ್, ಕೆ.ಎಸ್.ಅಶ್ವತ್ಥ್, ರಾಮಚಂದ್ರಶಾಸ್ತ್ರಿ, ಪಾಪಮ್ಮ, ಶಾಂತಮ್ಮ, ಗಿರಿಮಾಜಿ, ಮುಂತಾದವರು ಅಭಿನಯಿಸಿದರು.



ಬಳೆಗಾರನ ವೃತ್ತಿಯನ್ನು ಹೊಂದಿದಕೈವಾರ ನಾರೇಯಣಪ್ಪನ ಪಾತ್ರದಲ್ಲಿ ರಾಜಕುಮಾರ್ ಭಕ್ತಿ ಪರವಶರಾಗಿ ಅಭಿನಯಿಸಿದ್ದರು.

ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ಜಿ.ವಿ. ಅಯ್ಯರ್ ರಚಿಸಿದರು. ಜಿ.ಕೆ.ವೆಂಕಟೇಶ್ ಸಂಗೀತ ನೀಡಿದ ಚಿತ್ರದಲ್ಲಿ 12 ಹಾಡುಗಳನ್ನು ಅಳವಡಿಸಲಾಗಿದ್ದು, ಪಿ.ಕಾಳಿಂಗರಾವ್, ಎಸ್.ಜಾನಕಿ ಹಾಡುಗಳಿಗೆ ದನಿಯಾದರು. ವೆಂಕಟರಾಂ ಮತ್ತು ನಜೀರ್ ಸಂಕಲನ, ಬಿ.ದೊರೈರಾಜ್ ಛಾಯಾಗ್ರಹಣ ಪಿ.ಎಸ್.ಗೋಪಾಲಕೃಷ್ಣನ್ ನೃತ್ಯ ನಿರ್ದೇಶನ ಚಿತ್ರಕ್ಕಿತ್ತು. ಮದರಾಸಿನ ಮೆಜೆಸ್ಟಿಕ್ ಸ್ಟುಡಿಯೊದಲ್ಲಿ ಚಿತ್ರಚಿತ್ರೀಕರಣಗೊಂಡಿತು. ಹಿಂದಿನ ಕೋಲಾರ ಜಿಲ್ಲೆಯ ಕೈವಾರದಲ್ಲಿ ಜನಿಸಿದ ನಾರೇಯಣಪ್ಪ ಅಮರನಾರೇಯಣನನ್ನು ಕುರಿತು ಸಾಕಷ್ಟು ಸಾಹಿತ್ಯ ರಚಿಸಿದ ಮಹಿಮಾ ಪುರುಷ, ಕಾಲಜ್ಞಾನಿಯೂ ಹೌದು.ಈ ಮಹಿಮಾನ್ವಿತನ ಜೀವನಕಥೆ, ಬದುಕಿನಲ್ಲಿ ನಡೆಯುವ ಪವಾಡಗಳನ್ನು ಈಚಿತ್ರದಲ್ಲಿ ಬಿಂಬಿಸಲಾಗಿದೆ.



ಜಿ.ಕೆ.ವೆಂಕಟೇಶ್ ಹಾಡಿದಕಣ್ತೆರದು ನೋಡು: ಜಿ.ಕೆ. ವೆಂಕಟೇಶ್ ಹಾಡಿರುವ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ' ಮಧುರ ಹಾಡನ್ನು ಒಳಗೊಂಡ, ರಾಜಕುಮಾರ್ ಕುರುಡನಾಗಿ ಅಭಿನಯಿಸಿರುವ ಸಾಮಾಜಿಕ ಕಥಾ ಹಂದರದಕಪ್ಪು ಬಿಳುಪು ಚಿತ್ರ'ಕಣ್ತೆರದು ನೋಡು' ಅರುಣಾಚಲಂ ಸ್ಟುಡಿಯೋಸ್ ಲಾಂಛನದಲ್ಲಿ 1961ರಲ್ಲಿ ತೆರೆಕಂಡಿತು. ವಿ.ಕೆ.ವೇಲನ್ ನಿರ್ಮಾಣದ ಚಿತ್ರವನ್ನು ಟಿ.ವಿ.ಸಿಂಗ್ ಠಾಕೂರ್ ನಿರ್ದೇಶಿಸಿದರು. ಜಿ.ವಿ.ಅಯ್ಯರ್ ಹಾಗೂ ಭಗವಾನ್ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ಜಿ.ವಿ.ಅಯ್ಯರ್, ನರಸಿಂಹರಾಜು, ರಾಜಶ್ರೀ, ರಮಾದೇವಿ, ಜಯಶ್ರೀ, ಅಭಿನಯಿಸಿದರು. ಚಿತ್ರದ ನಿರ್ಮಾಪಕ ವಿ.ಕೆ.ವೇಲನ್ ಅವರ ಮೂಲಕಥೆ ಆಧರಿಸಿ, ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ಕಥೆ ಬರೆದರು. ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ಜಿ.ವಿ.ಅಯ್ಯರ್ ರಚಿಸಿದರು. ಜಿ.ಕೆ.ವೆಂಕಟೇಶ್ ಸಂಗೀತ



ನಿರ್ದೇಶನದಲ್ಲಿ ಅಳವಡಿಸಿರುವ ಒಂಬತ್ತು ಹಾಡುಗಳನ್ನು ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜಿ.ಕ.ವೆಂಕಟೇಶ್, ರಾಜೇಶ್ವರಿ ಹಾಡಿದರು. ಪುರಂದರದಾಸರಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲಕೃತಿಯನ್ನುಚಿತ್ರದಲ್ಲಿ ಅಳವಡಿಸಲಾಗಿದೆ. ವೆಂಕಟರಾಮ್ ಹಾಗೂ ರಘುಪತಿಸಂಕಲನ, ಪಿ.ಎಸ್.ಗೋಪಾಲಕೃಷ್ಣ ನೃತ್ಯ ನಿರ್ದೇಶನ, ದೊರೆಸ್ವಾಮಿ ಪ್ರಸಾಧನ ಹೊಂದಿದ್ದಚಿತ್ರ ಮದರಾಸಿನ ಅರುಣಾಚಲಂ ಸ್ಟುಡಿಯೊದಲ್ಲಿ ಚಿತ್ರೀಕರಣಗೊಂಡಿತು. ಶರಣು ಕಾವೇರಿತಾಯೇ ಕರುನಾಡಜೀವನದಿಯೇ', ಬಂಗಾರದೊಡವೆ ಬೇಕೆ ನೀರೇ, ಹೆಣ್ಣಿನ ಮೇಲೆ ಕಣ್ಣಿಡುವಾಗ, ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ, ಎಡವಿದರೆ ನಾಕುರುಳು ನುಡಿಜಾರೇ ಮೂರುರುಳು ಮುಂತಾದ ಮಧುರಗೀತೆಗಳನ್ನು ಈ ಚಿತ್ರ



ಒಳಗೊಂಡಿತ್ತು.

ಶಂಕರಸಿಂಗ್ ನಿರ್ದೇಶನದ ರಾಜಾಸತ್ಯವ್ರತ: ಪಾರಿಜಾತ ಫಿಲ್ಮ್ಸ್ ಲಾಂಛನದಲ್ಲಿ ಎನ್.ಬಿ.ವತ್ಸಲನ್ ನಿರ್ಮಿಸಿ, ಡಿ.ಶಂಕರಸಿಂಗ್ ನಿರ್ದೇಶನ ಮಾಡಿದ ಕಪ್ಪುಬಿಳುಪು ಭಕ್ತಿಪ್ರಧಾನ ಚಿತ್ರರಾಜಾಸತ್ಯವ್ರತ 1961ರಲ್ಲಿ ತೆರೆಕಂಡಿತು. ಉದಯಕುಮಾರ್, ಢಿಕ್ಕಿ ಮಾಧವರಾವ್, ಬಾಲಕೃಷ್ಣ, ಸೋರಟ್ ಅಶ್ವತ್ ರತ್ನಾಕರ್, ವೀರಭದ್ರಪ್ಪ, ಹನುಮಂತಾಚಾರ್, ಶ್ರೀಕಾಂತ್, ಪ್ರತಿಮಾದೇವಿ, ಅಭಿನಯಿಸಿದರು. ಚಿತ್ರಕ್ಕಾಗಿ ವಿಶ್ವಾಮಿತ್ರಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದರು. ಎಂ.ವೆಂಕಟರಾಜು ಸಂಗೀತ ನೀಡಿದಚಿತ್ರದಲ್ಲಿ 9 ಹಾಡುಗಳಿದ್ದು, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ರಾಣಿ ಹಿನ್ನೆಲೆಗಾಯನ ನೀಡಿದರು. ಪದ್ಮನಾಭನ್ ಹಾಗೂ ವೆಂಕಟರಾಮನ್ಅವರ ಸಂಕಲನ, ವರದರಾಜನ್, ಗೋವಿಂದಸ್ವಾಮಿ ಹಾಗೂ ಬಾಬೂಲಾಲ್ ಛಾಯಾಗ್ರಹಣ, ಭೂಪಾಲ್ ನೃತ್ಯ ನಿರ್ದೇಶನ ಚಿತ್ರಕ್ಕಿತ್ತು. ಮದರಾಸಿನ ಪ್ರಕಾಶ್ ಹಾಗೂ ಫಿಲಂ ಸೆಂಟರ್ ಸ್ಟುಡಿಯೊಗಳಲ್ಲಿ ಚಿತ್ರೀಕರಣ ನಡೆಯಿತು. ಬೇರೆ ನಿರ್ಮಾಪಕರು ತಯಾರಿಸಿದ ಚಿತ್ರವನ್ನು ಡಿ.ಶಂಕರಸಿಂಗ್ ನಿರ್ದೇಶನ ಮಾಡಿದ್ದು ಈ ಚಿತ್ರದ ವಿಶೇಷ. ಶಂಕರಸಿಂಗ್'ರ ಪುತ್ರ ಸಂಗ್ರಾಮ್ ಸಿಂಗ್ ಈ ಚಿತ್ರದಲ್ಲಿ ಬಾಲನಟರಾಗಿ ಅಭಿನಯಿಸಿದರು. ರಾಜಾ ಸತ್ಯವ್ರತನು ಶನಿದೇವರನ್ನು ಜರಿದಾಗ, ಶನಿದೇವರುರಾಜನ ರಾಶಿ ಹೊಕ್ಕು, ಬಗೆಬಗೆಯ ಕಷ್ಟ ಕೋಟಲೆಗಳನ್ನು ನೀಡುವನು. ದೇವನಆರಾಧನೆಯ ನಂತರ ಕಷ್ಟನಿವಾರಣೆಯಾಗುವ ಕಥೆಯನ್ನು ಈ ಚಿತ್ರ ಹೊಂದಿದೆ.

## ನಿಮ್ಮ ಮಾತು

### ಪರಿಪೂರ್ಣ ಓದಿನ ಖುಷಿ ನೀಡಿತು

ಆ 23–2 9ರ ಕೆಂಧೂಳಿ ಪರಿಪೂರ್ಣ ಓದಿನ ಖುಷಿ ನೀಡಿತು ಅದರಲ್ಲೂ ಮಹಿಳೆಯ ತಲ್ಲಣ ವಿವರಿಸುವ ಲೇಖನ ಕನ್ನಡದ ಕವಿಗಳು ಅಹಲ್ಯೆಯ ಮನೋಭೂಮಿಕೆ ಯ ಕುರಿತು ನಡೆಸಿದ ಪ್ರಯೋಗಾತ್ಮಕ ರಚನೆಗಳ ವಿವರ ಗಮನಸೆಳೆಯಿತು.

● ಡಿ.ಎಂ. ನದಾಫ್ ಅಫಜಲಪುರ

### ಬೌದ್ಧಿಕ ಮಟ್ಟ ಹೆಚ್ಚಿಸುತ್ತದೆ

ಕೆಂಧೂಳಿ ಇತ್ತೀಚೆಗೆ ಅತ್ಯಂತ ಗುಣಮಟ್ಟವಾಗಿ ಬರುತ್ತಿದೆ. ಖ.23 ರ ಸಂಚಿಕೆಯಲ್ಲಿ ಒನ್ನೊಂದು ಲೇಖನಗಳು ತುಂಬಾ ಚನ್ನಾಗಿ ಮೂಡಿ ಬಂದಿವೆ ಡಿ.ಉಮಾಪತಿ ಅವರ ಲೇಖನ ನಿಜಕ್ಕೂ ಅರಿತವಾಗಿದೆ ಅವರ ಯೋಚನಾ ಲಹರಿಗೆ ನನ್ನದೊಂದು ಸಲಾಮ್. ಹಾಗೆಯೇ ಮುಖಪುಟ ಲೇಖನ ಡ್ರಗ್ಸ್ ಮಾಪಿಯಾ ಟೆರರಿಸಂ ಒಳ್ಳೆಯ ಮಾಹಿತಿಯಿಂದ ಕೂಡಿದೆ ಗಡಿಭಾಗಗಳಲ್ಲಿ ಏನೆಲ್ಲಾ ನಡೆಯುತ್ತದೆ ಎನ್ನುವುದಕ್ಕೆ ಈ ಲೇಖನ ಸಾಕ್ಷಿಯಾಗಿದೆ ಹಾಗೆಯೇ ಸನತ್ ಕುಮಾರ್ ಬೆಳಗಳಲಿ ಅವರ ಮತಾಂತರ ರಾಜಕೀಯ ಕೂಡ ಅರಿತವಾಗಿದೆ ಅತ್ಯಾಕರ್ಷಕ ಈ ಲೇಖನ ಒಂದು ಚಿಂತನಾಲಹರಿಯಂತಿದೆ ಒಟ್ಟಾರೆಯ ಲೇಖನಗಳು ಓದುಗರ ಬೌದ್ಧಿಕ ಮಟ್ಟ ಹೆಚ್ಚಿಸುತ್ತದೆ, ಹಾಗಾಗಿಯೇ ಪ್ರತಿವಾರವೂ ತಪ್ಪದೆ ಕೊಂಡು ಓದುತ್ತಿದ್ದೇನೆ.

● ಟಿ.ಪಿ.ಲಿಂಗರಾಜು ಶಿವಮೊಗ್ಗ





### ಪತ್ರಿಕೆ ಅಭಿಮಾನ ಮೂಡಿಸಿದೆ

ಈ ವಾರದ 'ಕೆಂಧೂಳಿ' ಓದಿದೆ.ನಿಮ್ಮ ಎಲ್ಲಾ ವರದಿಗಳು ಚೆನ್ನಾಗಿವೆ. ಪತ್ರಿಕೆಯ ಗುಣಮಟ್ಟ ಅಭಿಮಾನ ಮೂಡಿಸಿದೆ. ಒಂದು ಕಾಲದಲ್ಲಿ ಹೆಚ್ಚು ಓದುಗರನ್ನು ಸೆಳೆದಿದ್ದ ಲಂಕೇಶ್ ನ್ನು 'ಕೆಂಧೂಳಿ' ಪತ್ರಿಕೆ ನೆನಪಿಸುತ್ತದೆ!

● ಶ್ರೀಧರ್ ಡಿ.ರಾಮಚಂದ್ರಪ್ಪ
ತುರುವನೂರು

### ಪತ್ರಿಕೆ ಮತ್ತಷ್ಟು ಬೆಳಯಲಿ

ವಾರ ಪತ್ರಿಕೆ ಎನ್ನುವುದು ಒಂದು ತಿಳುವಳಿಕೆಯ ಸಂದೇಶ ಸಾರುವುದು ಮತ್ತು ಮನುಷ್ಯನ ಚಿಂತನಾ ಲಹರಿಯನ್ನು ಹೆಚ್ಚಿಸುವುದು ಎಂದುಕೊಂಡಿದ್ದೇನೆ.ಆದರೆ ಇತ್ತೀಚೆಗೆ ಬರುತ್ತಿರುವ ಪತ್ರಿಕೆಗಳನ್ನು ನೋಡಿ ನನಗೆ ತುಂಬಾ ನೋವುಂಟಾಗಿತ್ತು ಯಾಕೆಂದರೆ ಬರೀ ಅವರಿವರನ್ನು ಹೊಗಳಿಸಿ ಅಟ್ಟಕ್ಕೇರಿಸುವುದು .ಇಲ್ಲದಿದ್ದರೆ ಒಬ್ಬ ವ್ಯಕ್ತಿಯ ತೇಜೋವದೆ ಮಾಡುವುದು ಇಷ್ಟೆ ಪತ್ರಿಕೆಗಳ ಕೆಲಸವಾಗಿತ್ತು ಆದರೆ ಇತ್ತೀಚಗೆ ನಾನು ಐದು ವಾರಗಳಿಂದ ನಿಮ್ಮ ಪತ್ರಿಕೆಯನ್ನು ಕೊಂಡು ಓದುತ್ತಿದ್ದೇನೆ .ನನಗೆ ತುಂಬಾ ಸಂತೋಷವಾಯಿತು. ಒಂದು ವಾರ ಪತ್ರಿಕೆ ಹೇಗಿರಬೇಕು ಎನ್ನುವುದು ನಿಮ್ಮ ಪತ್ರಿಕೆಯಲ್ಲಿನ ಲೇಖನಗಳ ವಿಚಾರಗಳ ಹೂರಣವೇ ಹೇಳಿಬಿಟ್ಟಿತ್ತು.ಒನ್ನೊಂದು ಲೇಖನಗಳು ಅತ್ಯಂತ ಪ್ರಕರವಾಗಿ ಮೂಡಿಬರುತ್ತಿವೆ ಹಿರಿಯ ಪತ್ರಕರ್ತರು ಬರೆಯುತ್ತಿರುವ ಅವರ ವಿಚಾರಧಾರೆಗಳು ,ರಾಜಕೀಯ ವಿಶ್ಲೇಷಣೆಗಳು ಎಲ್ಲವೂ ಒಂದು ವೈಚಾರಿಕತೆಯ ತಳಹದಿಯ ಮೇಲೆ ಬರುತ್ತಿವೆ ಸಂತೋಷದ ವಿಷಯ ಪತ್ರಿಕೆ ಮತ್ತಷ್ಟು ಬೆಳೆಯಲಿ ಎಂದು ಹಾರೈಸುತ್ತೇನೆ.

● ಪ್ರಭಾವತಿ ಎಂ.ಕೆ. ತುಮಕೂರು

### ಚನ್ನಾಗಿ ಮೂಡಿಬರುತ್ತಿದೆ

ಮುಖಪುಟದ ಗಡಿ ಭಾಗಗಳಲ್ಲಿ ಡ್ರಗ್ಸ್ ಮಾಫಿಯಾ ಟೆರರಿಸಂ ಎನ್ನುವ ಲೇಖನ ನೋಡಿ ಎಂತಾ ದುರಾದೃಷ್ಟ ಎನಿಸಿತು ಗಡಿಭಾಗಗಳ ಈ ಪ್ರದೇಶದಲ್ಲಿ ಎಂತೆಂತಾ ಕೆಲಸಗಳು ನಡೆಯುತ್ತಿವೆ ಎನ್ನುವ ಮಾಹಿತಿ ತಿಳಿಯಿತು ಅದೇ ರೀತ ಡಿ ಉಮಾಪತಿ ಅವರು ಬರೆದಿರುವ ' ಜೈಲುಗಳಲ್ಲೂ ಜಾತಿ ಬೇದ– ಗಹಗಹಿಸಿರುವಮನುವಾದ' ಎನ್ನುವ ಲೇಖನ ನಿಜಕ್ಕು ಮನ ಕುಲುಕವಂತಿದೆ ಈ ದೇಶದಲ್ಲಿ ಎಂತೆಂಥಾ ಘಟನೆಗಳು ನಡೆಯುತ್ತಿವೆ ಈ ಜಾತಿ ವ್ಯವಸ್ಥೆ ಎನ್ನುವ ಕೆಟ್ಟ ಸಂಪ್ರದಾಯ ಅಲ್ಲಿಯೂ ಇದೆಯೇ ಎನ್ನುವುದು ಕೇಳಿ ಆತಂಕ ಮೂಡಿಸಿತು . ಒಟ್ಟಾರೆ ಪತ್ರಿಕೆಯ ಲೇಖನಗಳು ರಾಜಕೀಯ ವಿಶ್ಲೇಷಣೆಗಳು ಚನ್ನಾಗಿ ಬರುತ್ತಿವೆ. ಆದರೆ ಜಿಲ್ಲಾ ಸುದ್ದಿಗಳು ಹಾಕಿದರೆ ಒಳ್ಳೆಯದು ಎನಿಸುತ್ತದೆ ಯಾಕೆಂದರೆ ನನಗೆ ನಮ್ಮ ಜಿಲ್ಲೆಯ ರಾಜಕೀಯ ಅಥವಾ ಬೇರೆ ಅಭಿವೃದ್ಧಿ ಯಂತ ಸುದ್ದಿಗಳು ಇದ್ದರೆ ಮಾಹಿತಿ ನೀಡಿದಂತಾಗುತ್ತದೆ

● ಯಮುನಪ್ಪ ವೈ ಸುಣಗಾರ ವಿಜಯಪುರ

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

**KENDHOOLI** *Kannada Weekly*
ಸಂಪುಟ - 02 | ಸಂಚಿಕೆ - 59 | ಪುಟ - 16 | ರೂ. 16/- | ಡಿಸೆಂಬರ್ 30 ರಿಂದ ಜನವರಿ 06, 2022
kendhooli.com/e-paper/
MAG(2)Npp/49/2020-21

# ಕೆಂಧೂಳಿ

# 2022 CALENDAR

## JANUARY

| S | M | T | W | T | F | S |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## FEBRUARY

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | | | | | |

## MARCH

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## APRIL

| S | M | T | W | T | F | S |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## MAY

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## JUNE

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

## JULY

| S | M | T | W | T | F | S |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## AUGUST

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## SEPTEMBER

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## OCTOBER

| S | M | T | W | T | F | S |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## NOVEMBER

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

## DECEMBER

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

ಜನವರಿ 15 ಮಕರ ಸಂಕ್ರಾಂತಿ | ಜನವರಿ 26 ಗಣರಾಜ್ಯೋತ್ಸವ | ಮಾರ್ಚ್ 01 ಮಹಾ ಶಿವರಾತ್ರಿ
ಮಾರ್ಚ್ 17 ಹೋಳಿ ಹಬ್ಬ | ಏಪ್ರಿಲ್ 02 ಯುಗಾದಿ | ಏಪ್ರಿಲ್ 10 ಶ್ರೀ ರಾಮ ನವಮಿ
ಏಪ್ರಿಲ್ 14 ಡಾ|| ಅಂಬೇಡ್ಕರ್ ಜಯಂತಿ, ಮಹಾವೀರ ಜಯಂತಿ | ಏಪ್ರಿಲ್ 15 ಗುಡ್ ಫ್ರೈಡೇ
ಮೇ 01 ಕಾರ್ಮಿಕರ ದಿನಾಚರಣೆ | ಮೇ 03 ಬಸವ ಜಯಂತಿ, ರಂಜಾನ್ | ಜುಲೈ 10 ಬಕ್ರೀದ್
ಆಗಸ್ಟ್ 5 ವರಮಹಾಲಕ್ಷ್ಮೀ ವ್ರತ | ಆಗಸ್ಟ್ 9 ಮೊಹರಂ | ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ
ಆಗಸ್ಟ್ 19 ಕೃಷ್ಣ ಜನ್ಮಾಷ್ಟಮಿ | ಆಗಸ್ಟ್ 31 ಗಣೇಶ ಚತುರ್ಥಿ | ಸೆಪ್ಟೆಂಬರ್ 25 ಮಹಾಲಯ ಅಮಾವಾಸ್ಯೆ
ಅಕ್ಟೋಬರ್ 02 ಗಾಂಧಿ ಜಯಂತಿ | ಅಕ್ಟೋಬರ್ 04 ಆಯುಧ ಪೂಜಾ | ಅಕ್ಟೋಬರ್ 05 ವಿಜಯದಶಮಿ
ಅಕ್ಟೋಬರ್ 09 ಈದ್ ಮಿಲಾದ್, ವಾಲ್ಮೀಕಿ ಜಯಂತಿ | ಅಕ್ಟೋಬರ್ 24 ನರಕ ಚತುರ್ದಶಿ | ಅಕ್ಟೋಬರ್ 26 ಬಲಿಪಾಡ್ಯಮಿ | ನವೆಂಬರ್ 01 ಕನ್ನಡ ರಾಜ್ಯೋತ್ಸವ | ನವೆಂಬರ್ 11 ಕನಕದಾಸ ಜಯಂತಿ | ಡಿಸೆಂಬರ್ 25 ಕ್ರಿಸ್‌ಮಸ್

ಪತ್ರಿಕೆ ಕೊಂಡು ಓದಿ,
ಪತ್ರಿಕೆ ಬೆಳವಣಿಗೆಗೆ
ಚಂದಾದಾರರಾಗಿ ಸಹಕರಿಸಿ.

ಹೆಚ್ಚಿನ ಮಾಹಿತಿಗೆ
99006 33109 | 99161 91222

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act